ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜೂನ್ 4 ಶನಿವಾರ 2022

ಸಂಪುಟ: 43 | ಸಂಚಿಕೆ: 49 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ಪಠ್ಯಪುಸ್ತಕ ಪರಿಷ್ಕರಣಾ ಸಮಿತಿ ವಿಸರ್ಜನೆ

ಆಕ್ಷೇಪಾರ್ಹ ವಿಷಯಗಳು ಮತ್ತೆ ಪರಿಷ್ಕರಣೆ

- ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಘೋಷಣೆ
- ಸಮಾಜ ವಿಜ್ಞಾನ, ಕನ್ನಡ ಭಾಷಾ ವಿಜ್ಞಾನದಲ್ಲಿ ಅಲ್ಪ ಪರಿಷ್ಕರಣೆ
- ಮಹಾನ್ ವ್ಯಕ್ತಿಗಳ ಯಾವುದೇ ಪಠ್ಯ ಕೈಬಿಟ್ಟಿಲ್ಲ
- ವಿವಾದದ ಹಿನ್ನೆಲೆಯಲ್ಲಿ ವಿಶೇಷ ಸಭೆ ನಂತರ ಹೊರಬಿದ್ದ ಮಹತ್ವದ ನಿರ್ಧಾರ

ಬೆಂಗಳೂರು, ಜೂ.3– ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಸದ್ಯದ ಪಠ್ಯ ಪರಿಷ್ಕರಣಾ ಸಮಿತಿಯನ್ನು ವಿಸರ್ಜಿಸಿದ್ದಾರೆ. ಮಾತ್ರವಲ್ಲ, ಪಠ್ಯ ವಿವಾದ ವಿಚಾರವಾಗಿ ಸರ್ಕಾರ ಒಂದಷ್ಟು ಮಹತ್ವದ ನಿರ್ಣಯಗಳನ್ನೂ ಕೈಗೊಂಡಿದೆ.



ಶಾಲಾ ಪಠ್ಯಕ್ಕೆ ಸಂಬಂಧಿಸಿದಂತೆ ವಿವಾದ ಉಂಟಾಗಿರುವ ಹಿನ್ನೆಲೆಯಲ್ಲಿ ವಿಶೇಷ ಸಭೆ ನಂತರ ಈ ಬಗ್ಗೆ ಅಧಿಕೃತ ಪ್ರಕಟಣೆ ಹೊರಡಿಸಿರುವ ಮುಖ್ಯಮಂತ್ರಿಗಳು, ಶಾಲಾ ಶಿಕ್ಷಣದಲ್ಲಿ ಪಠ್ಯಕ್ರಮ ಮತ್ತು ಪಠ್ಯ ಪುಸ್ತಕಗಳನ್ನು ಕಾಲ ಕಾಲಕ್ಕೆ ತಕ್ಕಂತೆ ಪರಿಷ್ಕರಿಸಲಾಗುತ್ತದೆ. ರಾಜ್ಯದಲ್ಲಿ ಹಲವು ಬಾರಿ ಪಠ್ಯ ಪುಸ್ತಕಗಳನ್ನು ಪರಿಷ್ಕರಣೆ ಮಾಡಲಾಗಿದೆ. ಈ ಹಿಂದೆ ▶ 8ನೇ ಪುಟಕ್ಕೆ

ಸರ್ಕಾರ ಕೈಗೊಂಡಿರುವ ನಿರ್ಣಯಗಳು

- ▶ ಪ್ರಸ್ತುತ ಪಠ್ಯಪುಸ್ತಕ ಪರಿಷ್ಕರಣಾ ಸಮಿತಿಯ ಕಾರ್ಯ ಮುಗಿದಿರುವುದರಿಂದ ಸದರಿ ಪಠ್ಯಪುಸ್ತಕ ಪರಿಷ್ಕರಣಾ ಸಮಿತಿಯನ್ನು ವಿಸರ್ಜಿಸಲಾಗಿದೆ.
- ▶ ಪ್ರಸ್ತುತ ಪರಿಷ್ಕರಿಸಿರುವ ಪಠ್ಯಪುಸ್ತಕದಲ್ಲಿ ಯಾವುದಾದರೂ ಆಕ್ಷೇಪಾರ್ಹ ವಿಷಯಗಳಿದ್ದಲ್ಲಿ ಅವುಗಳನ್ನು ಮತ್ತೊಮ್ಮೆ ಪರಿಷ್ಕರಿಸುವ ಮುಕ್ತ ಮನಸ್ಸನ್ನು ಸರ್ಕಾರವು ಹೊಂದಿದೆ. ಈ ಹಿನ್ನೆಲೆಯಲ್ಲಿ ಮೇಲೆ ತಿಳಿಸಿದಂತೆ ಬಸವಣ್ಣನವರ ವಿಷಯಾಂಶಕ್ಕೆ ಸಂಬಂಧಿಸಿದಂತೆ ಸೂಕ್ತವಾಗಿ ಪರಿಷ್ಕರಿಸಲು ನಿರ್ಧಾರ ಮಾಡಲಾಗಿದೆ.
- ▶ ರಾಷ್ಟ್ರಕವಿ ಕುವೆಂಪುರವರ ನಾಡಗೀತೆಯನ್ನು ಆಕ್ಷೇಪಾರ್ಹವಾಗಿ ವಿಕೃತಿಗೊಳಿಸಿದ ಅಂಶವು ಪಠ್ಯಪುಸ್ತಕಗಳಲ್ಲಿ ಉಲ್ಲೇಖಗೊಳ್ಳದಿದ್ದರೂ, ಇದರ ಮೂಲ ಕವನ ಬರೆದ ವ್ಯಕ್ತಿಗಳ ಬಗ್ಗೆ ಕಾನೂನಾತ್ಮಕ ತನಿಖೆಯ ಕ್ರಮವನ್ನು ಸರ್ಕಾರವು ತೆಗೆದುಕೊಂಡಿದೆ.
- ▶ ಪ್ರೊ.ಬರಗೂರು ರಾಮಚಂದ್ರಪ್ಪರವರ ಅಧ್ಯಕ್ಷತೆಯ ಸಮಿತಿಯು ರಚಿಸಿದ ಕನ್ನಡ ಭಾಷಾ ಪಠ್ಯಪುಸ್ತಕಗಳಲ್ಲಿ ರಾಷ್ಟ್ರಕವಿ ಕುವೆಂಪುರವರ ಕುರಿತಾದ ಏಳು ಗದ್ಯ, ಪದ್ಯಗಳಿಗೆ ಸೀಮಿತವಾಗಿದ್ದನ್ನು, ಪ್ರಸ್ತುತ ಪರಿಷ್ಕರಣಾ ಸಮಿತಿ ರಚಿಸಿರುವ ಕನ್ನಡ ಭಾಷಾ ಪಠ್ಯಪುಸ್ತಕಗಳಲ್ಲಿ ಹತ್ತಕ್ಕೆ ಏರಿಸಲಾಗಿದೆ.
- ▶ ಪ್ರಸ್ತುತ ಪರಿಷ್ಕರಿಸಿರುವ ಪಠ್ಯಪುಸ್ತಕದಲ್ಲಿ ನಾಡಪ್ರಭು ಕೆಂಪೇಗೌಡರ ಕುರಿತಾದ ಪಾಠವನ್ನು ಹೊಸದಾಗಿ ಸೇರ್ಪಡೆ ಮಾಡಿದೆ.
- ▶ ಈ ಹಿಂದಿನ ಪಠ್ಯಪುಸ್ತಕಗಳಲ್ಲಿ ಪರಿಚಯಿಸಲಾಗಿದ್ದ ಇಸ್ಲಾಂ ಮತ್ತು ಕ್ರೈಸ್ತ ಧರ್ಮದ ಜೊತೆ ಹಿಂದೂ ಧರ್ಮದ ವಿಷಯವನ್ನೂ ಸೇರ್ಪಡೆ ಮಾಡಿ ಪರಿಚಯಿಸಲಾಗಿದೆ.

ರಾಜ್ಯಸಭೆ ಚುನಾವಣೆ: 4 ಸ್ಥಾನಕ್ಕೆ 6 ಮಂದಿ ಸ್ಪರ್ಧೆ


ನಂಬರ್ ಗೇಮ್ ಸ್ಟಾರ್ಟ್



ನಿರ್ಮಲಾ ಸೀತಾರಾಮನ್



ಜಗ್ಗೇಶ್



ಜಯರಾಂ ರಮೇಶ್

ಬೆಂಗಳೂರು, ಜೂ. 3–ರಾಜ್ಯ ವಿಧಾನಸಭೆಯಿಂದ ರಾಜ್ಯಸಭೆಯ 4 ಸ್ಥಾನಗಳಿಗೆ ಜೂ.10ರಂದು ನಡೆಯಲಿರುವ ಚುನಾವಣೆಗೆ 6 ಅಭ್ಯರ್ಥಿಗಳು ಅಂತಿಮ ಕಣದಲ್ಲಿದ್ದಾರೆ.

ನಾಮಪತ್ರ ಹಿಂಪಡೆಯಲು ಕೊನೆಯ ದಿನವಾದ ಇಂದು ಯಾವೊಬ್ಬ ಅಭ್ಯರ್ಥಿಯು ನಾಮಪತ್ರ ಹಿಂಪಡೆಯದ ಕಾರಣ 4ನೇ ಸ್ಥಾನಕ್ಕೆ ಕಾಂಗ್ರೆಸ್, ಬಿಜೆಪಿ ಮತ್ತು ಜೆಡಿಎಸ್ ನಡುವೆ ತೀವ್ರ ಹಣಾಹಣಿ ಏರ್ಪಟ್ಟಿದ್ದು, ಕುತೂಹಲಕ್ಕೆ ಎಡೆಮಾಡಿದೆ.

ವಿಧಾನಸಭಾ ಸದಸ್ಯರ ಸಂಖ್ಯಾ ಬಲದ ಆಧಾರದ ಮೇರೆಗೆ ಬಿಜೆಪಿ 2 ಹಾಗೂ ಕಾಂಗ್ರೆಸ್ 1 ಸ್ಥಾನವನ್ನು ಪ್ರಥಮ ಪ್ರಾಶಸ್ತ್ಯ ಮತದಲ್ಲೇ ಗೆಲ್ಲಬಹುದಾಗಿದ್ದು, 4ನೇ ಸ್ಥಾನ ಗೆಲ್ಲಲು ಯಾವುದೇ ಪಕ್ಷವೂ ಸಂಖ್ಯಾಬಲ ಹೊಂದಿಲ್ಲವಾದರೂ ಮೂರು ಪಕ್ಷಗಳು ಪ್ರತಿಷ್ಠೆಗೆ ಬಿದ್ದು ತಮ್ಮ ಅಭ್ಯರ್ಥಿಗಳನ್ನು ಕಣಕ್ಕಿಳಿಸಿವೆ.

4ನೇ ಅಭ್ಯರ್ಥಿ ಪ್ರಥಮ ಪ್ರಾಶಸ್ತ್ಯ ಮತದಲ್ಲೇ ಗೆಲ್ಲಬೇಕಾದರೆ ಕಾಂಗ್ರೆಸ್ ಮತ್ತು ಬಿಜೆಪಿ, ಜೆಡಿಎಸ್ ಶಾಸಕರನ್ನು ಸೆಳೆಯಬೇಕಾಗುತ್ತದೆ. ಒಂದು ವೇಳೆ ಈ ಕೆಲಸ ವಿಫಲವಾದರೆ 2ನೇ ಪ್ರಾಶಸ್ತ್ಯ ಮತದಲ್ಲಿ ಬಿಜೆಪಿಗೆ 4ನೇ ಸ್ಥಾನ ಒಲಿಯಲಿದೆ ಎಂದು ರಾಜಕೀಯ ಪಂಡಿತರು ಹೇಳುತ್ತಿದ್ದಾರೆ. ತನ್ನ ಅಭ್ಯರ್ಥಿ ಗೆಲುವು ಅಸಾಧ್ಯವೆಂದು ಜೆಡಿಎಸ್ ಮುಖಂಡರು ಭಾವಿಸಿದಂತಿದೆ. ಅಭ್ಯರ್ಥಿ ಗೆಲ್ಲದೆ ಇದ್ದರೂ ಪರವಾಗಿಲ್ಲ ತಮ್ಮ ಶಾಸಕರು ಅಡ್ಡ ಮತದಾನ ಮಾಡದಂತೆ ತಡೆಯುವ ನಿಟ್ಟಿನಲ್ಲಿ ಜೆಡಿಎಸ್ ನಿಗಾ ವಹಿಸಿದೆ ಎಂದು ಹೇಳಲಾಗಿದೆ.

ಸಂಖ್ಯಾ ಬಲವಿಲ್ಲದಿದ್ದರೂ 4ನೇ ಸ್ಥಾನಕ್ಕೆ ಅಭ್ಯರ್ಥಿಯನ್ನು ಕಣಕ್ಕಿಳಿಸಿರುವ ಕಾಂಗ್ರೆಸ್ ಮತ್ತು ಬಿಜೆಪಿ ಬೇರೆ ಪಕ್ಷಗಳ ಶಾಸಕರನ್ನು ಸೆಳೆಯುವ ನಿಟ್ಟಿನಲ್ಲಿ ಕಾರ್ಯತಂತ್ರ ▶ 8ನೇ ಪುಟಕ್ಕೆ


> ರಾಜ್ಯಸಭಾ ಚುನಾವಣೆ ಫಲಿತಾಂಶದ ನಂತರ ಎಲ್ಲಾ ವಿಚಾರಗಳನ್ನು ಮಾತನಾಡುತ್ತೇನೆ. ಯಾವ ಪಕ್ಷದ ನಾಯಕರ ಜೊತೆಯೂ ರಾಜ್ಯಸಭಾ ಚುನಾವಣೆ ಬಗ್ಗೆ ಚರ್ಚೆ ಮಾಡಲು ನಾನು ತಿಳಿಸಿರಲಿಲ್ಲ. ಯಾರೊಂದಿಗೂ ಈ ಬಗ್ಗೆ ಚರ್ಚೆ ಮಾಡುವುದು ಬೇಡ ಎಂದೇ ಹೇಳಿದ್ದೇನೆ. ನನ್ನನ್ನು ಮುಖ್ಯಮಂತ್ರಿ ಮಾಡಿದ್ದು ಕಾಂಗ್ರೆಸ್‌ನವರೇ, ಜೆಡಿಎಸ್ ಅನ್ನು ನಾಶ ಮಾಡಲು ಹೊರಟಿದ್ದೂ ಅವರೇ, ನನಗೆ ಕೆಟ್ಟ ಹೆಸರು ತರಲು ಪ್ರಯತ್ನಿಸಿದ್ದೂ ಕೂಡ ಅವರೇ. ಒಂದು ಕಲ್ಲಲ್ಲಿ ಅದೆಷ್ಟೋ ಹಕ್ಕಿ ಹೊಡೆದಿದ್ದಾರಂತೆ. ಫಲಿತಾಂಶ ಬಂದ ನಂತರ ಎಷ್ಟು ಹಕ್ಕಿ ಹೊಡೆದಿದ್ದಾರೆ ಎಂಬುದು ಗೊತ್ತಾಗುತ್ತದೆ.
>
> –ಕೆಂಪೇಗೌಡ ವಿಮಾನ ನಿಲ್ದಾಣದಲ್ಲಿ ಹೆಚ್.ಡಿ.ಕುಮಾರಸ್ವಾಮಿ ಹೇಳಿಕೆ



ಲೆಹರ್ ಸಿಂಗ್



ಮನ್ಸೂರ್ ಅಲಿ



ಕುಪೇಂದ್ರ ರೆಡ್ಡಿ



ಮೂಲಮಂದಿರ ಚಲೋ ಜಾಥಾ ಹಿನ್ನೆಲೆ

ಶ್ರೀರಂಗಪಟ್ಟಣದಲ್ಲಿ ಪೊಲೀಸರ ಸರ್ಪಗಾವಲು

ಶ್ರೀರಂಗಪಟ್ಟಣ, ಜೂ.3(ವಿನಯ್ ಕಾರೇಕುರ)– ಶ್ರೀರಂಗಪಟ್ಟಣದ ಕುವೆಂಪು ವೃತ್ತದಿಂದ ಜಾಮಿಯಾ ಮಸೀದಿಗೆ 'ಮೂಲ ಮಂದಿರ ಚಲೋ' ಹೆಸರಿನಲ್ಲಿ ಜಾಥಾ ನಡೆಸಿ, ಅಲ್ಲಿರುವ ಹಿಂದೂ ದೇವರಿಗೆ ಪೂಜೆ ಸಲ್ಲಿಸುವುದಾಗಿ ವಿಶ್ವ ಹಿಂದೂ ಪರಿಷತ್, ಭಜರಂಗದಳ ಮುಖಂಡರು ಘೋಷಿಸಿದ್ದ ಹಿನ್ನೆಲೆಯಲ್ಲಿ ಶ್ರೀರಂಗ ಪಟ್ಟಣದಲ್ಲಿ ಇಂದು(ಜೂ.3) ಸಂಜೆ 6 ರಿಂದ ಜೂ.5ರಂದು ಮಧ್ಯಾಹ್ನ 12 ಗಂಟೆವರೆಗೆ ನಿಷೇಧಾಜ್ಞೆ ಘೋಷಿಸಲಾಗಿದ್ದು, ಪಟ್ಟಣದಾದ್ಯಂತ ಬಿಗಿ ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗಿದೆ.

ಬಂದೋಬಸ್ತ್ ಉಸ್ತುವಾರಿಯನ್ನು ಸ್ವತಃ ಮಂಡ್ಯ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಯತೀಶ್ ಅವರೇ ವಹಿಸಿದ್ದು, ನಾಲ್ವರು ಡಿವೈಎಸ್ಪಿ, 10 ಮಂದಿ ಇನ್ಸ್‌ಪೆಕ್ಟರ್, 25 ಮಂದಿ ಸಬ್ ಇನ್ಸ್‌ಪೆಕ್ಟರ್ ಹಾಗೂ 250 ಮಂದಿ ಸಿವಿಲ್ ಪೊಲೀಸ್ ಸಿಬ್ಬಂದಿ, 2 ಕೆಎಸ್‌ಆರ್‌ಪಿ ತುಕಡಿ, 5 ಡಿಎಆರ್ ತುಕಡಿ, 1 ಕ್ಯೂಆರ್‌ಟಿ ಫೋರ್ಸ್ ನಿಯೋಜಿಸಿ ಶ್ರೀರಂಗಪಟ್ಟಣದಲ್ಲಿ ಭಾರೀ ಬಿಗಿ ಭದ್ರತೆ ಕೈಗೊಳ್ಳಲಾಗಿದೆ. ಜಾಮಿಯಾ ಮಸೀದಿಗೆ ಸಂಪರ್ಕ ಕಲ್ಪಿಸುವ ಎಲ್ಲಾ ರಸ್ತೆಗಳಲ್ಲಿ ಸಿಸಿ ಕ್ಯಾಮರಾ ಅಳವಡಿಸಿ ಕಣ್ಗಾವಲು ಹಾಕಲಾಗಿದೆ. ಜೊತೆಗೆ ಪೊಲೀಸರು ಕೂಡ ವಿಡಿಯೋ ಚಿತ್ರೀಕರಣ ಮಾಡಲಿದ್ದಾರೆ. ಶುಕ್ರವಾರ ಎಸ್ಪಿ ಯತೀಶ್, ಡಿವೈಎಸ್ಪಿ ಸಂದೇಶ್ ಕುಮಾರ್ ನೇತೃತ್ವದಲ್ಲಿ ಪಟ್ಟಣದ ಪ್ರಮುಖ ಬೀದಿಗಳು ಹಾಗೂ ಸೂಕ್ಷ್ಮ ಪ್ರದೇಶಗಳಲ್ಲಿ ▶ 8ನೇ ಪುಟಕ್ಕೆ

> ▶▶ ಜಾಮಿಯಾ ಮಸೀದಿ ವಿಚಾರವಾಗಿ ವಿಚಾರವಂತರು, ಚರಿತ್ರೆ ಅಧ್ಯಯನ ಮಾಡಿದವರ ಸಲಹೆ ಅಗತ್ಯ. ಯಾವುದೇ ವಿಚಾರದಲ್ಲಿ ನ್ಯಾಯಾಂಗ ತನಿಖೆ ಬಳಿಕ ಸತ್ಯಾಂಶ ಬೆಳಕಿಗೆ ಬರಲಿದೆ. ಹೀಗಾಗಿ ಸಾರ್ವಜನಿಕರು ಕಾನೂನನ್ನು ಕೈ ತೆಗೆದುಕೊಳ್ಳಬಾರದು. ಪಟ್ಟಣದಲ್ಲಿ ಶಾಂತಿ ಸುವ್ಯವಸ್ಥೆ ಕಾಪಾಡಬೇಕಿದೆ.
>
> – ರವೀಂದ್ರ ಶ್ರೀಕಂಠಯ್ಯ, ಶಾಸಕರು.

ಮಂಡ್ಯದ ಹೆಲ್ತ್‌ಕೇರ್‌ಗೆ ಪ.ಬಂಗಾಳ ಕಂಪನಿಯಿಂದ 1.5 ಕೋಟಿ ವಂಚನೆ

ಮಂಡ್ಯ, ಜೂ.3– ವೈದ್ಯಕೀಯ ಉಪಕರಣಗಳನ್ನು ಪೂರೈಸುವುದಾಗಿ ನಂಬಿಸಿದ ಪಶ್ಚಿಮ ಬಂಗಾಳದ ಕಂಪನಿಯೊಂದು ಮಂಡ್ಯದ ಆಸ್ಪತ್ರೆಯೊಂದಕ್ಕೆ 1.50 ಕೋಟಿ ರೂ. ವಂಚಿಸಿರುವ ಬಗ್ಗೆ ವರದಿಯಾಗಿದೆ.

ಮಂಡ್ಯದ ವಿದ್ಯಾನಗರದಲ್ಲಿರುವ ಉನ್ನತಿ ಗ್ಲೋಬಲ್ ಹೆಲ್ತ್‌ಕೇರ್ ಸೆಂಟರ್ ಮ್ಯಾನೇಜಿಂಗ್ ಡೈರೆಕ್ಟರ್ ಡಾ.ಸತೀಶ್ ಈ ಸಂಬಂಧ ಮಂಡ್ಯ ಪಶ್ಚಿಮ ಠಾಣೆಯಲ್ಲಿ ದೂರು ದಾಖಲಿಸಿದ್ದು, ತಮ್ಮ ಆಸ್ಪತ್ರೆಗೆ ಪಶ್ಚಿಮ ಬಂಗಾಳದ ಎಲೆಸೋನಿಕ್ ಹೆಲ್ತ್‌ಕೇರ್ ಪ್ರೈವೇಟ್ ಲಿಮಿಟೆಡ್‌ನ ಛೇರ್ಮನ್ ಮತ್ತು ನಿರ್ದೇಶಕರು 1.50 ಕೋಟಿ ವಂಚನೆ ಮಾಡಿದ್ದಾರೆ ಎಂದು ಆರೋಪಿಸಿದ್ದಾರೆ.

ವಿವರ: ಮಂಡ್ಯದ ಉನ್ನತಿ ಗ್ಲೋಬಲ್ ಹೆಲ್ತ್‌ಕೇರ್‌ಗೆ ಸಿಟಿ ಸ್ಕ್ಯಾನ್ ಮತ್ತು ಎಂಆರ್‌ಐ ಯಂತ್ರಗಳನ್ನು ಖರೀದಿಸಲು ಎಲೆಸೋನಿಕ್ ಹೆಲ್ತ್‌ಕೇರ್ ಪ್ರೈವೇಟ್ ಲಿಮಿಟೆಡ್ ಜೊತೆ ಮಾತುಕತೆಯಾಗಿದೆ. ಈ ವೇಳೆ ಆ ಕಂಪನಿಯವರು ವೈದ್ಯಕೀಯ ಉಪಕರಣಗಳನ್ನು ಸರಬರಾಜು ಮಾಡುವುದಾಗಿ ಒಪ್ಪಿಕೊಂಡು ಅದಕ್ಕೆ 3.36 ಕೋಟಿ ರೂ. ದರ ನಿಗದಿ ಪಡಿಸಿ 50 ಲಕ್ಷ ರೂ. ಮುಂಗಡ ಪಾವತಿಸಬೇಕೆಂದು ಕೇಳಿದ್ದಾರೆ. ಅದರಂತೆ 2021ರ ಆಗಸ್ಟ್ 4ರಂದು ಪಶ್ಚಿಮ ಬಂಗಾಳ ಕಂಪನಿಯು ಮಂಡ್ಯದ ಆಸ್ಪತ್ರೆ ಜೊತೆ ಕರಾರು ಮಾಡಿಕೊಂಡು 50 ಲಕ್ಷ ರೂ.ಗಳನ್ನು ಪಡೆದಿದೆ ಎಂದು ▶ 8ನೇ ಪುಟಕ್ಕೆ

ಪ್ರಧಾನಿ ಮೋದಿ ಸ್ವಾಗತಕ್ಕೆ ಅಂದಗೊಳ್ಳುತ್ತಿದೆ ಅರಮನೆ ಆವರಣ

- ಅರಮನೆಯ ಉದ್ಯಾನಗಳಲ್ಲಿ ಬೆಳೆದಿದ್ದ ಕಳೆ ತೆರವು
- ಸುಗಮ ಯೋಗಕ್ಕೆ ಸಹಕಾರಿಯಾಗಿ ಹುಲ್ಲು ಸಮತಟ್ಟು
- ರಸ್ತೆ ಇಕ್ಕೆಲದ ತಡೆಗೋಡೆಗೆ ಸುಣ್ಣ–ಬಣ್ಣದ ಶೃಂಗಾರ

• ಎಂ.ಟಿ.ಯೋಗೇಶ್ ಕುಮಾರ್

ಮೈಸೂರು, ಜೂ. 3 – ಅಂತರರಾಷ್ಟ್ರೀಯ ಯೋಗ ದಿನಾಚರಣೆಗೆ ಮೈಸೂರು ಅರಮನೆ ಆವರಣ ಶೃಂಗಾರಗೊಳ್ಳುತ್ತಿದೆ. ಇಲ್ಲಿ ಸಾಮೂಹಿಕ ಯೋಗ ಪ್ರದರ್ಶನದಲ್ಲಿ ಪ್ರಧಾನಿ ನರೇಂದ್ರ ಮೋದಿ ಪಾಲ್ಗೊಳ್ಳಲಿದ್ದು, ಈ ಹಿನ್ನೆಲೆಯಲ್ಲಿ ಅರಮನೆ ಅಂದ ಇಮ್ಮಡಿಗೊಳಿಸುವ ಕಾರ್ಯ ಆರಂಭವಾಗಿದೆ.



ಪ್ರಧಾನಿ ಮೋದಿ

ನಾಡಹಬ್ಬ ದಸರಾ ಮಹೋತ್ಸವ, ಹೊಸ ವರ್ಷದ ಸಂಭ್ರಮಾಚರಣೆಗೆ ಅರಮನೆಯ ಆವರಣದ ಪಾರ್ಕ್‌ಗಳು ನಳನಳಿಸುತ್ತಿದ್ದವು. ಉಳಿದ ದಿನಗಳಲ್ಲಿ ಪಾರ್ಕ್ ನಿರ್ವಹಣೆಗೆ ಹೆಚ್ಚಿನ ಗಮನ ನೀಡುತ್ತಿರಲಿಲ್ಲ. ಕಳೆದ ನಾಲ್ಕು ತಿಂಗಳಿಂದ ಇಲ್ಲಿ ಯಾವುದೇ ಚಟುವಟಿಕೆಗಳಿಲ್ಲ. ಹಾಗಾಗಿ ಹುಲ್ಲು ಬೆಳೆದುಕೊಂಡಿದ್ದ ಅರಮನೆಯ ಉದ್ಯಾನವನಗಳು ಈಗ ಕಳೆ ಕಟ್ಟಲಾರಂಭಿಸಿವೆ. ಜೂ.21ರಂದು ಮೈಸೂರಲ್ಲಿ ನಡೆಯುವ ಅಂತರರಾಷ್ಟ್ರೀಯ ಯೋಗ ದಿನದ ಕಾರ್ಯಕ್ರಮದಲ್ಲಿ ಪ್ರಧಾನಿ ನರೇಂದ್ರ ಮೋದಿ ಪಾಲ್ಗೊಳ್ಳುತ್ತಿರುವುದರಿಂದ ಅರಮನೆ ಆವರಣದಲ್ಲಿ ಪೂರ್ವ ತಯಾರಿಗೆ ಭರದ ಸಿದ್ಧತೆ ನಡೆದಿದೆ.

ಅರಮನೆ ಆಡಳಿತ ಮಂಡಳಿಯಿಂದ ಉದ್ಯಾನವನದಲ್ಲಿ ಸ್ವಚ್ಛತೆ, ಅಲಂಕಾರ ಹಾಗೂ ರಸ್ತೆಗಳ ಇಕ್ಕೆಲಗಳಲ್ಲಿ ಬಣ್ಣ ಬಳಿಯುವ ಕಾರ್ಯ ಬಿರುಸಿನಿಂದ ಸಾಗಿದೆ. ಜಂಬೂಸವಾರಿಯಂದು ಚಿನ್ನದ ಅಂಬಾರಿಗೆ ಪುಷ್ಪಾರ್ಚನೆ ಮಾಡುವ ಸ್ಥಳದ ಮುಂಭಾಗವಿರುವ ಉದ್ಯಾನದಲ್ಲಿ ಬೆಳೆದಿದ್ದ ಕಳೆಯನ್ನು ತೆರವುಗೊಳಿಸಲಾಗುತ್ತಿದೆ. ನಂತರ ಉದ್ಯಾನ, ಹೂವಿನ ಕುಂಡ ಹಾಗೂ ಅಲಂಕಾರಿಕ ಗಿಡಗಳಿಂದ ಶೃಂಗಾರಗೊಳ್ಳಲಿದೆ. ಅರಮನೆ ಮುಂಭಾಗದ ಪ್ರಾಂಗಣದಿಂದ ಜಯಮಾರ್ತಾಂಡ ದ್ವಾರದವರೆಗಿನ ಎರಡು ಬದಿಯ ಉದ್ಯಾನದಲ್ಲಿ ಕಳೆ ಗಿಡ ತೆಗೆದು, ಯೋಗ ಪ್ರದರ್ಶನಕ್ಕೂ ▶ 8ನೇ ಪುಟಕ್ಕೆ



ಅಂತರರಾಷ್ಟ್ರೀಯ ಯೋಗ ದಿನದ ಕಾರ್ಯಕ್ರಮದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಪಾಲ್ಗೊಳ್ಳುವುದರಿಂದ ಅರಮನೆ ಆವರಣದಲ್ಲಿ ಸಿದ್ಧತೆ ಭರದಿಂದ ಸಾಗುತ್ತಿದ್ದು, ಉದ್ಯಾನವನದಲ್ಲಿ ಕಳೆ ಗಿಡ ತೆಗೆಯಲಾಗುತ್ತಿದೆ.

ಸರಗಳ್ಳರ ಬೆನ್ನತ್ತಿ ಹಿಡಿದ ಸಾಹಸಿಗೆ ಪ್ರಶಂಸಾಪತ್ರ



ಮೈಸೂರು, ಜೂ.3(ಆರ್‌ಕೆ)– ತನ್ನ ಸರ ಕದಿಯಲೆತ್ನಿಸಿದ ದುಷ್ಕರ್ಮಿಯ ಧೈರ್ಯದಿಂದ ಬೆನ್ನತ್ತಿ ಹಿಡಿದು, ಸಾಹಸ ಮೆರೆದ ಯುವತಿಯನ್ನು ಮೈಸೂರು ನಗರ ಪೊಲೀಸ್ ಆಯುಕ್ತರು ಪ್ರಶಂಸಿಸಿದರು. ಮೈಸೂರಿನ ವಿದ್ಯಾರಣ್ಯಪುರಂ 4ನೇ ಮೇನ್, 5ನೇ ಕ್ರಾಸ್ ನಿವಾಸಿ ಶ್ರೀಕಾಂತ್ ಅವರ ಪುತ್ರಿ 21 ವರ್ಷದ ಕು. ಸೌಮ್ಯಾ ಶ್ರೀಕಾಂತ್ ಆ ಸಾಹಸಿ ಯುವತಿಯಾಗಿದ್ದು, ಚಾಮುಂಡಿಬೆಟ್ಟ ತಪ್ಪಲಿನ ಸಿಎಆರ್ ಮೈದಾನದಲ್ಲಿ ಇಂದು ನಡೆದ ವಿಶೇಷ ಪರೇಡ್‌ನಲ್ಲಿ ಸುಮಾರು 700 ಮಂದಿ ಪೊಲೀಸರ ಸಮ್ಮುಖದಲ್ಲಿ ಆಯುಕ್ತರು ಆಕೆಗೆ ಪ್ರಶಂಸಾ ಪತ್ರ ಪ್ರದಾನ ಮಾಡಿದರು.

2022ರ ಜನವರಿ 9ರಂದು ಬೆಳಗ್ಗೆ 7.15 ಗಂಟೆಯಲ್ಲಿ ವಿದ್ಯಾರಣ್ಯಪುರಂ ಜೆಎಲ್‌ಬಿ ರಸ್ತೆಯ ಅಪೂರ್ವ ಹೋಟೆಲ್ ಸಮೀಪ ರೇಷ್ಮೆ ಇಲಾಖೆ ಅತಿಥಿಗೃಹದ ಮುಂದೆ ವಾಯುವಿಹಾರಕ್ಕೆ ತೆರಳಿದ್ದ ಸೌಮ್ಯರನ್ನು ಕಾರಿನಲ್ಲಿ ಹಿಂಬಾಲಿಸಿದ ದುಷ್ಕರ್ಮಿಗಳು, ಅವರ ಚಿನ್ನದ ಸರ ಕಿತ್ತು ಕೊಂಡು ಪರಾರಿಯಾಗಲೆತ್ನಿಸಿದ್ದರು.

ತಕ್ಷಣ ಎಚ್ಚೆತ್ತ ಯುವತಿ, ಆ ಅನಿರೀಕ್ಷಿತ ಘಟನೆಯಿಂದ ವಿಚಲಿತರಾಗದೇ ತೀವ್ರ ಪ್ರತಿರೋಧವೊಡ್ಡಿ, ಕೊನೆಗೆ ಬೆನ್ನತ್ತಿ ನಾಲ್ವರು ಆರೋಪಿಗಳನ್ನು ಸಾರ್ವಜನಿಕರ ಸಹಾಯದಿಂದ ಹಿಡಿದು ಪೊಲೀಸರಿಗೆ ಒಪ್ಪಿಸುವಲ್ಲಿ ಸಾಹಸ ಮೆರೆದಿದ್ದಳು. ಆಕೆ ತೋರಿದ ಧೈರ್ಯ, ಸಾಹಸ ಮಹಿಳೆಯರಿಗೆ ಮಾದರಿ ಯಾಗಿದ್ದು, ಅವರ ಸಮಯೋಚಿತ ವರ್ತನೆಗೆ ಅಭಿನಂದನೆ ಸಲ್ಲಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಪೊಲೀಸ್ ಆಯುಕ್ತರು, ಹೊರಗೆ ಓಡಾಡುವಾಗ ಎಚ್ಚರಿಕೆ ಯಿಂದಿದ್ದು, ತಮ್ಮ ಸುತ್ತಲ ವ್ಯಕ್ತಿಗಳ ಮೇಲೆ ನಿಗಾ ಇರಿಸಬೇಕು. ಒಂದು ವೇಳೆ ಸರ ಅಪಹರಣ ಗಳಂತಹ ಅಪರಾಧ ಕೃತ್ಯಕ್ಕೆ ಯತ್ನಿಸಿದಲ್ಲಿ ಪ್ರತಿರೋಧವೊಡ್ಡಿ ಧೈರ್ಯದಿಂದ ಹೋರಾಡಬೇಕು. ಜೊತೆಗೆ ಸಾರ್ವಜನಿಕರೂ ಕ್ರಿಮಿನಲ್‌ಗಳ ಸೆರೆಗೆ ಕೈಜೋಡಿಸಬೇಕು ಎಂದು ಮನವಿ ಮಾಡಿದರು. ಸಾರ್ವಜನಿಕರು ಎಚ್ಚೆತ್ತು ಧೈರ್ಯ ಪ್ರದರ್ಶಿಸಿದರೆ ದುಷ್ಕರ್ಮಿಗಳು ಅಪರಾಧ ಕೃತ್ಯ ಎಸಗಲು ಹಿಂಜರಿಯುತ್ತಾರೆ. ಆಗ ಅಪರಾಧ ಪ್ರಕರಣಗಳು ನಿಯಂತ್ರಣಕ್ಕೆ ಬರುತ್ತವೆ. ಪೊಲೀಸರೊಂದಿಗೆ ಸಾರ್ವಜನಿಕರು ಸಹಕರಿಸುವುದರಿಂದ ಅಪರಾಧಗಳ ತಡೆಗೆ ಹೆಚ್ಚಿನ ಅನುಕೂಲವಾಗಲಿದೆ ಎಂದರು.

ಮೈಸೂರಲ್ಲಿ ನಾಲ್ವಡಿಗೆ ನಮನ



ಮೈಸೂರು,ಜೂ. 3(ಎಂಟಿವೈ)– ಮೈಸೂರು ರಾಜವಂಶಸ್ಥರ ಆಳ್ವಿಕೆಯಲ್ಲಿ ಹಲವು ಮಹತ್ತರ ಯೋಜನೆಗಳನ್ನು ರೂಪಿಸಿ ಮನೆಮಾತಾಗಿರುವ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಜನ್ಮದಿನವನ್ನು ಕರ್ನಾಟಕ ಸೇನಾ ಪಡೆಯ ಕಾರ್ಯಕರ್ತರು ಆಚರಿಸಿ, ಗೌರವ ಸಮರ್ಪಿಸಿದರು.

ಮೈಸೂರು ಅರಮನೆಯ ದಕ್ಷಿಣ ದ್ವಾರ, ವರಾಹ ಗೇಟ್ ಬಳಿ ನಾಲ್ವಡಿ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸುವ ಮೂಲಕ ಅವರ ಕೊಡುಗೆ ಸ್ಮರಣೆ ಮಾಡಿದರು.

ಕಾರ್ಯಕ್ರಮದಲ್ಲಿ ಸಮಾಜ ಸೇವಕ ರಘುರಾಂ ಕೆ.ವಾಜಪೇಯಿ ಮಾತನಾಡಿ, ಚಿಕ್ಕ ವಯಸ್ಸಿನಲ್ಲೇ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಅಧಿಕಾರ ವಹಿಸಿಕೊಂಡು ಜನಪರ ಯೋಜನೆ ರೂಪಿಸಿ, ಮನೆ ಮಾತಾದರು. ವಿಜಯನಗರ ಸಾಮ್ರಾಜ್ಯದ ಶ್ರೀ ಕೃಷ್ಣದೇವರಾಯರ ಆಡಳಿತದಂತೆ ಈ ಭಾಗದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರು ಮಹಾತ್ಮ ಗಾಂಧೀಜಿ ಕನಸು ಕಂಡಿದ್ದ ರಾಮರಾಜ್ಯವನ್ನೇ ನಿರ್ಮಿಸಿದ್ದರು. ಶಿಕ್ಷಣಕ್ಕೆ ಹೆಚ್ಚಿನ ಒತ್ತು ನೀಡಿ ಹಿಂದುಳಿದ ವರ್ಗಗಳು, ದಲಿತರು, ವಿಶೇಷವಾಗಿ ಮಹಿಳೆಯರಿಗೆ ಶಿಕ್ಷಣದಲ್ಲಿ ಆದ್ಯತೆ ನೀಡಿದರು ಎಂದರು.

ಕರ್ನಾಟಕ ರಾಜ್ಯ ಒಕ್ಕಲಿಗರ ಸಂಘದ ಕಾರ್ಯಾಧ್ಯಕ್ಷ ಸಿ.ಜಿ.ಗಂಗಾಧರ್ ಮಾತನಾಡಿ, ನಾಲ್ವಡಿ ಮೈಸೂರಿನ ಮಹಾಶಿಲ್ಪಿ. ಹಿಂದುಳಿದವರು, ಮಹಿಳೆಯರು ಹಾಗೂ ದಲಿತರಿಗೆ ಶಿಕ್ಷಣ ಕಲ್ಪಿಸಿದ ಪ್ರಥಮ ದೊರೆ ಕೃಷ್ಣರಾಜ ಒಡೆಯರ್. ಮೈಸೂರು ಕೈಗಾರಿಕೆಗಳ ಜನಕ, ರಾಷ್ಟ್ರಪಿತ ಮಹಾತ್ಮ ಗಾಂಧಿಯವರಿಂದ ರಾಜರ್ಷಿ ಬಿರುದನ್ನು ಪಡೆದು, ಮೈಸೂರು ವಿಶ್ವವಿದ್ಯಾನಿಲಯ, ಕನ್ನಂಬಾಡಿ ಕಟ್ಟೆ ಶಿವನಸಮುದ್ರ ವಿದ್ಯುತ್ ಘಟಕವನ್ನು ಸ್ಥಾಪಿಸಿದ ಆಧುನಿಕ ಚಿಂತಕ ಎಂದು ಬಣ್ಣಿಸಿದರು.

ಕರ್ನಾಟಕ ಸೇನಾ ಪಡೆ ಅಧ್ಯಕ್ಷ ತೇಜೇಶ್ ಲೋಕೇಶ್ ಗೌಡ ಮಾತನಾಡಿ, ಆಧುನಿಕ ಮೈಸೂರಿನ ಮಹಾಶಿಲ್ಪಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರಿಗೆ ಮರಣೋತ್ತರ ಭಾರತ ರತ್ನ ಪ್ರಶಸ್ತಿ ನೀಡಬೇಕೆಂದು ಒತ್ತಾಯಿಸಿದರು. ಈ ಕಾರ್ಯಕ್ರಮದಲ್ಲಿ ಮುಖಂಡ ಎಂ.ಎನ್.ದೊರೆಸ್ವಾಮಿ, ಸಮಾಜ ಸೇವಕ ಲಯನ್ ಟಿ. ಗೋಲ್ಡ್ ಸುರೇಶ್, ಡಾ. ಶಾಂತರಾಜೇಅರಸ್, ನರಸಿಂಹೇಗೌಡ, ಅಂಬಾ ಅರಸ್, ಪ್ರಜೀಶ್, ಕೃಷ್ಣಯ್ಯ, ಪ್ರಭು ಶಂಕರ್, ವಿಜಯೇಂದ್ರ ಪದ್ಮಾ, ಜ್ಯೋತಿ, ಎಳನೀರು ರಾಮಣ್ಣ ಇಂದಿರಾ, ದರ್ಶನ್ ಗೌಡ, ಬಂಗಾರಪ್ಪ, ಪ್ರಭಾಕರ, ರವಿ ನಾಯಕ್, ವಿಜಯದೇವರಾಜೇ ಅರಸ್ ಉಪಸ್ಥಿತರಿದ್ದರು.

ಬಂಧಿತ ಎನ್‌ಎಸ್‌ಯುಐ ಕಾರ್ಯಕರ್ತರ ಬಿಡುಗಡೆ ಮಾಡದಿದ್ದರೆ ಉಗ್ರ ಪ್ರತಿಭಟನೆ

ಮೈಸೂರಲ್ಲಿ ಎನ್‌ಎಸ್‌ಯುಐ ನಗರಾಧ್ಯಕ್ಷರ ಎಚ್ಚರಿಕೆ



ಮೈಸೂರು, ಜೂ.3(ಆರ್‌ಕೆಬಿ)– ಪಠ್ಯ ಪರಿಷ್ಕರಣಾ ಸಮಿತಿ ಅಧ್ಯಕ್ಷ ರೋಹಿತ್ ಚಕ್ರತೀರ್ಥ ಅವರನ್ನು ವಜಾಗೊಳಿಸಬೇಕೆಂದು ಆಗ್ರಹಿಸಿ ಎನ್‌ಎಸ್‌ಯುಐ ಪದಾಧಿಕಾರಿಗಳು ಹಾಗೂ ಸದಸ್ಯರು ಸಚಿವ ನಾಗೇಶ್ ಅವರ ಮನೆ ಎದುರು ಕೇವಲ ಪ್ರತಿಭಟನೆ ನಡೆಸಿದ್ದಾರೆ. ಆದರೆ ಅವರ ವಿರುದ್ಧ ಇಲ್ಲ ಸಲ್ಲದ ಆರೋಪ ಮಾಡಿ ಬಂಧಿಸಿರುವುದು ಸೂಕ್ತವಲ್ಲ ಎಂದು ಎನ್‌ಎಸ್‌ಯುಐ ನಗರ ಘಟಕ ಬೇಸರ ವ್ಯಕ್ತಪಡಿಸಿದೆ.

ಮೈಸೂರು ಪತ್ರಕರ್ತರ ಭವನದಲ್ಲಿ ಮಾತನಾಡಿದ ನಗರಾಧ್ಯಕ್ಷ ಎನ್.ಮನೋಜ್, ರೋಹಿತ್ ಚಕ್ರತೀರ್ಥ ಅವರನ್ನು ಬಂಧಿಸಬೇಕೆಂದಷ್ಟೇ ಪ್ರತಿಭಟನೆ ನಡೆಸಲಾಗಿದೆ ಎಂದರು.

ಈ ವೇಳೆ ಆರ್‌ಎಸ್‌ಎಸ್ ಚಡ್ಡಿ ಸುಡಲಾಯಿತೇ ಹೊರತು ಯಾವುದೇ ರೀತಿಯಲ್ಲಿ ಸಚಿವರ ಮನೆ ಮೇಲೆ ದಾಳಿ ನಡೆದಿಲ್ಲ. ಹೀಗಿದ್ದರೂ ದಾಳಿ ಮಾಡಲು ಯತ್ನಿಸಿದರೆಂದು ಸುಳ್ಳು ಆರೋಪ ಮಾಡಲಾಗಿದೆ. ಬೇಕಿದ್ದರೆ ಸಚಿವರ ಮನೆಯ ಸಿಸಿ ಟಿವಿ ದೃಶ್ಯಾವಳಿ ಪರೀಕ್ಷಿಸಲಿ ಎಂದು ಹೇಳಿದರು. ಬಂಧಿಸಿರುವವರನ್ನು ಕೂಡಲೇ ಬಿಡುಗಡೆ ಮಾಡದಿದ್ದಲ್ಲಿ ಸಂಘಟನೆ ವತಿಯಿಂದ ಉಗ್ರ ಪ್ರತಿಭಟನೆ ನಡೆಸುವುದಾಗಿ ಎಚ್ಚರಿಸಿದರು. ಸುದ್ದಿಗೋಷ್ಠಿಯಲ್ಲಿ ಎನ್‌ಎಸ್‌ಯುಐ ಪದಾಧಿಕಾರಿಗಳಾದ ಆರ್.ರಜತ್, ರವಿ, ರೇಖಾ ಉಪಸ್ಥಿತರಿದ್ದರು.



ಮೈಸೂರಿನ ವಿಜಯನಗರ 4ನೇ ಹಂತದ ಆಲದಮರದ ಬಳಿ ಹುಯಿಲಾಳು ಜಯರಾಮು ಸಾರ್ವಜನಿಕರಿಗೆ ಎಳನೀರು ನೀಡುವ ಮೂಲಕ ಡಿಸಿಸಿ ಕಾರ್ಯದರ್ಶಿ ಹಾಗೂ ಗ್ರಾಮ ಮಾಜಿ ಸದಸ್ಯ ಹುಯಿಲಾಳು ರಾಮಸ್ವಾಮಿ ಹುಟ್ಟುಹಬ್ಬ ಆಚರಿಸಿದರು. ಈ ವೇಳೆ ಮುಳ್ಳೂರು ದೇವರಾಜ್, ಶೆಟ್ಟಿನಾಯಕನಹಳ್ಳಿ ಸಿದ್ದಾರ್ಥ್, ಶಿವರಾಮು, ಹುಯಿಲಾಳು ಮಂಜುನಾಥ್ ಪ್ರಸಾದ್, ಸತೀಶ್, ಜಟ್ಟಿಹುಂಡಿ ಸುನಿಲ್, ಬೋಗಾದಿ ವೀರಭದ್ರಪ್ಪ ನಿವೃತ್ತ ಕೆಎಸ್‌ಆರ್‌ಟಿಸಿ ಅಧಿಕಾರಿ ಸಾಹುಕಾರಹುಂಡಿ ಗೋಪಾಲಗೌಡ, ಜೋಗಿ ಮಧು, ಬೋಗಾದಿ ವೆಂಕಟೇಶ, ಕೃಷ್ಣಪ್ಪ ಇನ್ನಿತರರು ಉಪಸ್ಥಿತರಿದ್ದರು.

ಪ್ರಧಾನಮಂತ್ರಿಗಳ ಮೈಸೂರು ಭೇಟಿ ಹಿನ್ನೆಲೆ ಪೊಲೀಸರಿಂದ ಭದ್ರತೆ ಸಿದ್ಧತೆ



ಮೈಸೂರು, ಜೂ.3(ಆರ್‌ಕೆ)– ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಕಾರ್ಯಕ್ರಮದಲ್ಲಿ ಭಾಗವಹಿಸಲು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಮೈಸೂರಿಗೆ ಜೂನ್ 21ರಂದು ಆಗಮಿಸುತ್ತಿರುವುದರಿಂದ ಮೈಸೂರು ಪೊಲೀಸರು ಭದ್ರತೆಗೆ ಅಗತ್ಯ ಸಿದ್ಧತೆ ಮಾಡಿಕೊಳ್ಳುತ್ತಿದ್ದಾರೆ.

ಮೈಸೂರಿನ ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿರುವ ಸಿಎಆರ್ ಮೈದಾನದಲ್ಲಿ ಇಂದು ಆಯೋಜಿಸಿದ್ದ ಅತಿ ಪ್ರಮುಖ ವಿವರಣಾ (ಮೆಗಾ ಬ್ರಿಫಿಂಗ್) ಪರೇಡ್‌ನಲ್ಲಿ ಅಧಿಕಾರಿಗಳು ಹಾಗೂ ಸಿಬ್ಬಂದಿಗೆ ಪ್ರಧಾನಿ ಆಗಮನದ ಹಿನ್ನೆಲೆಯಲ್ಲಿ ಕೈಗೊಳ್ಳಬೇಕಾಗಿರುವ ಭದ್ರತಾ ಯೋಜನೆ ಕುರಿತು ನಗರ ಪೊಲೀಸ್ ಆಯುಕ್ತ ಚಂದ್ರಗುಪ್ತ ಸಾಕಷ್ಟು ಸಲಹೆ–ಸೂಚನೆ ನೀಡಿದರು.

ಸಾಂಸ್ಕೃತಿಕ ನಗರಿ ಮೈಸೂರು ಸ್ವಚ್ಛ, ಸುರಕ್ಷತೆಗೆ ಖ್ಯಾತಿಯಾಗಿರುವುದರಿಂದ ಪ್ರಧಾನಮಂತ್ರಿಗಳ ಆಗಮನದ ಹಿನ್ನೆಲೆಯಲ್ಲಿ ಸ್ವಚ್ಛತೆಯತ್ತ ಗಮನಹರಿಸಬೇಕಾಗಿದೆ. ಅದೇ ರೀತಿ ಮೈಸೂರಿನಲ್ಲಿ ಶಾಂತಿ–ಸುವ್ಯವಸ್ಥೆಯನ್ನೂ ಕಾಪಾಡಬೇಕಾಗಿದೆ.

ಜೂ.20ರಂದೇ ಮೈಸೂರಿಗೆ ಆಗಮಿಸಲಿರುವ ಪ್ರಧಾನಮಂತ್ರಿಗಳು ಇಲ್ಲಿಯೇ ವಾಸ್ತವ್ಯ ಹೂಡಿ, (ಜೂ.21ರಂದು) ಮೈಸೂರಿನ ಅರಮನೆ ಆವರಣದಲ್ಲಿ ನಡೆಯಲಿರುವ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಕಾರ್ಯಕ್ರಮದಲ್ಲಿ ಪಾಲ್ಗೊಂಡ ಬಳಿಕ ನವದೆಹಲಿಗೆ ಮರಳುವರು. ಅವರ ಆಗಮನ, ಹಾದು ಹೋಗುವ ರಸ್ತೆ ಮಾರ್ಗ, ವಾಸ್ತವ್ಯ ಹೂಡುವ ಸ್ಥಳ, ಪಾಲ್ಗೊಳ್ಳಲಿರುವ ಕಾರ್ಯಕ್ರಮದ ಸ್ಥಳ ಹಾಗೂ ಸುತ್ತಲಿನ ಪ್ರದೇಶಗಳಲ್ಲಿ ಸ್ವಚ್ಛತೆ ಮತ್ತು ಭದ್ರತಾ ಕಾರ್ಯಗಳನ್ನು ಯಶಸ್ವಿಯಾಗಿ ನಿರ್ವಹಿಸಬೇಕಾಗಿದೆ ಎಂದು ಡಾ.ಚಂದ್ರಗುಪ್ತ ತಿಳಿಸಿದರು.

ಪ್ರಧಾನಿಗಳು ಮೈಸೂರಿಗೆ ಬಂದು ಮತ್ತೆ ದೆಹಲಿಗೆ ಮರಳುವವರೆಗೆ ಮೈಸೂರಿನಲ್ಲಿ ಪೊಲೀಸರು ಎಚ್ಚರ ದಿಂದಿದ್ದು, ಯಾವುದೇ ಭದ್ರತಾ ಲೋಪವಾಗದಂತೆ ಬಂದೋಬಸ್ತ್ ವ್ಯವಸ್ಥೆ ಮಾಡಬೇಕಿದೆ. ಹಾಗೆಯೇ ಎಲ್ಲೆಡೆ ಸುರಕ್ಷತಾ ಕ್ರಮಗಳನ್ನು ಕೈಗೊಂಡು ಅತೀ ಗಣ್ಯರಿಗೆ ಶಿಷ್ಟಾಚಾರದಂತೆ ಎಲ್ಲಾ ರಕ್ಷಣೆ ಕಲ್ಪಿಸಬೇಕಿದೆ ಎಂದು ಪೊಲೀಸ್ ಆಯುಕ್ತರು ವಿವರಿಸಿದರು.

ಪಾಲಿಕೆ, ಮುಡಾ, ಸೆಸ್ಕ್, ಅರಣ್ಯ ಹಾಗೂ ಕಂದಾಯ ಇಲಾಖೆ ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸಿ ಅರಮನೆ ಆವರಣ, ಸುತ್ತಲಿನ ಪ್ರದೇಶ ಹಾಗೂ ಪ್ರಧಾನಮಂತ್ರಿಗಳು ಸಂಚರಿಸುವ ಮಾರ್ಗವನ್ನು ಸ್ವಚ್ಛವಾಗಿರಿಸಿ, ರಸ್ತೆ, ಫುಟ್‌ಪಾತ್, ಒಳಚರಂಡಿಗಳ ಸುವ್ಯವಸ್ಥೆಯತ್ತ ಗಮನ ಹರಿಸಬೇಕಿದೆ. ಅಗತ್ಯ ಕಾಮಗಾರಿಗಳನ್ನು ಪಾಲಿಕೆ ಅಧಿಕಾರಿಗ ಗಮನ ಸೆಳೆದು ಮಾಡಬೇಕಾಗಿದ್ದು, ಎರಡೂ ದಿನ ಕಟ್ಟೆಚ್ಚರದಿಂದ ಇರುವಂತೆಯೂ ತಿಳಿಸಿದರು.

ಪ್ರಧಾನಮಂತ್ರಿಗಳು ಸಾಗುವ ಮಾರ್ಗ, ವಾಸ್ತವ್ಯ ಹೂಡುವ ಸ್ಥಳ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಶಿಥಿಲಗೊಂಡಿರುವ ವಿದ್ಯುತ್ ಕಂಬ, ಮರದ ರೆಂಬೆಗಳ ಬಗ್ಗೆ ಪಾಲಿಕೆ, ಸೆಸ್ಕ್, ಅರಣ್ಯ ಇಲಾಖೆ ಗಮನಕ್ಕೆ ತಂದು ಅವುಗಳ ತೆರವುಗೊಳಿಸುವುದು, ರಸ್ತೆ ಬದಿ ಅನಧಿಕೃತ ಅಂಗಡಿ ಮುಂಗಟ್ಟುಗಳನ್ನು ತೆರವುಗೊಳಿಸಬೇಕು.

ಅರಮನೆ ಪ್ರವೇಶ, ನಿರ್ಗಮನ ಸ್ಥಳ, ಯೋಗ ಪ್ರದರ್ಶನ ಪ್ರದೇಶದಲ್ಲಿ ಸಿಸಿ ಕ್ಯಾಮರಾಗಳನ್ನು ಸುಸ್ಥಿತಿಯಲ್ಲಿರಿಸಿ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳುವಂತೆಯೂ ಡಾ.ಚಂದ್ರಗುಪ್ತ ನುಡಿದರು.

ಡಿಸಿಪಿಗಳಾದ ಪ್ರದೀಪ್ ಗುಂಟಿ. ಎಂ.ಎಸ್. ಗೀತಾ ಪ್ರಸನ್ನ, ಮೌಂಟೆಡ್ ಪೊಲೀಸ್ ಕಮಾಂಡೆಂಟ್ ನಾಗರಾಜ್, ಎಸಿಪಿಗಳಾದ ಶಶಿಧರ, ಎಂ.ಶಿವಶಂಕರ್, ಪೂರ್ಣಚಂದ್ರ ತೇಜಸ್ವಿ, ಸಂಚಾರ ವಿಭಾಗದ ಎಸಿಪಿ ಎನ್.ಎಸ್.ಗಂಗಾಧರಸ್ವಾಮಿ, ಎಲ್ಲಾ ಸಿವಿಲ್ ಮತ್ತು ಸಂಚಾರ ಠಾಣೆಗಳ ಇನ್ಸ್‌ಪೆಕ್ಟರ್, ಸಬ್ ಇನ್ಸ್‌ಪೆಕ್ಟರ್ ಹಾಗೂ ಸಿಬ್ಬಂದಿ ವಿಶೇಷ ಪರೇಡ್‌ನಲ್ಲಿ ಭಾಗವಹಿಸಿದ್ದರು.

ಕಾರ್ಯಕ್ಷಮತೆ ಮೂಲಕ ಸಾರ್ವಜನಿಕರ ವಿಶ್ವಾಸ ಗಳಿಸಿ

ಪೊಲೀಸ್ ಅಧಿಕಾರಿಗಳು, ಸಿಬ್ಬಂದಿಗೆ ಆಯುಕ್ತ ಡಾ.ಚಂದ್ರಗುಪ್ತ ಸಲಹೆ



ಮೈಸೂರು, ಜೂ.3(ಆರ್‌ಕೆ)– ನಿಮ್ಮ ಕಾರ್ಯಕ್ಷಮತೆ ಮತ್ತು ಜನಸ್ನೇಹಿ ಕರ್ತವ್ಯದ ಮೂಲಕ ಜನ ಸಾಮಾನ್ಯರ ವಿಶ್ವಾಸ ಗಳಿಸಿ ಎಂದು ಮೈಸೂರು ನಗರ ಪೊಲೀಸ್ ಆಯುಕ್ತ ಡಾ.ಚಂದ್ರಗುಪ್ತ ಅಧಿಕಾರಿಗಳು ಹಾಗೂ ಸಿಬ್ಬಂದಿಗೆ ಇಂದಿಲ್ಲಿ ಸಲಹೆ ನೀಡಿದ್ದಾರೆ.

ಪ್ರಧಾನಮಂತ್ರಿಗಳ ಮೈಸೂರು ಭೇಟಿ ಹಿನ್ನೆಲೆಯಲ್ಲಿ ಮೈಸೂರಿನ ಸಿಎಆರ್ ಮೈದಾನದಲ್ಲಿ ಆಯೋಜಿಸಿದ್ದ ವಿಶೇಷ ಪರೇಡ್‌ನಲ್ಲಿ ಪೊಲೀಸ್ ಕವಾಯತು ವಂದನೆ ಸ್ವೀಕರಿಸಿ ಮಾತನಾಡುತ್ತಿದ್ದ ಅವರು, ಸಮಸ್ಯೆ ಇದ್ದಾಗ ನಾಗರಿಕರು ನಿರ್ಭೀತಿ ಯಿಂದ ಪೊಲೀಸ್ ಠಾಣೆಗೆ ಬರು ವಂತಹ ವಾತಾವರಣ ನಿರ್ಮಾಣವಾಗಬೇಕು. ಠಾಣೆಗೆ ಹೋದರೆ ಯಾವುದೇ ಶಿಫಾರಸ್ಸಿಲ್ಲದೆಯೇ ಪೊಲೀಸರು ತಮ್ಮ ಕೆಲಸ ಮಾಡಿಕೊಡು ತ್ತಾರೆಂಬ ವಿಶ್ವಾಸ ಬರುವಂತೆ ಕೆಲಸ ಮಾಡಿ ಎಂದು ಕಿವಿಮಾತು ಹೇಳಿದರು.

ದಿನದ 24 ಗಂಟೆಯೂ ನೀವು ಪೊಲೀಸರೇ, ಸಮವಸ್ತ್ರ ಧರಿಸಿದಾಗ ಮಾತ್ರವೇ ಜವಾಬ್ದಾರಿ ಇದೆ ಎಂಬ ಭಾವನೆ ಇರಬಾರದು. ಜನಸ್ನೇಹಿ ಪೊಲೀಸ್ ಆಗಿ ಮಾನವೀಯ ಮೌಲ್ಯದೊಂದಿಗೆ ಕೆಲಸ ಮಾಡಿದರೆ ಜನರಿಗೆ ನಮ್ಮ ನಡವಳಿಕೆ, ಕರ್ತವ್ಯದ ಮೇಲೆ ವಿಶ್ವಾಸ ಬರುತ್ತದೆ ಎಂದು ಡಾ.ಚಂದ್ರಗುಪ್ತ ತಿಳಿಸಿದರು.

ನಿಮ್ಮ ಸುತ್ತಲಿನ ಜನರೊಂದಿಗೆ ಬೆರೆತರೆ ಅವರಿಂದಲೇ ಮಾಹಿತಿ ದೊರೆಯುತ್ತದೆ. ಮಕ್ಕಳು, ಮಹಿಳೆಯರು, ಅಶಕ್ತರು, ವೃದ್ಧರ ರಕ್ಷಣೆ ನಮ್ಮ ಜವಾಬ್ದಾರಿ ಯಾಗಿದೆ. ನೀವು ಹೇಗೆ ವರ್ತಿಸುತ್ತೀರೋ ಹಾಗೆಯೇ ಸಮಾಜದ ಜನರೂ ಪ್ರತಿಕ್ರಿಯಿಸುತ್ತಾರೆ. ಪೊಲೀಸ್ ವ್ಯವಸ್ಥೆ ಮೇಲೆ ಸಾರ್ವಜನಿಕರಿಗೆ ವಿಶ್ವಾಸ ಮೂಡುವಂತೆ ಮಾಡುವ ಜವಾಬ್ದಾರಿ ನಮ್ಮ ಮೇಲಿದೆ ಎಂಬುದನ್ನು ಮರೆಯ ಬೇಡಿ ಎಂದು ಸಲಹೆ ನೀಡಿದರು.

ನಮ್ಮ ನಡವಳಿಕೆ, ಮಾನವೀಯ ಗುಣ, ದಕ್ಷತೆ, ಪ್ರಾಮಾಣಿಕತೆಗೆ ಜನ ಗೌರವ ನೀಡುತ್ತಾರೆ. ಕಾನೂನಿನ ಚೌಕಟ್ಟಿನಲ್ಲಿ ಕರ್ತವ್ಯ ನಿರ್ವಹಿಸಿದರೆ ಸಾಕು, ನೊಂದವರು, ಅಸಹಾಯಕರಿಗೆ ಸಹಾಯ ಮಾಡ ಬಹುದು ಹಾಗೆಯೇ ಕ್ರಿಮಿನಲ್‌ಗಳನ್ನು ಬಗ್ಗುಬಡಿಯಲು ಸಾಧ್ಯವಾಗುತ್ತದೆ. ಆ ಮೂಲಕ ಸಮಾಜಕ್ಕೆ ಹಾಗೂ ಇಲಾಖೆಗೆ ಗೌರವ ಸಲ್ಲುತ್ತದೆ ಎಂದು ಆಯುಕ್ತ ಡಾ. ಚಂದ್ರಗುಪ್ತ ತಿಳಿಸಿದರು.

ಡಿಸಿಪಿಗಳಾದ ಪ್ರದೀಪ್ ಗುಂಟಿ, ಎಂ.ಎಸ್.ಗೀತಾ ಪ್ರಸನ್ನ, ಶಿವರಾಜ್, ಮೌಂಟೆಡ್ ಪೊಲೀಸ್ ಕಮಾಂಡೆಂಟ್ ನಾಗರಾಜ, ಎಸಿಪಿಗಳಾದ ಶಶಿಧರ, ಪೂರ್ಣ ಚಂದ್ರ ತೇಜಸ್ವಿ, ಎಂ. ಶಿವಶಂಕರ್, ಸಂಚಾರ ವಿಭಾಗದ ಎಸ್‌ಇ ಗಂಗಾಧರಸ್ವಾಮಿ, ಎಲ್ಲಾ ಠಾಣೆಗಳ ಇನ್ಸ್‌ಪೆಕ್ಟರ್‌ಗಳು ಹಾಗೂ ಸಿಬ್ಬಂದಿ ವಿಶೇಷ ಪರೇಡ್‌ನಲ್ಲಿ ಭಾಗವಹಿಸಿದ್ದರು.

ಮೈಸೂರಲ್ಲಿ ಪ್ರಧಾನಿ ಮೋದಿ ಯೋಗ

ಅರಮನೆ ಆವರಣದಲ್ಲಿ 15 ಸಾವಿರ ಮಂದಿಗಷ್ಟೇ ಅವಕಾಶ ಸಾಧ್ಯತೆ

- ಅಧಿಕಾರಿಗಳ ಸಭೆ ನಂತರ ಮುಖ್ಯಮಂತ್ರಿ ನಿರ್ಧಾರ
- ಜೂ. 8ರಂದು ಮೈಸೂರಲ್ಲಿ ಮುಖ್ಯಮಂತ್ರಿ ಬೊಮ್ಮಾಯಿ ಸಭೆ



ಮೈಸೂರು,ಜೂ.3(ಎಂಟಿವೈ)– ಅಂತರರಾಷ್ಟ್ರೀಯ ಯೋಗ ದಿನದಂದು ಪ್ರಧಾನಿ ನರೇಂದ್ರ ಮೋದಿ ಪಾಲ್ಗೊಳ್ಳುವ ಕಾರ್ಯಕ್ರಮದಲ್ಲಿ 15 ಸಾವಿರ ಜನರಿಗೆ ಅವಕಾಶ ಕಲ್ಪಿಸಲಾಗುವುದು ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ತಿಳಿಸಿದ್ದಾರೆ.

ಮೈಸೂರಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಜೂ.21ರಂದು ಮೈಸೂರು ಅರಮನೆ ಆವರಣದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಪ್ರಧಾನಿ ಮೋದಿ ಪಾಲ್ಗೊಳ್ಳುವ ಹಿನ್ನೆಲೆಯಲ್ಲಿ ಕೇಂದ್ರ ಆಯುಷ್ ಅಧಿಕಾರಿಗಳು ಈಗಾಗಲೇ ಅರಮನೆಗೆ ಭೇಟಿ ನೀಡಿ ಪರಿಶೀಲಿಸಿದ್ದಾರೆ. 3 ಸಾವಿರ ಗಣ್ಯರು, ಅಧಿಕಾರಿಗಳು ಸೇರಿದಂತೆ 15 ಸಾವಿರ ಮಂದಿಗೆ ಅವಕಾಶ ನೀಡಬಹುದಾದ ಸಾಧ್ಯತೆಗಳಿವೆ. ಈ ಕುರಿತು ಚರ್ಚೆ ಮಾಡಿ ಅಂತಿಮ ತೀರ್ಮಾನ ಕೈಗೊಳ್ಳುತ್ತೇವೆ ಜೂ.8ರಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮೈಸೂರಿಗೆ ಆಗಮಿಸಲಿದ್ದು, ಅಧಿಕಾರಿಗಳೊಂದಿಗೆ ಉನ್ನತ ಮಟ್ಟದ ಸಭೆ ನಡೆಸಲಿದ್ದಾರೆ. ಆ ಸಭೆ ಬಳಿಕ ಯೋಗ ಕಾರ್ಯಕ್ರಮದ ರೂಪುರೇಷೆ ಸಿದ್ಧಗೊಳ್ಳಲಿದೆ ಎಂದರು.

ಬಿಜೆಪಿ ಅಭ್ಯರ್ಥಿಗೆ ಗೆಲುವು: ದಕ್ಷಿಣ ಪದವೀಧರ ಕ್ಷೇತ್ರದ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿ ನಿರಾಯಾಸವಾಗಿ ಗೆಲ್ಲುತ್ತಾರೆ. ಬಿಜೆಪಿಗೆ ಪ್ರತಿಸ್ಪರ್ಧಿಯೇ ಇಲ್ಲ. ಕಾಂಗ್ರೆಸ್ ಈ ಕ್ಷೇತ್ರದಲ್ಲಿ ಒಂದು ಬಾರಿಯೂ ಗೆದ್ದಿಲ್ಲ. ಜೆಡಿಎಸ್‌ಗೆ ಯಾರೂ ಬೆಂಬಲ ನೀಡುತ್ತಿಲ್ಲ ಎಂಬ ಮಾಹಿತಿ ಇದೆ. ಪದವೀಧರರು ಪ್ರಬುದ್ಧರಾಗಿದ್ದಾರೆ. ಬಿಜೆಪಿ ಅಭ್ಯರ್ಥಿಗೆ ಮತ ನೀಡಿದರೆ ಅನುಕೂಲ ಆಗುತ್ತದೆ ಎಂಬುದು ಅವರಿಗೆ ತಿಳಿದಿದೆ. ಪಕ್ಷೇತರ ಅಭ್ಯರ್ಥಿಗಳಿಂದ ನಮಗೆ ಯಾವುದೇ ತೊಂದರೆ ಆಗುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ಸಿಎಂ ಪ್ರಚಾರ: ಜೂ.8ರಂದು ಮೈಸೂರಿಗೆ ಆಗಮಿಸಲಿರುವ ಸಿಎಂ ಬೊಮ್ಮಾಯಿ ದಕ್ಷಿಣ ಪದವೀಧರರ ಕ್ಷೇತ್ರದ ಚುನಾವಣೆ ಹಿನ್ನೆಲೆಯಲ್ಲಿ ನಾಲ್ಕು ಜಿಲ್ಲೆಗಳ ಪಕ್ಷದ ಪ್ರಮುಖರನ್ನು ಉದ್ದೇಶಿಸಿ ಮಾತನಾಡಲಿದ್ದಾರೆ.

ನಾಳೆ ಅಂತರ ಶಾಲಾ ಚಿತ್ರಕಲಾ ಸ್ಪರ್ಧೆ

ಮೈಸೂರು,ಜೂ.3(ಎಂಟಿವೈ)– ಅಂತರರಾಷ್ಟ್ರೀಯ ಯೋಗ ದಿನಾಚರಣೆಯ ಅಂಗವಾಗಿ ಜೂ.5ರಂದು ಬೆಳಗ್ಗೆ 10ಕ್ಕೆ ಅಂತರ ಶಾಲಾ ಚಿತ್ರಕಲಾ ಸ್ಪರ್ಧೆ, 5ನೇ ತಂಡದ ಅಂತರ ದೃಷ್ಟಿ ಬ್ರೈನ್ ಜಾಗೃತಿ ಯೋಗಿಕ್ ಶಿಬಿರದ ಸಮಾರೋಪ ಮತ್ತು 6ನೇ ತಂಡದ ಉದ್ಘಾಟನೆ ಸಮಾರಂಭ ನಡೆಯಲಿದೆ ಪರಮಹಂಸ ಯೋಗ ವಿದ್ಯಾಲಯದ ಅಧ್ಯಕ್ಷ ಶಿವಪ್ರಕಾಶ್ ಗುರೂಜಿ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂತರ ದೃಷ್ಟಿ ಬ್ರೈನ್ ಅಕಾಡೆಮಿ ಹಾಗೂ ಪರಮಹಂಸ ಯೋಗ ವಿದ್ಯಾಲಯ ಸಹಯೋಗದಲ್ಲಿ ಮಕ್ಕಳಲ್ಲಿ ಯೋಗದ ಬಗ್ಗೆ ಜಾಗೃತಿ ಮೂಡಿಸುವ ಹಾಗೂ ಅಂತರ ದೃಷ್ಟಿ ಬ್ರೈನ್ ಜಾಗೃತಿ ಶಿಬಿರವನ್ನು ನಡೆಸುತ್ತಾ ಬಂದಿದೆ. ಜೂ.21ರಂದು ಮೈಸೂರಲ್ಲಿ ನಡೆಯುವ ಯೋಗ ದಿನಾಚರಣೆಯಲ್ಲಿ ಕಾರ್ಯಕ್ರಮದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಯೋಗ ಪಟುಗಳು, ವಿದ್ಯಾರ್ಥಿಗಳು ಪಾಲ್ಗೊಳ್ಳಲು ಪ್ರೇರೇಪಿಸಲು ಜೂ.5ರಂದು ಅಂತರ ಶಾಲಾ ಚಿತ್ರಕಲಾ ಸ್ಪರ್ಧೆ, 5ನೇ ತಂಡದ ಅಂತರ ದೃಷ್ಟಿ ಬ್ರೈನ್ ಜಾಗೃತಿ ಯೋಗಿಕ್ ಶಿಬಿರದ ಸಮಾರೋಪ ಮತ್ತು 6ನೇ ತಂಡದ ಆರಂಭೋತ್ಸವದ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದರು.

ರಾಮಕೃಷ್ಣನಗರದಲ್ಲಿರುವ ವಿದ್ಯಾಲಯದ ಆವರಣದಲ್ಲಿ ಪರಮಹಂಸ ಯೋಗ ವಿದ್ಯಾಲಯ, ಮೈಸೂರು ಯೋಗ ಒಕ್ಕೂಟ, ಮೈಸೂರು ಯೋಗ ಅಸೋಸಿಯೇಷನ್, ಮೈಸೂರು ಮಹಿಳಾ ಪತಂಜಲಿ ಯೋಗ ಸಮಿತಿ ಸಹಯೋಗದಲ್ಲಿ ನಡೆಯುವ ಚಿತ್ರಕಲಾ ಸ್ಪರ್ಧೆಯಲ್ಲಿ ನೂರಾರು ಮಕ್ಕಳು ಪಾಲ್ಗೊಳ್ಳಲಿದ್ದಾರೆ. ಜೂ.5ರಿಂದ 26ರವರೆಗೆ ವಾರದ ಐದು ದಿನಗಳ ಕಾಲ ನಡೆಯುವ ಅಂತರ ದೃಷ್ಟಿ ಬ್ರೈನ್ ಜಾಗೃತಿ ಯೋಗಿಕ್ ಶಿಬಿರದ 1ನೇ ಅವಧಿ ಬೆಳಗ್ಗೆ 6.30ರಿಂದ 8ರವರೆಗೆ, 2ನೇ ಅವಧಿ ಸಂಜೆ 6ರಿಂದ 6.30ರವರೆಗೆ ಹಾಗೂ 3ನೇ ಅವಧಿ ವಾರಾಂತ್ಯದಲ್ಲಿ 2 ದಿನ ಮಧ್ಯಾಹ್ನ 3ರಿಂದ ಸಂಜೆ 5ರವರೆಗೆ ಮತ್ತು ಭಾನುವಾರ ಬೆಳಗ್ಗೆ 10.30ರಿಂದ ಮಧ್ಯಾಹ್ನ 12.30ರವರೆಗೆ ನಡೆಯಲಿದೆ. ಆಸಕ್ತರು ಹೆಚ್ಚಿನ ವಿವರಗಳಿಗೆ ಮೊ.ಸಂ.9008727172 ಮತ್ತು 9035506790 ಸಂಪರ್ಕಿಸಬಹುದು ಎಂದರು.

ಇದೇ ವೇಳೆ ಸಂಸ್ಥೆ ನಡೆಸಿದ ಅಂತರ್ ದೃಷ್ಟಿ ಐದನೇ ಶಿಬಿರದ ಮಕ್ಕಳು ಕಣ್ಣಿಗೆ ಬಟ್ಟೆ ಕಟ್ಟಿಕೊಂಡು ಬಣ್ಣ, ಭಾವಚಿತ್ರ, ಸಂಖ್ಯೆಗಳನ್ನು ಗುರುತಿಸಿ ನಿಬ್ಬೆರಗಾಗುವಂತೆ ಮಾಡಿದರು. ಸುದ್ದಿಗೋಷ್ಠಿಯಲ್ಲಿ ಬಿಲ್ಡರ್ ಎಚ್.ಎನ್.ರವಿಕುಮಾರ್, ಮೈಸೂರು ಯೋಗ ಒಕ್ಕೂಟದ ಅಧ್ಯಕ್ಷ ಬಿ.ಪಿ.ಮೂರ್ತಿ, ಕಾರ್ಯಾಧ್ಯಕ್ಷ ಜಲೇಂದ್ರ ಕುಮಾರ್, ಪತಂಜಲಿ ಯೋಗ ಸಮಿತಿಯ ರಾಜ್ಯ ಕಾರ್ಯಕಾರಿಣಿ ಎಂ.ಕಲಾವತಿ, ಸುಂದರ್ ಇದ್ದರು.

ನಿರುದ್ಯೋಗಿ ಪದವೀಧರರಿಗೆ 5 ಸಾವಿರ ಮಾಸಿಕ ಭತ್ಯೆ ದೊರಕಿಸಲು ಪ್ರಯತ್ನ

ಕರ್ನಾಟಕ ಪ್ರಜಾಪಾರ್ಟಿಯ ಕಾವ್ಯಶ್ರೀ ಜೀರೇಶ್ ಭರವಸೆ


ಮೈಸೂರು, ಜೂ.3(ಆರ್‌ಕೆಬಿ)– ಪದವೀಧರರು ನಿರುದ್ಯೋಗ ಸಮಸ್ಯೆ ಎದುರಿಸುತ್ತಿದ್ದಾರೆ. ಹೀಗಾಗಿ ಕರ್ನಾಟಕ ಪ್ರಜಾಪಾರ್ಟಿ ರೈತಪರ್ವ ಬೆಂಬಲಿತ ಅಭ್ಯರ್ಥಿಯಾದ ತಮ್ಮನ್ನು ದಕ್ಷಿಣ ಪದವೀಧರ ಕ್ಷೇತ್ರದ ಮತದಾರರು ಚುನಾಯಿಸಿದಲ್ಲಿ ಮಾಸಿಕ ಐದು ಸಾವಿರ ನಿರುದ್ಯೋಗ ಭತ್ಯೆ ದೊರಕಿಸಿಕೊಡಲು ಶ್ರಮಿಸಲಾಗುವುದು ಎಂದು ಅಭ್ಯರ್ಥಿ ಕಾವ್ಯಶ್ರೀ ಜೀರೇಶ್ ತಿಳಿಸಿದರು.

ಮೈಸೂರು ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಆರು ತಿಂಗಳಿನಿಂದ ಪಕ್ಷದ ವತಿಯಿಂದ ಪದವೀಧರರ ನೋಂದಣಿ ಕಾರ್ಯ ನಡೆದಿದೆ ತಾವು ಮಹಿಳಾ ಅಭ್ಯರ್ಥಿಯಾಗಿರುವ ಹಿನ್ನೆಲೆಯಲ್ಲಿಯೂ ಮತದಾರರು ತಮ್ಮನ್ನು ಚುನಾಯಿಸಬೇಕೆಂದು ಮನವಿ ಮಾಡಿದರು.

ಮೂರು ರಾಜಕೀಯ ಪಕ್ಷಗಳು ಯಾವ ರೀತಿ ಪ್ರಚಾರದಲ್ಲಿ ತೊಡಗಿವೆ ಎಂಬುದರ ಅರಿವು ಎಲ್ಲರಿಗೂ ಇದೆ ತಾವು ಪ್ರಾಮಾಣಿಕ ರೀತಿಯಲ್ಲಿ ಪ್ರಚಾರ ಕೈಗೊಂಡಿದ್ದು, ಸೈನಿಕನ ಪತ್ನಿಯೂ ಆಗಿರುವ ತಮ್ಮನ್ನು ಮತದಾರರು ಚುನಾಯಿಸುತ್ತಾರೆ ಎಂಬ ವಿಶ್ವಾಸವಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಪಕ್ಷದ ರಾಜ್ಯಾಧ್ಯಕ್ಷ ಡಾ.ಬಿ.ಶಿವಣ್ಣ ಇತರರು ಉಪಸ್ಥಿತರಿದ್ದರು.

ರಾಜ್ಯದಲ್ಲಿ ವ್ಯಾಪಕಗೊಳ್ಳುತ್ತಿದೆ ಬ್ರಾಹ್ಮಣ್ಯೀಕರಣ!

● ಹೊಸಮಠದ ಶ್ರೀ ಚಿದಾನಂದ ಸ್ವಾಮೀಜಿ ಗಂಭೀರ ಆರೋಪ ● ಬಸವಣ್ಣನವರ ಪಠ್ಯ ಪರಿಷ್ಕರಣೆ ಕೈ ಬಿಡದಿದ್ದರೆ ಉಗ್ರ ಹೋರಾಟ
● ಬ್ರಾಹ್ಮಣ್ಯೀಕರಣದ ಮೊದಲ ಭಾಗವಾಗಿ ಪಠ್ಯಪುಸ್ತಕ ಪರಿಷ್ಕರಣೆ ● ಬಸವಣ್ಣನವರ ವಿಚಾರಧಾರೆ ವೇಗ ತಡೆಯಲು ಈ ತಂತ್ರ



ಮೈಸೂರು, ಜೂ.3(ಎಂಟಿವೈ)– ಪರಿಷ್ಕೃತ ಶಾಲಾ ಪಠ್ಯಪುಸ್ತಕದಲ್ಲಿ ಬಸವಣ್ಣನವರ ಇತಿಹಾಸವನ್ನು ತಿರುಚಿ, ಮಕ್ಕಳ ಮನಸ್ಸಲ್ಲಿ ತಪ್ಪು ಸಂದೇಶ ತುಂಬುವ ಸಂಚಿನಿಂದ ಹಿಂದೆ ಸರಿದು, ಹಳೆ ಪಠ್ಯಕ್ರಮವನ್ನೇ ಮುಂದುವರೆಸುವಂತೆ ಆಗ್ರಹಿಸಿರುವ ಹೊಸಮಠದ ಶ್ರೀ ಚಿದಾನಂದ ಸ್ವಾಮೀಜಿಗಳು, ರಾಜ್ಯದಲ್ಲಿ ಬ್ರಾಹ್ಮಣ್ಯೀಕರಣಗೊಳಿಸುವ ಪ್ರಕ್ರಿಯೆ ವ್ಯಾಪಕವಾಗಿ ನಡೆಯುತ್ತಿದೆ ಎಂದರು.

ಅಗ್ರಹಾರದಲ್ಲಿರುವ ಹೊಸಮಠದ ಆವರಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬಸವಣ್ಣನವರ ಮೂಲ ಸಿದ್ಧಾಂತವನ್ನು ತಿರುಚಿ ಸತ್ಯವನ್ನು ಮರೆ ಮಾಚಲಾಗುತ್ತಿದೆ. ಆ ಮೂಲಕ ಮಕ್ಕಳ ಮನಸ್ಸಿನಲ್ಲಿ ತಪ್ಪು ಮಾಹಿತಿ ಬಿತ್ತುವ ಪ್ರಯತ್ನ ನಡೆದಿದೆ. ಆದ್ದರಿಂದ ಮೂಲ ಚರಿತ್ರೆಯನ್ನೇ ತಿಳಿಸುವ ಹಳೇ ಪಠ್ಯಕ್ರಮವನ್ನೇ ಮುಂದುವರಿಸಬೇಕು. ಎಲ್ಲ ವರ್ಗದಲ್ಲೂ ಬ್ರಾಹ್ಮಣ್ಯೀಕರಣವನ್ನು ಮುನ್ನಲೆಗೆ ತರಲಾಗುತ್ತಿದೆ. ಅದರ ಒಂದು ಭಾಗವಾಗಿ ಪಠ್ಯಪುಸ್ತಕ ಪರಿಷ್ಕರಣೆ ಮಾಡಲಾಗುತ್ತಿದೆ. ಇದಕ್ಕೆಲ್ಲ ರಾಜಕೀಯ ಪಕ್ಷಗಳೂ ಕಾರಣ. ಇಂದು ರಾಜ್ಯದಲ್ಲಿ ಬ್ರಾಹ್ಮಣ್ಯೀಕರಣ ಪ್ರಬಲವಾಗಿ ನಡೆಯುತ್ತಿದೆ ಎಂದು ಗಂಭೀರ ಆರೋಪ ಮಾಡಿದರು.

ಇತ್ತೀಚೆಗೆ ಬಸವಣ್ಣನವರ ವಿಚಾರಧಾರೆ ವೇಗವಾಗಿ ಬೆಳೆಯುತ್ತಿದೆ. ಆ ವೇಗವನ್ನು ತಡೆಯಲು ಹೀಗೆಲ್ಲ ಮಾಡುತ್ತಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಸಂಸತ್‌ನಲ್ಲಿ ಬಸವಣ್ಣನವರ ಕುರಿತು ಮಾತನಾಡಿದಾಗ ಬಸವ ತತ್ವ ಪ್ರಪಂಚದಾದ್ಯಂತ ಹರಡುತ್ತಿದೆ ಎಂಬುದು ಗೊತ್ತಾಗುತ್ತಿದೆ. ಬಸವಣ್ಣ ವಿಶ್ವವ್ಯಾಪಿ ಆಗುವುದನ್ನು ತಡೆಗಟ್ಟಲು ಹೀಗೆಲ್ಲ ಮಾಡುತ್ತಿದ್ದಾರೆ ಎಂದು ದೂರಿದರು.

ಕುದೇರು ಮಠದ ಶ್ರೀ ಗುರುಶಾಂತ ಸ್ವಾಮೀಜಿ ಮಾತನಾಡಿ, ಮಹಾಮಾನವತಾವಾದಿ ಬಸವಣ್ಣನವರಿಗೆ ಪಠ್ಯಪುಸ್ತಕ ಪರಿಷ್ಕರಣೆ ಮೂಲಕ ಅವಹೇಳನ ಮಾಡಲಾಗುತ್ತಿದೆ. ಮಕ್ಕಳ ಮನಸ್ಸಿನಲ್ಲಿ ಸುಳ್ಳು ಚರಿತ್ರೆಯನ್ನು ತುಂಬಲಾಗುತ್ತಿದೆ. ಇದನ್ನು ಸಹಿಸಲಾಗುವುದಿಲ್ಲ. ಈ ಕುರಿತು ಉಗ್ರ ಹೋರಾಟ ಮಾಡಲಾಗುವುದು ಎಂದು ಎಚ್ಚರಿಸಿದರು.

ಜಾಗತಿಕ ಲಿಂಗಾಯತ ಮಹಾಸಭಾದ ಜಿಲ್ಲಾಧ್ಯಕ್ಷ ಮಹಾದೇವಪ್ಪ ಮಾತನಾಡಿ, ಬಸವಣ್ಣನವರು ವರ್ಗ, ವರ್ಣ, ಲಿಂಗಬೇಧ, ಆಶ್ರಯ ರಹಿತ ಸಮಗ್ರ ಸಮಾಜ ನಿರ್ಮಾಣದ ರೂವಾರಿ. ಇಷ್ಟಲಿಂಗ ಜನಕ, ಲಿಂಗಾಯತ ಒಂದು ಅವೈದಿಕ ಸ್ವತಂತ್ರ ಧರ್ಮ. ಹೀಗಿದ್ದು ಉದ್ದೇಶಪೂರ್ವಕವಾಗಿ ಬಸವಣ್ಣ ವೀರಶೈವ ಗುರುಗಳಿಂದ ಲಿಂಗದೀಕ್ಷೆ ಪಡೆದರು ಎಂದು ತಪ್ಪು ಮಾಹಿತಿಯನ್ನು ಸೇರಿಸಲಾಗಿದೆ ಇದು ಕೆಳಮಟ್ಟದ ರಾಜಕಾರಣ ಮತ್ತು ನೀಚತನದ ಕೃತ್ಯ. ಪಠ್ಯಪುಸ್ತಕ ಪರಿಷ್ಕರಣಾ ಸಮಿತಿಯು ದುರುದ್ದೇಶದಿಂದ ಇತಿಹಾಸ ತಿರುಚುವ ಪ್ರಯತ್ನ ಮಾಡಿದೆ. ಬಸವಣ್ಣನವರಿಗೆ ಸಂಬಂಧಿಸಿದ ಪ್ರಮುಖ ವಿಷಯಗಳನ್ನು ಉದ್ದೇಶಪೂರ್ವಕವಾಗಿ ಕೈಬಿಟ್ಟು ತಪ್ಪು ಮಾಹಿತಿ ಸೇರಿಸಲಾಗಿದೆ. ಇದನ್ನು ಪುನರ್ ಪರಿಷ್ಕರಣೆ ಮಾಡಬೇಕು ಎಂದು ಆಗ್ರಹಿಸಿದರು.

9ನೇ ತರಗತಿಯ ಸಮಾಜವಿಜ್ಞಾನ ಪಠ್ಯ ಪುಸ್ತಕದಲ್ಲಿ ಬಸವಣ್ಣನವರ ಚರಿತ್ರೆಗೆ ಧಕ್ಕೆ ತರುವ ಅನೇಕ ದೋಷಗಳಿವೆ. 'ಬಸವಣ್ಣನವರು ಉಪನಯನವಾದ ನಂತರ ಕೂಡಲ ಸಂಗಮಕ್ಕೆ ನಡೆದರು' ಎಂದಿದೆ. ಆದರೆ, ಅವರು ಉಪನಯನವನ್ನು ತಿರಸ್ಕರಿಸಿದ್ದರು. ಅವರು ಯಾವುದೇ ಶೈವಗುರುಗಳಿಂದ ಲಿಂಗದೀಕ್ಷೆ ಪಡೆಯಲಿಲ್ಲ. ಅವರಿಗೆ ಅರಿವೇ ಗುರುವಾಗಿತ್ತು. ಅವರು ವೀರಶೈವ ಮತವನ್ನು ಅಭಿವೃದ್ಧಿಪಡಿಸಲಿಲ್ಲ. ಲಿಂಗಾಯತ ಧರ್ಮವನ್ನು ಸ್ಥಾಪಿಸಿದರು. ಅವರು ತಮ್ಮ ಧಾರ್ಮಿಕ, ಸಾಮಾಜಿಕ, ಚಳವಳಿಯನ್ನು ಮಂಗಳವೇಡದಲ್ಲಿ ಆರಂಭಿಸಲಿಲ್ಲ ಕಲ್ಯಾಣದಲ್ಲಿ ಆರಂಭಿಸಿದರು. 'ಕಾಯಕ ತತ್ವ' ರೂಪಿಸಿದವರು ಬಸವಣ್ಣನವರು. 'ಕಾಯಕವೇ ಕೈಲಾಸ' ಎಂದು ಹೇಳಿದವರು ಎಂದರು.

ಬಿಜೆಪಿ ಮುಖಂಡ ಕೇಬಲ್ ಮಹೇಶ್ ಮಾತನಾಡಿ, ಬಸವಣ್ಣನವರ ವಿಚಾರಧಾರೆ ಮೇಲೆ ನಿರಂತರವಾಗಿ ದಾಳಿನಡೆಯುತ್ತಿದೆ. ಇದಕ್ಕೆ ಹೊಸ ಉದಾಹರಣೆ ಪಠ್ಯಪುಸ್ತಕ ಪರಿಷ್ಕರಣೆ ಅವಾಂತರ. ಇದನ್ನು ಸರಿಪಡಿಸದಿದ್ದರೆ ಸರ್ಕಾರ ನಗೆಪಾಟಲಿಗೀಡಾಗುತ್ತದೆ. ಇತಿಹಾಸ ಕುರಿತು ಅಸತ್ಯ ಹೇಳಿ ಗೊಂದಲ ಸೃಷ್ಟಿಸಲಾಗುತ್ತಿದೆ. ಇದು ಸರ್ಕಾರಕ್ಕೂ ಮುಜುಗರ ತಂದಿದೆ. ಬಸವಣ್ಣನವರ ಚರಿತ್ರೆಗೆ ಆಗಿರುವ ಅನ್ಯಾಯವನ್ನು ತಕ್ಷಣ ಸರಿ ಮಾಡಬೇಕು ಎಂದು ಆಗ್ರಹಿಸಿದರು.

ಮಹಾಸಭಾದ ಮುಖಂಡ ಶಿವಲಿಂಗಪ್ಪ ಮಾತನಾಡಿ, ಪಠ್ಯಪುಸ್ತಕ ಪರಿಷ್ಕರಣೆ ಸಮಿತಿಯ ಸೂತ್ರಧಾರ ಮತ್ತು ಮಾರ್ಗದರ್ಶಕರು ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು. ಪಠ್ಯಪುಸ್ತಕ ಪರಿಷ್ಕರಣೆಯಲ್ಲಿ ಆಗಿರುವ ಲೋಪವನ್ನು ಸರಿಪಡಿಸುವ ಬದಲಿಗೆ ಅದನ್ನು ಸಮರ್ಥನೆ ಮಾಡಿಕೊಳ್ಳುತ್ತಿದ್ದಾರೆ. ಸಚಿವರ ಚಿತಾವಣೆಯಿಂದಲೇ ಈ ಕೆಲಸವಾಗಿದೆ ಎಂದು ಆರೋಪಿಸಿದರು. ದೇವಾಲಪುರ ಮಠದ ಶ್ರೀ ಜಡೇಸ್ವಾಮೀಜಿ, ಬಸಳ್ಳಿಹುಂಡಿಯ ಶೀ ಬಸವರಾಜ ಸ್ವಾಮೀಜಿ, ಮಹಾಸಭಾದ ಪದಾಧಿಕಾರಿಗಳಾದ ಎಂ.ಮಾರಪ್ಪ ಸಿದ್ದಲಿಂಗ ಸ್ವಾಮಿ, ಶಿವಮಲ್ಲಪ್ಪ ಇನ್ನಿತರರರು ಇದ್ದರು.

ಐಟಿಐ ಪ್ರವೇಶಕ್ಕೆ ಅರ್ಜಿ ಆಹ್ವಾನ

ಮಂಡ್ಯ, ಜೂ.3– ಮದ್ದೂರು ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ ಪ್ರಸಕ್ತ ಸಾಲಿನ ಐಟಿಐ ಪ್ರವೇಶಕ್ಕೆ ಅರ್ಜಿ ಆಹ್ವಾನಿಸಿದೆ. ಎಸ್‌ಎಸ್‌ಎಲ್‌ಸಿ ತೇರ್ಗಡೆಯಾದ ಅಭ್ಯರ್ಥಿಗಳು ಸಂಸ್ಥೆಯಲ್ಲಿ ಅರ್ಜಿ ಪಡೆದು ಸಲ್ಲಿಸಲು ಜೂ.6 ರಂದು ಕೊನೆ ದಿನ. ಅರ್ಜಿ ಸಲ್ಲಿಸಿದವರ ರ‍್ಯಾಂಕ್ ಲಿಸ್ಟ್ ಅನ್ನು ಜೂ.9 ರಂದು ಮಧ್ಯಾಹ್ನ ಪ್ರಕಟಿಸಲಾಗುವುದು. ಸಮಾಲೋಚನೆ ಮೂಲಕ ಸೀಟು ಹಂಚಿಕೆ ಮಾಡಲಾಗುವುದು. ಮಾಹಿತಿಗೆ ದೂ:08232–298117 ಅಥವಾ ಮೊ:9845371697/9964030902 ಸಂಪರ್ಕಿಸಬಹುದು.

——— 19.91 ಲಕ್ಷ ದುರುಪಯೋಗ ———


ಜಕ್ಕನಹಳ್ಳಿ ಗ್ರಾಪಂ ಪಿಡಿಓ, ಲೆಕ್ಕ ಸಹಾಯಕ ಅಮಾನತು

ಪಾಂಡವಪುರ, ಜೂ.3–ತಾಲೂಕಿನ ಜಕ್ಕನಹಳ್ಳಿ ಗ್ರಾಮ ಪಂಚಾಯ್ತಿಯ ಅಭಿವೃದ್ಧಿ ಅಧಿಕಾರಿ ಮತ್ತು ದ್ವಿತೀಯ ದರ್ಜೆ ಲೆಕ್ಕ ಸಹಾಯಕ 19.91 ಲಕ್ಷ ರೂ.ಗಳನ್ನು ದುರುಪಯೋಗ ಪಡಿಸಿಕೊಂಡಿರುವ ಆರೋಪದ ಮೇರೆಗೆ ಅಮಾನತುಪಡಿಸಿ, ಕ್ರಿಮಿನಲ್ ಕೇಸ್ ದಾಖಲಾಗಿದೆ.

ಜಕ್ಕನಹಳ್ಳಿ ಗ್ರಾಮ ಪಂಚಾಯ್ತಿಯಲ್ಲಿ ಅವ್ಯವಹಾರ ನಡೆದಿದೆ ಎಂಬ ಆರೋಪದ ಮೇರೆಗೆ ಪರಿಶೀಲನೆಗಾಗಿ ಪಾಂಡವಪುರ ತಾಲೂಕು ಪಂಚಾಯ್ತಿ ಕಾರ್ಯನಿರ್ವಾಹಕ ಅಧಿಕಾರಿ ಆರ್.ಪಿ.ಮಹೇಶ್ ಅವರು, ತಮ್ಮ ಕಚೇರಿಯ ಸಹಾಯಕ ಲೆಕ್ಕಾಧಿಕಾರಿ, ವ್ಯವಸ್ಥಾಪಕರು ಮತ್ತು ಪ್ರಥಮ ದರ್ಜೆ ಸಹಾಯಕರನ್ನೊಳಗೊಂಡ ಮೂವರ ತಂಡವನ್ನು ರಚಿಸಿದ್ದರು. ಈ ತಂಡ ನೀಡಿದ ವರದಿಯನ್ವಯ ಜಕ್ಕನಹಳ್ಳಿ ಗ್ರಾಮ ಪಂಚಾಯ್ತಿ ಪಿಡಿಓ ಪಿ.ಶಿವಣ್ಣ ಮತ್ತು ದ್ವಿತೀಯ ದರ್ಜೆ ಲೆಕ್ಕ ಸಹಾಯಕಿ ಲೀಲಾವತಿ ಅವರನ್ನು ಅಮಾನತುಪಡಿಸಿರುವ ತಾಪಂ ಇಓ, ಕ್ರಿಮಿನಲ್ ಕೇಸ್ ದಾಖಲಿಸಿದ್ದಾರೆ.

15ನೇ ಹಣಕಾಸು ಯೋಜನೆಯಡಿ ಡಾಂಗಲ್ ಕೀಯನ್ನು ದುರುಪಯೋಗಪಡಿಸಿಕೊಂಡು ಸಾಮಗ್ರಿಗಳ ಖರೀದಿಯಲ್ಲಿ ಯಾವುದೇ ದಾಖಲಾತಿಗಳನ್ನು ನಿರ್ವಹಿಸದೇ ಅರಸೀಕೆರೆಯ ಎಸ್‌ಕೆಬಿ ಎಂಟರ್ ಪ್ರೈಸಸ್‌ಗೆ 12,91,176 ರೂ. ನೇರವಾಗಿ ಪಾವತಿಸಲಾಗಿದೆ. ಅಲ್ಲದೇ ಗ್ರಾಮ ನೈರ್ಮಲ್ಯ ಸಾಮಗ್ರಿಗಳ ಖರೀದಿಗಾಗಿ 7,00,466 ರೂ. ವೆಚ್ಚ ಮಾಡಲಾಗಿದ್ದು, ಒಟ್ಟಾರೆ 19,91,642 ರೂ.ಗಳನ್ನು ದುರುಪಯೋಗ ಮಾಡಿಕೊಂಡಿದ್ದಾರೆ ಎಂದು ಪಾಂಡವಪುರ ತಾಲೂಕು ಪಂಚಾಯ್ತಿ ಇಓ ಆರ್.ಪಿ.ಮಹೇಶ್ ನೀಡಿದ ದೂರಿನ ಮೇರೆಗೆ ಮೇಲುಕೋಟೆ ಠಾಣೆ ಪೊಲೀಸರು ಭಾರತೀಯ ದಂಡ ಸಂಹಿತೆ 406, 408, 409, 34ರಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರೆಸಿದ್ದಾರೆ.

ಇಂದು ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಜಯಂತಿ



ಮೈಸೂರು, ಜೂ.3– ಜಿಲ್ಲಾಡಳಿತ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ಜೂ.4 ರಂದು ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಜಯಂತಿಯನ್ನು ಹಮ್ಮಿಕೊಳ್ಳಲಾಗಿದೆ.

ಚುನಾವಣಾ ನೀತಿ ಸಂಹಿತೆಯ ಹಿನ್ನೆಲೆಯಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಜಯಂತಿಯನ್ನು ಅಂದು ಬೆಳಗ್ಗೆ 9.30 ಗಂಟೆಗೆ ಕೆ.ಆರ್.ವೃತ್ತದ ಬಳಿ ಇರುವ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಪ್ರತಿಮೆಗೆ ಜನಪ್ರತಿನಿಧಿಗಳು ಪುಷ್ಪಾರ್ಚನೆ ಮಾಡುವರು. ನಂತರ 10.00 ಗಂಟೆಗೆ ಜಿಲ್ಲಾಡಳಿತ ವತಿಯಿಂದ ಪುಷ್ಪಾರ್ಚನೆ ಮಾಡುವ ಮೂಲಕ ಸರಳವಾಗಿ ಹಾಗೂ ಸಾಂಕೇತಿಕವಾಗಿ ಆಚರಿಸಲಾಗುತ್ತದೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಹೆಚ್. ಚೆನ್ನಪ್ಪ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗೆ ಪ್ರವೇಶಾತಿ ಆರಂಭ

ಮೈಸೂರು, ಜೂ.3– ವರುಣದಲ್ಲಿರುವ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ 2022–23 ನೇ ಸಾಲಿಗೆ ಪ್ರವೇಶಾತಿ ನಡೆಯಲಿದ್ದು, 14 ರಿಂದ 40 ವರ್ಷದೊಳಗಿನ SSLC ಆಸಕ್ತ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದಾಗಿದೆ. ಅರ್ಜಿಗಳನ್ನು ಜೂ. 6ರೊಳಗೆ ಸಲ್ಲಿಸಬೇಕು.

ಎಲೆಕ್ಟ್ರಿಷಿಯನ್ – 20 ಸ್ಥಾನಗಳು, ಫಿಟ್ಟರ್ – 20 ಸ್ಥಾನಗಳು, ಮೆಕ್ಯಾನಿಕ್ ಎಲೆಕ್ಟ್ರಿಕ್ ವೆಹಿಕಲ್ – 24 ಸ್ಥಾನಗಳು, ಇಂಡಸ್ಟ್ರಿಯಲ್ ರಾಬರಿ ಕ್ಸ್ ಅಂಡ್ ಡಿಜಿಟಲ್ ಮ್ಯಾನುಫ್ಯಾಕ್ಚರಿಂಗ್ – 20 ಸ್ಥಾನಗಳು ಲಭ್ಯವಿವೆ. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ 0821–2971291 ಮೊಬೈಲ್ ಸಂಖ್ಯೆ 9036151328, 8618381215 ಅನ್ನು ಸಂಪರ್ಕಿಸಬಹುದು ಎಂದು ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯ ಪ್ರಾಚಾರ್ಯರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿದ್ಯುತ್ ವ್ಯತ್ಯಯ

ಮೈಸೂರು, ಜೂ.3– ಕಡಕೊಳ ವಿದ್ಯುತ್ ವಿತರಣಾ ಕೇಂದ್ರದಲ್ಲಿ ಕವಿಪ್ರನಿನಿ. ವತಿಯಿಂದ ತ್ರೈಮಾಸಿಕ ಅವಧಿಯ ನಿರ್ವಹಣಾ ಕಾಮಗಾರಿಯನ್ನು ಹಮ್ಮಿ ಕೊಳ್ಳಲಾಗಿದ್ದು, ಜೂ.5ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 5.30ರವರೆಗೆ ಕಡಕೊಳ ಇಂಡಸ್ಟ್ರೀಯಲ್ ಏರಿಯಾ, ಕೆ.ಎಂ. ಹುಂಡಿ, ಬಿ.ಜಿ. ಹುಂಡಿ, ಕೆ.ಎನ್. ಹುಂಡಿ, ಮರಸೆ, ಮಾಕನಹುಂಡಿ, ಕೂಡನಹಳ್ಳಿ, ಕೋಚನಹಳ್ಳಿ, ಬ್ಯಾತಹಳ್ಳಿ, ದಡದಹಳ್ಳಿ, ಸಿಂಧುವಳ್ಳಿ, ಚಿಕ್ಕಕಾನ್ಯ ಮತ್ತು ದೊಡ್ಡಕಾನ್ಯ ಆಯರಹಳ್ಳಿ, ಕಿರಾಳು, ಕೂಡನಹಳ್ಳಿ, ದೂರ, ಮುರುಡಗಳ್ಳಿ, ತಳೂರು, ಡಿ.ಕಾಟೂರು, ಟಿ.ವಿ.ಎಸ್. ಫ್ಯಾಕ್ಟರಿ ಹಾಗೂ ಸುತ್ತ–ಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ನಿಲುಗಡೆ ಯಾಗುವುದು ಎಂದುಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನೇಹಾಗೆ ರೈಫಲ್ ಶೂಟಿಂಗ್‌ನಲ್ಲಿ ಬೆಳ್ಳಿ, ಕಂಚು



ಮೈಸೂರು: ಇಲ್ಲಿನ ಬಿಇಎಂಎಲ್ ಬಡಾವಣೆಯ ಕ್ರೈಸ್ತ ಪಬ್ಲಿಕ್ ಶಾಲೆಯ ಹತ್ತನೇ ತರಗತಿ ವಿದ್ಯಾರ್ಥಿ ಎಚ್. ನೇಹಾ, ಹುಬ್ಬಳ್ಳಿಯಲ್ಲಿ ನಡೆದ ಅಂತರರಾಜ್ಯ ರೈಫಲ್ ಶೂಟಿಂಗ್ ಸ್ಪರ್ಧೆಯಲ್ಲಿ ಯುವತಿಯರ ವಿಭಾಗದಲ್ಲಿ 1 ಬೆಳ್ಳಿ ಹಾಗೂ ಮಹಿಳೆಯರ ವಿಭಾಗದಲ್ಲಿ 1 ಕಂಚಿನ ಪದಕ ಪಡೆದಿದ್ದಾರೆ. ಇದಲ್ಲದೆ ಬೆಂಗಳೂರಿನಲ್ಲಿ ನಡೆದ ಜಿಲ್ಲಾ ಮಟ್ಟದ ರೈಫಲ್ ಶೂಟಿಂಗ್ ಸ್ಪರ್ಧೆಯಲ್ಲಿ 1 ಬೆಳ್ಳಿ ಮತ್ತು 1 ಕಂಚಿನ ಪದಕ ಪಡೆದಿರುತ್ತಾರೆ. ಇವರು ಪಾಲಿಕೆ ಸದಸ್ಯ ನಿರ್ಮಲ ಹರೀಶ್ ಮತ್ತು ಉದ್ಯಮಿ ಹಳ್ಳಿಹಟ್ಟಿ ಹರೀಶ್‌ಕುಮಾರ್ ಪುತ್ರಿ.

ನಕ್ಕರೆ ಅದೇ ಸ್ವರ್ಗ

ಭಾಷಣಕಾರ : ನಾನು ತುಂಬಾ ಹೊತ್ತು ಮಾತನಾಡಿದೆ, ನನ್ನ ಮಾತನ್ನು ಈಗ ಮುಗಿಸುತ್ತೇನೆ

ಶೋತೃಗಳು : ನಿಲ್ಲಿಸಬೇಡಿ, ದಯವಿಟ್ಟು ಮುಂದುವರಿಸಿ ಸಾರ್

ಭಾಷಣಕಾರ : ಏನು, ನನ್ನ ಭಾಷಣ ಅಷ್ಟು ಇಷ್ಟವಾಯಿತೇ?

ಶೋತೃಗಳು : ಇಲ್ಲ ಸಾರ್, ಹೊರಗೆ ಇನ್ನೂ ಮಳೆಯಾಗ್ತಾ ಇದೆ!

ಮೈಸೂರು ಮಿತ್ರ

ಶನಿವಾರ, 4 ಜೂನ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ. ಗೋವಿಂದೇಗೌಡ *M.A.*

ಅಮೃತವಾಹಿನಿ

ಉನ್ನತಿಯ ದಾರಿಯಲ್ಲಿ ಸಭ್ಯತೆಯ ಅಗತ್ಯ ಹೆಚ್ಚು ಇರುತ್ತದೆ.

–ಎಡ್ವರ್ಡ್ ಯಂಗ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಅರಸನಿಲ್ಲದ ರಾಜ್ಯ ದೀಪವಿಲ್ಲದ ಮನೆ ಇದ್ದಂತೆ

ನಿಮ್ಮ ಪತ್ರಗಳು

ಕೆಪಿಎಸ್ಸಿಗೆ ಯುಪಿಎಸ್ಸಿ ಪರೀಕ್ಷಾ ಮಾದರಿಯಾಗಲಿ

ಮಾನ್ಯರೆ,

ಯುಪಿಎಸ್ಸಿ ಪರೀಕ್ಷೆಗಳು ಸುಗಮವಾಗಿ ನಡೆದು ಯಾವುದೇ ಭ್ರಷ್ಟಾಚಾರ, ಪಕ್ಷಪಾತವಿಲ್ಲದೆ ಫಲಿತಾಂಶ ಪ್ರಕಟವಾಗುತ್ತಿದೆ. ಅಭ್ಯರ್ಥಿಗಳಿಗೆ ಸುಗಮವಾಗಿ ಉದ್ಯೋಗ ಸಿಗುತ್ತದೆ. ಅದೇ ಕೆಪಿಎಸ್ಸಿ ಎಂದರೆ ಅರ್ಹತೆ, ಮಾನದಂಡಕ್ಕಿಂತ ಹೆಚ್ಚಾಗಿ ಇಂತಿಂಥ ಹುದ್ದೆಗೆ ಇಷ್ಟಿಷ್ಟು ಹಣದ ಬೇಡಿಕೆ, ಪ್ರಭಾವಿಗಳ ಪ್ರಭಾವ ಬಳಕೆ ಎದ್ದು ಕಾಣುತ್ತದೆ. ಯುಪಿಎಸ್ಸಿಯನ್ನು ಕೆಪಿಎಸ್ಸಿ ಅನುಕರಣೆ ಮಾಡಿದರೆ ಪಾರದರ್ಶಕತೆಯನ್ನು ಇಲ್ಲೂ ಕಾಣಬಹುದು. ಯಾವುದೇ ಒಬ್ಬ ಅಭ್ಯರ್ಥಿ ಕೆಪಿಎಸ್ಸಿ ನಡೆಸುವ ಸ್ಪರ್ಧಾತ್ಮಕ ಪರೀಕ್ಷೆ ಬರೆದು ಫಲಿತಾಂಶ ಪ್ರಕಟವಾಗಿ ಎಲ್ಲಾ ಪ್ರಕ್ರಿಯೆಗಳು ಮುಗಿಯುವ ತನಕ 2–4 ವರ್ಷ ಹಿಡಿಯುತ್ತದೆ. ಇಷ್ಟೊಂದು ತಡವಾಗಲೂ ಕಾರಣವಾದರೂ ಏನು? ಆಯೋಗವು ಅಧಿಸೂಚನೆ ಹೊರಡಿಸುವ ಮುನ್ನ ಇಷ್ಟು ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ ಸರ್ಕಾರದ ಮಟ್ಟದಲ್ಲಿ ಅಂಗೀಕಾರ ಪಡೆದಿರುವುದಿಲ್ಲವೇ? ಅರ್ಥವಾಗದ ಕೆಪಿಎಸ್ಸಿ ನಡೆ ತಲೆ ನೋವಾಗಿ ಪರಿಣಮಿಸಿದೆ. ಈಗಷ್ಟೇ ಪೊಲೀಸ್ ಸಬ್ ಇನ್ಸ್‌ಪೆಕ್ಟರ್, ಪ್ರಾಧ್ಯಾಪಕರ ನೇಮಕ ಹಗರಣ ಬೆಳಕಿಗೆ ಬಂದಿದೆ. ಕೆಪಿಎಸ್ಸಿಯಲ್ಲಿ ಪ್ರತಿ ಸಲ ನಡೆಯುವ ಭ್ರಷ್ಟಾಚಾರ, ಪ್ರಶ್ನೆ ಪತ್ರಿಕೆ ಸೋರಿಕೆ, ಪರೀಕ್ಷಾ ಕೇಂದ್ರಗಳ ಅಕ್ರಮಗಳ ಆರೋಪಗಳು. ಇವೆಲ್ಲವೂ ಪದೇ ಪದೆ ಪುನರಾವರ್ತನೆ ಆಗುತ್ತಿರುವುದರಿಂದ ಬಡ ಪ್ರತಿಭಾನ್ವಿತ ಅಭ್ಯರ್ಥಿಗಳಿಗೆ ಸರ್ಕಾರಿ ಉದ್ಯೋಗದ ಮೇಲೆ ಭರವಸೆ ಕಳೆದು ಹೋಗಿದೆ. ರಾಜ್ಯವೇ ಬೆಚ್ಚಿ ಬಿದ್ದ ಪದವಿ ಪಡೆಯದ ಎಷ್ಟೋ ಅರ್ಹತೆ ಇಲ್ಲದವರು ಕೆಲಸ ಗಿಟ್ಟಿಸಿಕೊಂಡಿದ್ದ ಇತ್ತೀಚಿನ "ಪಿಎಸ್‌ಐ ನೇಮಕಾತಿ ಹಗರಣ". ಕಣ್ಣಿಗೆ ಕಾಣದ್ದು ಇನ್ನೂ ಎಷ್ಟೋ ಇರಬಹುದು.! ಊಹಿಸಲು ಸಾಧ್ಯವೆ?

ಸರ್ಕಾರದ ಸುಪರ್ದಿಯಲ್ಲಿರುವ ಲೋಕಸೇವಾ ಆಯೋಗ, ಪೊಲೀಸ್ ನೇಮಕಾತಿ, ಪಿಡಬ್ಲ್ಯೂಡಿ, ಹಾಲಿನ ಮಂಡಳಿ, ಶಿಕ್ಷಣ ಇಲಾಖೆ, ವಿವಿಧ ಸಚಿವಾಲಯಗಳಲ್ಲಿ ನಡೆಯುವ ನೇರ ನೇಮಕಾತಿ ಪ್ರಕ್ರಿಯೆಗಳೆಲ್ಲವೂ ಅತಿಯಾದ ಲಂಚತನ, ರಾಜಕಾರಣಿಗಳ ಪ್ರಭಾವ, ಭ್ರಷ್ಟಾಚಾರದ ಕೂಪವನ್ನು ಹೊತ್ತು ನಿಂತಿರುತ್ತವೆ! ಕರ್ನಾಟಕದಲ್ಲಿ ಸರ್ಕಾರಿ ಉದ್ಯೋಗ ಪಡೆಯಬೇಕಾದರೆ ಪ್ರತಿಭೆ ಮಾನದಂಡಕ್ಕಿಂತ ಹಣವಿದ್ದವರಿಗೆ ಮಾತ್ರ ಎನ್ನುವ ವಾತಾವರಣ ನಿರ್ಮಾಣವಾಗಿದೆ. ಸದ್ಯ ಹಗರಣಗಳ ಸಂತೆ ಆಗಿರುವ ಕೆಪಿಎಸ್ಸಿ ಯನ್ನು ರದ್ದು ಮಾಡಬೇಕು! ಇಲ್ಲವೆ? ಜಂಟಿ ಲೋಕಾ ಸೇವಾ ಆಯೋಗ ಪ್ರಾಧಿಕಾರ ರಚನೆ ಆಗಬೇಕಿದೆ! ಅಥವಾ, "ಕೆಪಿಎಸ್ಸಿ"ಯಲ್ಲಿ ಭ್ರಷ್ಟಾಚಾರದ ಬುಡದ ಬೇರನ್ನು ಕಿತ್ತು ಎಸೆಯುವ ಮೂಲಕ ಸಮಗ್ರ ಬದಲಾವಣೆ ತರುವ ನಿಟ್ಟಿನಲ್ಲಿ ಹಗಲಿರುಳು ಶ್ರಮಿಸಿ ಸರ್ಕಾರಿ ಉದ್ಯೋಗಕ್ಕಾಗಿ ಅಭ್ಯಸಿಸುವವರ ಹಿತ ದೃಷ್ಟಿಯಿಂದ ಅಮೂಲಾಗ್ರ ಚಿಂತನೆ ನಡೆಸಿ ಇನ್ನಾದರೂ ತಕ್ಷಣ ಎಚ್ಚೆತ್ತುಕೊಂಡು ಅಗತ್ಯ ಮಾರ್ಪಾಡು ಮಾಡುವ ಸಂಬಂಧ ಆಯೋಗಕ್ಕೆ ಸೂಚನೆ ನೀಡಬೇಕು.

ಯಾವುದೇ ಹುದ್ದೆಗಳಿಗೂ ನೇಮಕಾತಿಯಾದರೂ ಬರೆದ ಪರೀಕ್ಷೆಯ ಫಲಿತಾಂಶ ತೀರಾ ನಿಧಾನವಾಗದೆ ವೇಳಾಪಟ್ಟಿಯಂತೆ ಸುಸೂತ್ರವಾಗಿ ಶೀಘ್ರ ನಡೆಯಲು ನಿರ್ಧರಿಸಬೇಕು ಒಂದು ವರ್ಷದೊಳಗೆ ಎಲ್ಲಾ ಪ್ರಕ್ರಿಯೆಗಳು ಮುಗಿಯುವ ರೀತಿಯಲ್ಲಿ ಬದಲಾವಣೆಯ ಪರ್ವ ಆಗಬೇಕು. ಆಗ, ಎಷ್ಟೋ ಸಮಸ್ಯೆಗಳಿಗೆ ತಿಲಾಂಜಲಿ ಇಡಬಹುದು.!

– ಅನಿಲ್ ಕುಮಾರ್, ನಂಜನಗೂಡು

ಉನ್ನತ ಅಧಿಕಾರಿಗಳು ದರ್ಪ ತೋರದಿರಲಿ

ಮಾನ್ಯರೆ,

ಇತ್ತೀಚೆಗೆ ಐಎಎಸ್ ಅಧಿಕಾರಿಗಳಾದ ಸಂಜೀವ್ ಖಿರ್ವಾರ್, ಪತ್ನಿ ರಿಂಕು ದುಗ್ಗಾ ತಮ್ಮೊಂದಿಗೆ ನಾಯಿಯನ್ನು ವಿಹಾರಕ್ಕೆ ಕರೆದುಕೊಂಡು ಹೋಗಲು ದಿಲ್ಲಿಯಲ್ಲಿರುವ ಸರ್ಕಾರಿ ಸ್ವಾಮ್ಯದ ತ್ಯಾಗರಾಜ್ ಕ್ರೀಡಾಂಗಣದಲ್ಲಿ ನಿಗದಿತ ಅವಧಿಗೂ ಮುನ್ನವೇ ಕ್ರೀಡಾ ಚಟುವಟಿಕೆಗಳನ್ನು ಸ್ಥಗಿತಗೊಳಿಸಿ, ಕ್ರೀಡಾಪಟುಗಳನ್ನು ಹೊರಗೆ ಕಳುಹಿಸಿ ಕ್ರೀಡಾಂಗಣವನ್ನು ಸ್ವಾರ್ಥಕ್ಕೆ ಬಳಸಿಕೊಂಡು ಅಧಿಕಾರ ದರ್ಪ ತೋರಿದರು. ಇದೇ ರೀತಿ ಹೈದರಾಬಾದ್‌ನಲ್ಲಿ ಮುಷರಫ್ ಅಲಿ ಫಾರೂಕಿ ಎಂಬ ಐಎಎಸ್ ಅಧಿಕಾರಿ ತಾನು ಟೆನ್ನಿಸ್ ಆಡುವಾಗ ವಿಲೇಜ್ ರೆವೆನ್ಯೂ ಅಸಿಸ್ಟೆಂಟ್‌ಗಳನ್ನು ಬಾಲ್ ಬಾಯ್ಸ್‌ಗಳನ್ನಾಗಿ ಬಳಸಿಕೊಂಡ ಘಟನೆ ನಡೆದಿತ್ತು ಹೀಗೆ ದೇಶದಾದ್ಯಂತ ಕೆಲವು ಉನ್ನತ ಅಧಿಕಾರಿಗಳು ತಮ್ಮ ವೈಯಕ್ತಿಕ ಹಿತಾಸಕ್ತಿಗೆ ಕೆಳಹಂತದ ಸರ್ಕಾರಿ ನೌಕರರನ್ನು ಬಳಸಿಕೊಳ್ಳುತ್ತಿರುವುದು ಖಂಡನಾರ್ಹ.

ಜನರ ಸೇವೆ ಮಾಡಬೇಕೆಂಬ ಉದ್ದೇಶ ಇಟ್ಟುಕೊಂಡು ಬಂದವರು ಈ ರೀತಿ ಅಧಿಕಾರ ದುರುಪಯೋಗ ಮಾಡಿಕೊಂಡು ದರ್ಪ ಮೆರೆಯುವುದು ಇವರ ಸ್ಥಾನಕ್ಕೆ ಶೋಭೆ ತರದು. ಇಂತಹ ಅಧಿಕಾರಿಗಳ ಮೇಲೆ ಸರ್ಕಾರ ಕಠಿಣ ಕ್ರಮ ಕೈಗೊಂಡು ಈ ರೀತಿಯ ಘಟನೆಗಳು ಮರುಕಳಿಸದಂತೆ ಎಚ್ಚರಿಕೆ ಸಂದೇಶ ನೀಡಬೇಕಿದೆ.

–ಚನ್ನಕೇಶವ ಜಿ, ಕೆ. ತರೀಕೆರೆ

ಪಠ್ಯ ವಾಪಸ್ ಚಳವಳಿಗೆ ಸರ್ಕಾರ ಬಗ್ಗದಿರಲಿ!

ಮಾನ್ಯರೆ,

ಪಠ್ಯಪುಸ್ತಕ ಪರಿಷ್ಕರಣೆ ವಿವಾದವು ದಿನದಿಂದ ದಿನಕ್ಕೆ ತೀವ್ರಸ್ವರೂಪ ಪಡೆದುಕೊಳ್ಳುತ್ತಿದ್ದು, ಕೆಲ ಸಾಹಿತಿಗಳು ಪಠ್ಯದಲ್ಲಿ ತಮ್ಮ ಕಥೆ, ಕವಿತೆ ಹಾಗೂ ಲೇಖನ ಬೋಧಿಸುವುದು ಬೇಡ ಹಾಗೂ ಈಗಾಗಲೇ ಪಠ್ಯದಲ್ಲಿ ಅಳವಡಿಸಿರುವ ತಮ್ಮ ಬರಹಗಳನ್ನು ವಾಪಸ್ ಪಡೆಯುತ್ತೇವೆ ಎಂದು ಶಿಕ್ಷಣ ಸಚಿವರು ಹಾಗೂ ಸರ್ಕಾರಕ್ಕೆ ಪತ್ರ ಬರೆಯುತ್ತಿರುವುದು ಬೇಸರದ ಸಂಗತಿಯಾಗಿದೆ.

ಈಗಾಗಲೇ ಮುದ್ರಣ ಹಂತದಲ್ಲಿರುವ ಪಠ್ಯಪುಸ್ತಕಗಳನ್ನು ಮರು ಪರಿಷ್ಕರಣೆ ಮಾಡಲು ಸಾಧ್ಯವಿಲ್ಲ ಎಂದು ಶಿಕ್ಷಣ ಸಚಿವರು ಸ್ಪಷ್ಟಪಡಿಸಿದ್ದರೂ, ಕೆಲ ಸಾಹಿತಿಗಳು ಹಠಕ್ಕೆ ಬಿದ್ದು ಪಠ್ಯ ವಾಪಸ್ ಚಳುವಳಿಗೆ ಬೆಂಬಲ ನೀಡುತ್ತಿರುವುದು ಸರಿಯಲ್ಲ. ಸಾಹಿತಿಗಳ ಪಠ್ಯ ವಾಪಸ್ ಚಳವಳಿಗೆ ಸರ್ಕಾರ ಬಗ್ಗದಿರುವುದು ಒಳಿತು. ಏಕೆಂದರೆ ಕನ್ನಡ ಸಾಹಿತ್ಯ ಪರಂಪರೆ ಸಮೃದ್ಧವಾಗಿದೆ. ಕನ್ನಡ ಸಾಹಿತ್ಯದಲ್ಲಿ ಉತ್ಕೃಷ್ಟ ಮಟ್ಟದ ಕಥೆ, ಕವಿತೆ ಹಾಗೂ ಲೇಖನಗಳಿಗೆ ಬರವಿಲ್ಲ. ಪರಿಸ್ಥಿತಿ ಹೀಗಿರುವಾಗ ಪಠ್ಯ ವಾಪಸ್ ಪಡೆಯುವವರು ಪಡೆಯಲಿ, ಅಡ್ಡಿಯಿಲ್ಲ. ಸರ್ಕಾರ ಯಾವುದಕ್ಕೂ ಅಂಜದೆ, ಕುವೆಂಪು, ದ.ರಾ. ಬೇಂದ್ರೆ, ಮಾಸ್ತಿ ಹಾಗೂ ರನ್ನ, ಜನ್ನ, ಪಂಪ, ರಾಘವಾಂಕ, ಬಸವಣ್ಣ, ಜೇಡರ ದಾಸಿಮಯ್ಯ, ಸರ್ವಜ್ಞರಂತಹ ಹಿರಿಯ ಕವಿಗಳ ಪದ್ಯಗಳನ್ನು ಮಕ್ಕಳ ಪಠ್ಯಗಳಲ್ಲಿ ಅಳವಡಿಸಲಿ. ಆ ಮೂಲಕ ಕನ್ನಡ ಸಾಹಿತ್ಯ ಪರಂಪರೆಯನ್ನು ಮಕ್ಕಳಿಗೆ ಹಾಗೂ ಯುವ ಪೀಳಿಗೆಗೆ ಪರಿಚಯಿಸುವ ಉದಾತ್ತ ಕಾರ್ಯವನ್ನು ಮಾಡಲಿ.

–ಹರಳಹಳ್ಳಿ ಪುಟ್ಟರಾಜು, ಪಾಂಡವಪುರ.

ದಿಕ್ಕುದೆಸೆ



ಕಾರ್ಕಳ ಆನಂದಭಟ್
ಮೊ. 7676554198


ಪೆಟ್ರೋಲ್–ಡೀಸೆಲ್ ಬೆಲೆ: ವಿಪಕ್ಷ ರಾಜಕೀಯ

2020 ರಿಂದ ಜಗತ್ತಿನ ಎಲ್ಲ ಸರಕಾರಗಳು ಕೊರೊನಾ ಯಾತನೆಯಿಂದ ಭಾಗಶಃ ಬಿಡುಗಡೆಯಾದ ನಂತರ ಆರ್ಥಿಕ ಪುನಃಶ್ಚೇತನಕ್ಕಾಗಿ ಪ್ರಯಾಸ ಪಡುತ್ತಿವೆ. ಇತ್ತೀಚೆಗೆ ಆರಂಭವಾಗಿರುವ ಉಕ್ರೇನ್ ಯುದ್ಧ ಮತ್ತೆ ಹೊಡೆತ ನೀಡಿದೆ. ಈ ಯುದ್ಧದಿಂದ ಕಚ್ಚಾತೈಲದ ಬೆಲೆಯಲ್ಲಾದ ಭಾರೀ ಏರಿಕೆಯಿಂದ ಜಗತ್ತು ತತ್ತರಿಸಿದೆ. ಆದರೆ ಸಮಯೋಚಿತ ನಿರ್ಣಯಗಳು, ಚಾಣಾಕ್ಷ ನಡೆಗಳಿಂದ ಜಗತ್ತೇ ಬೆರಗಾಗುವ ರೀತಿಯಲ್ಲಿ ಭಾರತ ಅತ್ಯಂತ ತ್ವರಿತ ಗತಿಯಲ್ಲಿ ಚೇತರಿಸಿಕೊಂಡಿತು. ಅಂತಾರಾಷ್ಟ್ರೀಯ ಹಣಕಾಸು ನಿಧಿ (ಐಎಂಎಫ್) ವರದಿಯಂತೆ 2022–23ರಲ್ಲಿ ಜಾಗತಿಕ ಆರ್ಥಿಕ ಬೆಳವಣಿಗೆ ದರವಾದ 3.6% ಹೋಲಿಸಿದರೆ ಭಾರತದ್ದು ಜಗತ್ತಿನಲ್ಲೇ ಅತೀ ಹೆಚ್ಚು ಶೇ.8.2 ಆಗಿರುತ್ತದೆ.

ಭಾರತವು ಕೊರೊನಾದಿಂದ ಸೃಷ್ಟಿಯಾದ ಸಾಮಾಜಿಕ, ಆರ್ಥಿಕ ಸವಾಲುಗಳನ್ನು ಅವಕಾಶವಾಗಿ ಪರಿವರ್ತಿಸಿತು. ಸಂಕಷ್ಟದ ಸಮಯದಲ್ಲಿ ಸರಕಾರವು ನೀಡಿದ 20 ಲಕ್ಷ ಕೋಟಿಯ ಆತ್ಮನಿರ್ಭರ ಭಾರತ ಪ್ಯಾಕೇಜ್ ದೇಶದ ಆರ್ಥಿಕತೆಗೆ ಚೇತರಿಕೆ ನೀಡಿತು. ಭಾರತ ಸರಕಾರವು ದೇಶದ 80 ಕೋಟಿ ನಾಗರಿಕರಿಗೆ ಉಚಿತ ಪಡಿತರ ನೀಡಿತು. ದೇಶದ ಆರ್ಥಿಕತೆಯ ಪ್ರಮುಖ ಕ್ಷೇತ್ರಗಳನ್ನು ಪುನಃಶ್ಚೇತನಗೊಳಿಸಲು ರಾಷ್ಟ್ರೀಯ ಮೂಲಭೂತ ಸೌಕರ್ಯಗಳ ನಿರ್ಮಾಣಕ್ಕಾಗಿ 111 ಲಕ್ಷ ಕೋಟಿ ಹೂಡಿಕೆ ಮಾಡಿದೆ. ಇದನ್ನು ಸರಕಾರದ ಆದಾಯದಲ್ಲಿ ಕುಸಿತದ ನಂತರವೂ ಹಾಗೂ ರಾಜ್ಯ ಸರಕಾರಗಳಿಗೆ ಅಪೇಕ್ಷಿತ ಪ್ರಮಾಣದಲ್ಲಿ ಸಹಾಯ ನೀಡಿದ ನಂತರವೂ ಸಾಧಿಸಿರುವುದು ಗಮನಾರ್ಹವಾಗಿದೆ. ಕೇಂದ್ರ ಸರಕಾರವು ಒಕ್ಕೂಟ ತತ್ವಕ್ಕನುಗುಣವಾಗಿ, ಸೈದ್ಧಾಂತಿಕ ಹಾಗೂ ಭಾವನಾತ್ಮಕವಾಗಿ ಯಾವುದೇ ರೀತಿಯ ತಾರತಮ್ಯವಿಲ್ಲದೇ ರಾಜ್ಯ ಸರಕಾರಗಳಿಗೆ ಆರ್ಥಿಕ ಸಹಾಯ ನೀಡಿತು. ಕೊರೊನಾ ಮಹಾಮಾರಿಯ ನಂತರ ಅಂತರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾತೈಲ ಬೆಲೆಯಲ್ಲಿ ಭಾರೀ ಏರಿಕೆಯಾಗಿದೆ. ದೇಶದ ಪೆಟ್ರೋಲಿಯಂ ಉತ್ಪನ್ನಗಳ ಬೇಡಿಕೆಯ ಶೇ.85ರಷ್ಟು ಆಮದು ಮಾಡಿಕೊಳ್ಳುವಂತಹ ಸ್ಥಿತಿಯಲ್ಲಿಯೂ ರಾಜ್ಯಗಳಿಗೆ, ಜನಸಾಮಾನ್ಯರಿಗೆ ಸರ್ವ ರೀತಿಯ ನೆರವನ್ನು ನೀಡಲು ಶ್ರಮಿಸುತ್ತಿದೆ.

ಭಾರತದಲ್ಲಿ ಆಮದಿತ ಪೆಟ್ರೋಲಿಯಂ ಉತ್ಪನ್ನಗಳನ್ನು ಪ್ರತಿ ದಿನ ಸುಮಾರು ಆರು ಕೋಟಿ ಜನರು ಪೆಟ್ರೋಲ್ ಬಂಕ್‌ಗಳು, ರಿಟೈಲ್ ಔಟ್‌ಲೆಟ್‌ಗಳಿಂದ ಖರೀದಿಸುತ್ತಾರೆ. ಇದರಲ್ಲಿ ಶೇ.90ರಷ್ಟು ವಾಹನಗಳ ಬಳಕೆಗೆ ಉಪಯೋಗವಾಗುತ್ತಿದೆ. ದೇಶದ ಆರ್ಥಿಕತೆಯು ಚೇತರಿಕೆ ಮತ್ತು ವೇಗ ಪಡೆಯುವುದರೊಂದಿಗೆ ಇಂಧನ ಬೇಡಿಕೆಯಲ್ಲೂ ಏರಿಕೆಯಾಗಲಿದೆ. ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ತೈಲ ಬೆಲೆ ಏರುತ್ತಿದ್ದರೂ ಕೇಂದ್ರ ಸರಕಾರವು ಜನಸಾಮಾನ್ಯರಿಗೆ ಕೇವಲ ಕನಿಷ್ಠ ಏರಿಕೆಯ ಹೊರೆಯನ್ನು ವರ್ಗಾಯಿಸುತ್ತಿದೆ. ಈ ಹಿನ್ನೆಲೆಯಲ್ಲಿ ಕೇಂದ್ರ ಸರಕಾರವು ಇತ್ತೀಚೆಗೆ ಪೆಟ್ರೋಲ್, ಡೀಸೆಲ್ ಮೇಲಿನ ಅಬಕಾರಿ ಸುಂಕವನ್ನು ಇಳಿಸಿ ಜನಸಾಮಾನ್ಯರಿಗೆ ಇನ್ನಷ್ಟು ನಿರಾಳತೆ ನೀಡಿರುವುದನ್ನು ಗಮನಿಸಬಹುದು.

2021 ಏಪ್ರಿಲ್‌ನಿಂದ 2022 ಏಪ್ರಿಲ್‌ವರೆಗಿನ ಅವಧಿಯಲ್ಲಿ ಜಗತ್ತಿನ ಪ್ರಮುಖ ಅಭಿವೃದ್ಧಿ ದೇಶಗಳೊಂದಿಗೆ ತುಲನೆ ಮಾಡಿದಲ್ಲಿ, ದೇಶದಲ್ಲಿ ತೈಲ ಬೆಲೆ ಏರಿಕೆ ಪ್ರಮಾಣ ಕೇವಲ ಶೇ.16ರಷ್ಟು ಮಾತ್ರ ಆಗಿದೆ. ಅಮೆರಿಕದಲ್ಲಿ ಶೇ.50.6, ಕೆನಡಾದಲ್ಲಿ ಶೇ.50.7, ಜರ್ಮನಿ ಶೇ.50, ಇಂಗ್ಲೆಂಡ್ ಶೇ.50.9 ಮತ್ತು ಫ್ರಾನ್ಸ್‌ನಲ್ಲಿ ಶೇ.33ರಷ್ಟು ಪೆಟ್ರೋಲಿಯಂ ಉತ್ಪನ್ನಗಳ ಬೆಲೆಯಲ್ಲಿ ಏರಿಕೆಯಾಗಿದೆ.



> ಕಳೆದ ಎಂಟು ವರ್ಷಗಳಲ್ಲಿ ರಾಜ್ಯ ಸರಕಾರಗಳು 15 ರಿಂದ 16 ಲಕ್ಷ ಕೋಟಿ ರೂ. ತೈಲ ಸುಂಕ ಸಂಗ್ರಹಿಸಿವೆ. ಕೇಂದ್ರವೂ ರಾಜ್ಯ ಸರಕಾರಗಳಿಗೆ ರಾಜಸ್ವ ಸಂಗ್ರಹದಲ್ಲಿ ಶೇ.42ರಷ್ಟು ನೀಡುತ್ತಿದೆ. ಅದೇ ರೀತಿ ಜಿಎಸ್‌ಟಿ ಸಂಗ್ರಹದಲ್ಲಿ ಹೆಚ್ಚಿನ ಪಾಲನ್ನು ನೀಡುತ್ತಿದೆ. ಈ ರೀತಿ ರಾಜ್ಯ ಸರಕಾರಗಳಿಗೆ ತೆರಿಗೆ, ಅನುದಾನಗಳನ್ನು ನೀಡಿದ ನಂತರವೂ ಕೆಲವು ಸರಕಾರಗಳು ಗ್ರಾಹಕರಿಗೆ ಲಾಭವನ್ನು ವರ್ಗಾಯಿಸಲು ನಿರ್ಲಕ್ಷ್ಯ ತೋರುತ್ತಿವೆ. ವಿಪಕ್ಷ ಸರಕಾರಗಳು ತಮ್ಮ ಪಾಲಿನ ಅಬಕಾರಿ ಸುಂಕ ಕಡಿತಗೊಳಿಸಲು ನಿರಾಕರಿಸುತ್ತಿವೆ ಹಾಗೂ ತೈಲ ಬೆಲೆಗೆ ಸಂಬಂಧಿಸಿದಂತೆ ಕೇಂದ್ರ ಸರಕಾರವನ್ನು ದೂಷಿಸುತ್ತಿರುವುದು ಕೇವಲ ಬೂಟಾಟಿಕೆಯಾಗಿದೆ.

ದೇಶದಲ್ಲಿ ಕಳೆದ ಐವತ್ತು ವರ್ಷಗಳಲ್ಲಿ ಪೆಟ್ರೋಲಿಯಂ ಉತ್ಪನ್ನಗಳ ಬೆಲೆಯಲ್ಲಾದ ಏರಿಕೆಯನ್ನು ಗಮನಿಸಿದಲ್ಲಿ ಪ್ರತೀ ಲೀಟರ್‌ಗೆ 2014 ರಿಂದ 2022ರ ಅವಧಿಯಲ್ಲಿ ಶೇ.36 (ರೂ. 77 ರಿಂದ 105 ರೂ.) ದಾಖಲಿಸಿದೆ. 1973–79ರ ಅವಧಿಯಲ್ಲಿ ರೂ. 1.25 ರಿಂದ ರೂ. 3.60 (ಶೇ.140). 1979 ರಿಂದ 1986ರಲ್ಲಿ ರೂ. 3.60 ರಿಂದ ರೂ. 8.00 (ಶೇ.122). 1986–1993ರಲ್ಲಿ ರೂ. 8.00 ರಿಂದ ರೂ. 18 (ಶೇ.125). 1993–2000ದಲ್ಲಿ ರೂ. 18.00 ರಿಂದ ರೂ. 28.00 (ಶೇ.55). 2000–2007ರಲ್ಲಿ ರೂ. 28 ರಿಂದ ರೂ. 48 (ಶೇ.70). 2007–2014ರಲ್ಲಿ ರೂ. 48 ರಿಂದ ರೂ. 77.00 (ಶೇ.60). ಕಳೆದ ಐವತ್ತು ವರ್ಷಗಳಲ್ಲಿನ ಪೆಟ್ರೋಲಿಯಂ ಉತ್ಪನ್ನಗಳ ಬೆಲೆ ಏರಿಕೆಯ ವಿಶ್ಲೇಷಣೆಯಾದಲ್ಲಿ ಕಾಂಗ್ರೆಸ್ ಸರಕಾರಗಳ ಅವಧಿಯಲ್ಲೇ ಅತೀ ಹೆಚ್ಚು ಪ್ರಮಾಣ ಏರಿಕೆಯಾಗಿರುವುದನ್ನು ಗಮನಿಸಬಹುದು. ಆದ್ದರಿಂದ ಪೆಟ್ರೋಲಿಯಂ ಉತ್ಪನ್ನಗಳ ಬೆಲೆ ಏರಿಕೆ ವಿಚಾರದಲ್ಲಿ ಇತ್ತೀಚಿನ ದಿನಗಳಲ್ಲಿ ಕಾಂಗ್ರೆಸ್ ಪ್ರದರ್ಶಿಸುತ್ತಿರುವ ಕಾಳಜಿ ಕೇವಲ ಕಪಟತನ ಎನ್ನಬಹುದು.

2010ರವರೆಗೆ ಪೆಟ್ರೋಲ್, ಡೀಸೆಲ್ ದರಗಳನ್ನು ಸರಕಾರ ನಿಗದಿಪಡಿಸುತ್ತಿತ್ತು. ಆನಂತರ ಮಾರುಕಟ್ಟೆ ಆಧಾರಿತ ಬೆಲೆ ನಿಗದಿಪಡಿಸಲು ಸರಕಾರದ ನಿಯಂತ್ರಣದಿಂದ ಮುಕ್ತಗೊಳಿಸಲಾಯಿತು. 2014 ರಿಂದ ಡೀಸೆಲ್‌ಗೂ ಇದನ್ನು ಅನ್ವಯಿಸಲಾಯಿತು. ಹೀಗಾಗಿ ಪೆಟ್ರೋಲಿಯಂ ಉತ್ಪನ್ನಗಳ ಬೆಲೆಗಳು ಪೂರೈಕೆ–ಬೇಡಿಕೆ ಆಧಾರದಲ್ಲಿ ನಿಗದಿಯಾಗುತ್ತಿದೆ. ಕೊರೊನಾದಿಂದ ಆದಾಯದಲ್ಲಿ ಕೊರತೆಯಾದರೂ ಮೋದಿ ಸರಕಾರವು ಜನಸಾಮಾನ್ಯರ ಹಿತವನ್ನು ಪರಿಗಣಿಸಿ 2021ರ ನವೆಂಬರ್‌ನಲ್ಲಿ ಪೆಟ್ರೋಲ್, ಡೀಸೆಲ್ ಮೇಲಿನ ಅಬ್ಕಾರಿ ಸುಂಕವನ್ನು ಅನುಕ್ರಮವಾಗಿ ರೂ. 5 ಮತ್ತು ರೂ. 10ರಷ್ಟು ಇಳಿಸಿತು.

ಕೇಂದ್ರದ ದಾರಿಯಲ್ಲೇ ದೇಶದ ಬಹುತೇಕ ರಾಜ್ಯ ಸರಕಾರಗಳು ಮೌಲ್ಯವರ್ಧಿತ ತೆರಿಗೆಯನ್ನು (VAT) ಕಡಿತಗೊಳಿಸಿದವು. ಆದರೆ ಕಾಂಗ್ರೆಸ್ ಬೆಂಬಲಿತ ರಾಜ್ಯಗಳಾದ ತಮಿಳ್ನಾಡು, ಜಾರ್ಖಂಡ್, ಮಹಾರಾಷ್ಟ್ರ ರಾಜ್ಯಗಳು VAT ಕಡಿತಗೊಳಿಸಲಿಲ್ಲ. ವಿಪರ್ಯಾಸವೆಂದರೆ ಇವೇ ವಿರೋಧ ಪಕ್ಷಗಳು ಬೆಲೆ ಏರಿಕೆ ವಿರೋಧಿಸುತ್ತಿವೆ. ಪ್ರಧಾನಿ ಮೋದಿಯವರು ಮುಖ್ಯಮಂತ್ರಿಗಳ ಸಭೆಯಲ್ಲಿ ಬಿಜೆಪಿ ಆಳ್ವಿಕೆಯ ರಾಜ್ಯಗಳಿಗಿಂತ ವಿಪಕ್ಷಗಳ ಸರಕಾರಗಳು ದುಪ್ಪಟ್ಟಿಗಿಂತ ಹೆಚ್ಚು ರಾಜ್ಯ ಮಟ್ಟದ ಸುಂಕ ವಿಧಿಸುತ್ತಿರುವುದನ್ನು ಗಮನಕ್ಕೆ ತಂದಿದ್ದರು.

ಆಶ್ಚರ್ಯಕರ ಸಂಗತಿಯೆಂದರೆ ಇವೇ ವಿಪಕ್ಷ ರಾಜ್ಯ ಸರಕಾರಗಳು ವಿದೇಶಿ ಮದ್ಯ, ಸ್ಪಿರಿಟ್ ಮೇಲಿನ ಅಬ್ಕಾರಿ ತೆರಿಗೆ ಇಳಿಸುವಲ್ಲಿ ಯಾವುದೇ ಸಂಕೋಚವಾಗಲೀ, ತಡವಾಗಲೀ ಮಾಡಲಿಲ್ಲ. ಮಹಾರಾಷ್ಟ್ರ ಸರಕಾರವು ವಿದೇಶಿ ಮದ್ಯಗಳ ಆಮದು ಮೇಲಿನ ಅಬ್ಕಾರಿ ಸುಂಕವನ್ನು ಶೇ.300 ರಿಂದ ಶೇ.150ಕ್ಕೆ ಇಳಿಸಿತು. ಇದೇ ತಿಂಗಳು ಆಂಧ್ರ ಸರಕಾರವು ಮದ್ಯಗಳ ಮೇಲಿನ VATನ್ನು ಶೇ.130–190 ರಿಂದ ಶೇ. 35–60ಕ್ಕೆ ಇಳಿಸಿತು. 2021 ನವೆಂಬರ್‌ನಲ್ಲಿ ರಾಜಸ್ಥಾನ ಸರಕಾರವು ಬಿಯರ್ ಮೇಲಿನ ಅಬ್ಕಾರಿ ಸುಂಕವನ್ನು ಶೇ.34 ರಿಂದ ಶೇ.31ಕ್ಕೆ ಇಳಿಸಿತು. ವಿಪಕ್ಷ ಸರಕಾರಗಳು ಜನಸಾಮಾನ್ಯರು ಅಭಿವೃದ್ಧಿಗಿಂತ ಅಮಲಿನಲ್ಲಿ ಹೆಚ್ಚು ಸುಖವಾಗಿರುತ್ತಾರೆಂಬ ಭಾವನೆಯಿಂದ ಸುಂಕ ಕಡಿತಗೊಳಿಸಿರಬಹುದು.

ಯುಪಿಎ ಸರಕಾರವು ತೈಲ ಬೆಲೆ ಏರಿಕೆಯ ಹೊರೆಯನ್ನು ಜನಸಾಮಾನ್ಯರಿಗೆ ವರ್ಗಾಯಿಸುವುದರಿಂದ ಸರಕಾರಕ್ಕೆ ಬರುವ ಅಪಖ್ಯಾತಿ ತಪ್ಪಿಸಲು ಚಾಣಾಕ್ಷತನದಿಂದ ಅಪಮಾರ್ಗವನ್ನು ಅನುಸರಿಸಿತು. 2005–12ರ ಅವಧಿಯಲ್ಲಿ ಸರಕಾರವು ತೈಲ ಕಂಪೆನಿಗಳಿಗೆ ಹಣ ಪಾವತಿಸುವ ಬದಲು 1.44 ಲಕ್ಷ ಕೋಟಿ ರೂ.ನ ಹೆಚ್ಚು ಬಡ್ಡಿ ದರದ ದೀರ್ಘಾವಧಿಯ ತೈಲ ಬಾಂಡ್‌ಗಳನ್ನು ನೀಡಿತು. ಪ್ರಸ್ತುತ ಸರಕಾರವು 3.20 ಲಕ್ಷ ಕೋಟಿಯನ್ನು ಮರುಪಾವತಿಸಬೇಕಾಗಿದೆ. ಈ ವಿಷಯದಲ್ಲಿ ಕಾಂಗ್ರೆಸ್ ಜಾಣಮೌನದ ನೀತಿಯನ್ನು ಅನುಸರಿಸುತ್ತಿದೆ. ಯುಪಿಎ ಸರಕಾರವು ತೈಲ ಅನ್ವೇಷಣೆ ಮತ್ತು ಉತ್ಪಾದನೆಗಾಗಿ ಪರವಾನಗಿ ನೀಡುವುದನ್ನು ಸಂಪೂರ್ಣ ಸ್ಥಗಿತಗೊಳಿಸಿತು. ಯುಪಿಎ ಸರಕಾರದ ನಿರಂತರ ವೈಫಲ್ಯ ಹಾಗೂ ತಪ್ಪು ನೀತಿಗಳು ಭಾರತದ ಇಂಧನ ಭದ್ರತೆಗೆ ಭಾರೀ ಹೊಡೆತ ನೀಡಿತು. ಆದರೂ ಕಾಂಗ್ರೆಸ್ ನಾಯಕರು ತಮ್ಮ ತಪ್ಪು, ವೈಫಲ್ಯಗಳನ್ನು ಮರೆಮಾಚಿ ಮೋದಿ ಸರಕಾರದತ್ತ ಬೆರಳು ತೋರಿಸುತ್ತಿದ್ದಾರೆ.

ಕಳೆದ ಎಂಟು ವರ್ಷಗಳಲ್ಲಿ ರಾಜ್ಯ ಸರಕಾರಗಳು 15 ರಿಂದ 16 ಲಕ್ಷ ಕೋಟಿ ರೂ. ತೈಲ ಸುಂಕ ಸಂಗ್ರಹಿಸಿವೆ. ಕೇಂದ್ರವೂ ರಾಜ್ಯ ಸರಕಾರಗಳಿಗೆ ರಾಜಸ್ವ ಸಂಗ್ರಹದಲ್ಲಿ ಶೇ.42ರಷ್ಟು ನೀಡುತ್ತಿದೆ. ಅದೇ ರೀತಿ ಜಿಎಸ್‌ಟಿ ಸಂಗ್ರಹದಲ್ಲಿ ಹೆಚ್ಚಿನ ಪಾಲನ್ನು ನೀಡುತ್ತಿದೆ. ಈ ರೀತಿ ರಾಜ್ಯ ಸರಕಾರಗಳಿಗೆ ತೆರಿಗೆ, ಅನುದಾನಗಳನ್ನು ನೀಡಿದ ನಂತರವೂ ಕೆಲವು ಸರಕಾರಗಳು ಗ್ರಾಹಕರಿಗೆ ಲಾಭವನ್ನು ವರ್ಗಾಯಿಸಲು ನಿರ್ಲಕ್ಷ್ಯ ತೋರುತ್ತಿವೆ. ವಿಪಕ್ಷ ಸರಕಾರಗಳು ತಮ್ಮ ಪಾಲಿನ ಅಬ್ಕಾರಿ ಸುಂಕ ಕಡಿತಗೊಳಿಸಲು ನಿರಾಕರಿಸುತ್ತಿವೆ ಹಾಗೂ ತೈಲ ಬೆಲೆಗೆ ಸಂಬಂಧಿಸಿದಂತೆ ಕೇಂದ್ರ ಸರಕಾರವನ್ನು ದೂಷಿಸುತ್ತಿರುವುದು ಕೇವಲ ಬೂಟಾಟಿಕೆಯಾಗಿದೆ.

ಮುಂದಿನ ಕೆಲವೇ ವರ್ಷಗಳಲ್ಲಿ ಭೂಮಿಯಲ್ಲಿ ಕಚ್ಚಾತೈಲ ಬರಿದಾಗಲಿದ್ದು, ಜಗತ್ತು ಪರ್ಯಾಯ ಇಂಧನದ ಅನ್ವೇಷಣೆಯಲ್ಲಿದೆ. ಈ ದಿಶೆಯಲ್ಲಿ ಕೇಂದ್ರದ ಮೋದಿ ಸರಕಾರವು ಮುಂದಿನ ಕೆಲವೇ ವರ್ಷಗಳಲ್ಲಿ ದೇಶದಲ್ಲಿ ಎಲೆಕ್ಟ್ರಿಕ್ ವಾಹನಗಳ ಕ್ರಾಂತಿ ತರುವಲ್ಲಿ ಕಾರ್ಯಮಗ್ನವಾಗಿದೆ. ಈ ಉದ್ದೇಶಕ್ಕಾಗಿ ಎಲೆಕ್ಟ್ರಿಕ್ ವಾಹನಗಳನ್ನು ಬೃಹತ್ ಪ್ರಮಾಣದಲ್ಲಿ ತಯಾರಿಸಲು ಮೂಲಭೂತ ಸೌಕರ್ಯಗಳನ್ನು ಸ್ಥಾಪಿಸಲು, ಕೈಗಾರಿಕೆಗಳನ್ನು ಪ್ರಾರಂಭಿಸಲು ಭಾರೀ ಪ್ರಮಾಣದಲ್ಲಿ ಉತ್ತೇಜನ ನೀಡುತ್ತಿದೆ. 2030ರ ವೇಳೆಗೆ ಕಚ್ಚಾತೈಲದ ಆಮದು ಪ್ರಮಾಣವನ್ನು ಶೇ.50ರಷ್ಟು ಕಡಿತಗೊಳಿಸುವ ಲಕ್ಷ್ಯ ಹೊಂದಿದೆ.

ಕಾಂಗ್ರೆಸ್ ಮಾನಸಿಕತೆ: ಕಾಂಗ್ರೆಸ್ ಒಂದು ಜವಾಬ್ದಾರಿಯುತ ಪ್ರತಿಪಕ್ಷವಾಗಿ ಕಾರ್ಯ ನಿರ್ವಹಿಸುವುದಕ್ಕಿಂತ ಮೋದಿ ದೂಷಣೆಯಲ್ಲೇ ಮಗ್ನವಾಗಿದೆ. ಪೆಟ್ರೋಲ್, ಡೀಸೆಲ್ ಬೆಲೆ ಏರಿದಾಗ ಸಾರ್ವಜನಿಕರ ಬದುಕನ್ನು ಮೋದಿ ಸರಕಾರ ದುರ್ಬರಗೊಳಿಸುತ್ತಿದೆ ಎಂದು ದೂಷಿಸುತ್ತಿತ್ತು. ಆದರೆ ಇತ್ತೀಚೆಗೆ ಕೇಂದ್ರ ಸರಕಾರ ಪೆಟ್ರೋಲ್, ಡೀಸೆಲ್ ಮೇಲಿನ ಸುಂಕ ಇಳಿಸಿರುವುದನ್ನು ಟೀಕಿಸಿದೆ. ರಾಹುಲ್ ಗಾಂಧಿಯವರು ಇಂಧನ ಬೆಲೆಯಲ್ಲಿ ಸುಂಕ ಕಡಿತಗೊಳಿಸಿರುವುದು ಕೇವಲ ಮೂಗಿಗೆ ತುಪ್ಪ ಸವರುವ ಕೆಲಸವಾಗಿದೆ. ಇನ್ನು ಪೆಟ್ರೋಲ್ ಬೆಲೆಯಲ್ಲಿ ದೈನಂದಿನ ಏರಿಕೆಯಾಗಲಿದೆ. ಜನರಿಗೆ ದಾಖಲೆಯ ಹಣದುಬ್ಬರದಿಂದ ನೈಜ ಪರಿಹಾರ ಬೇಕಿದೆ ಎಂದು ಟ್ವೀಟ್ ಮಾಡಿದರು. ರಾಹುಲ್ ಗಾಂಧಿಯವರು ಬೆಲೆ ಏರಿಕೆ, ಇಳಿಕೆ ಎರಡೂ ಸಂದರ್ಭದಲ್ಲಿ ಟೀಕಿಸಿರುವುದನ್ನು ಗಮನಿಸಿದರೆ, ಬಿಜೆಪಿ ವಕ್ತಾರ ಶಹಜಾದ್ ಪೂನವಾಲಾ ಅವರು ರಾಹುಲ್ ಗಾಂಧಿ ಬಗ್ಗೆ ಹೇಳಿರುವುದನ್ನು ಇಲ್ಲಿ ಪ್ರಸ್ತಾಪಿಸಬಹುದು. ಇತ್ತೀಚೆಗೆ ರಾಹುಲ್‌ಗಾಂಧಿಯವರು ಕೇಂಬ್ರಿಡ್ಜ್ ವಿವಿಯಲ್ಲಿ ಭಾರತ ಒಂದು ದೇಶವಲ್ಲ, ಅದೊಂದು ರಾಜ್ಯಗಳ ಒಕ್ಕೂಟ ಎಂದಿದ್ದರು. ಇದಕ್ಕೆ ಪ್ರತಿಕ್ರಿಯೆಯಾಗಿ ಪೂನಾವಾಲಾ ಅವರು 'ರಾಹುಲ್ ಗಾಂಧಿ ಓರ್ವ ಮಾನವನಲ್ಲ, ಅವರು ಅನೇಕ ಅಂಗಾಂಗಗಳ ಒಕ್ಕೂಟವಾಗಿದ್ದು, ಅದರಲ್ಲಿ ಸ್ಪಷ್ಟವಾಗಿ ಒಂದು ಪ್ರಮುಖ ಅಂಗಾಂಗ ಕಾಣೆಯಾಗಿದೆ' ಎಂದಿದ್ದು ಸಮರ್ಪಕವಾಗಿದೆ. (Rahul Gandhi is not a human. He is a Union of Organs with one of the main organ obviously missing).

ಮೈಸೂರಿನ ಕೆಲವೆಡೆ ಭಾರೀ ಮಳೆ

ಮೈಸೂರು, ಜೂ.3(ಎಸ್‌ಬಿಡಿ)– ಮೈಸೂರಿನ ಕೆಲವೆಡೆ ಶುಕ್ರವಾರ ಗುಡುಗು ಸಹಿತ ಭಾರೀ ಮಳೆ ಸುರಿಯಿತು.

ವಿಜಯನಗರ, ಗೋಕುಲಂ, ಹೆಬ್ಬಾಳು, ಬಿ.ಎಂ.ಶ್ರೀನಗರ, ಹೂಟಗಳ್ಳಿ, ಹಿನಕಲ್ ಇನ್ನಿತರ ಭಾಗಗಳಲ್ಲಿ ಇಂದು ಸಂಜೆ ಗುಡುಗು ಸಹಿತ ಜೋರು ಮಳೆಯಾಗಿದೆ. ಇನ್ನಿತರೆಡೆಯೂ ಸಾಧಾರಣ ಮಳೆ ಬಿದ್ದಿದೆ. ಮತ್ತೆ ಕೆಲವೆಡೆ ಒಂದು ಹನಿಯೂ ಮಳೆಯಾಗಿಲ್ಲ. ರಾತ್ರಿಯೂ ಕೂಡ ಗುಡುಗಿನ ಅಬ್ಬರದೊಂದಿಗೆ ಅಲ್ಲಲ್ಲಿ ಮಳೆಯಾಗಿದೆ.

ಮೈಸೂರಿನಲ್ಲಿ ಮೂರ್‍ನಾಲ್ಕು ದಿನಗಳಿಂದ ಮಳೆಯ ಆಟ ಹೀಗೆಯೇ ಮುಂದುವರೆದಿದೆ. ನಿನ್ನೆ ಬೋಗಾದಿ ರಿಂಗ್ ರಸ್ತೆ, ನಜರ್‌ಬಾದ್ ಸೇರಿದಂತೆ ಹಲವೆಡೆ ಜೋರು ಮಳೆಯಾಯಿತಾದರೂ ಮಧ್ಯದಲ್ಲಿರುವ ಬಡಾವಣೆಗಳಲ್ಲಿ ಚದುರಿದ ಮಳೆಯಾಗಿತ್ತಷ್ಟೇ. ಈ ರಸ್ತೆಯಲ್ಲಿ ಜೋರಾಗಿ ಮಳೆ ಬೀಳುತ್ತಿದ್ದರೆ ಪಕ್ಕದ ರಸ್ತೆಯಲ್ಲಿ ಒಂದು ಹನಿಯೂ ಇರುವುದಿಲ್ಲ. ಹೀಗೆ ಮಳೆ ಕಣ್ಣಾಮುಚ್ಚಾಲೆ ಆಡುತ್ತಿದೆ.



ಸಾಂದರ್ಭಿಕ ಚಿತ್ರ


ಮತದಾರರು ತಮ್ಮತ್ತ ಒಲವು ತೋರುತ್ತಿದ್ದಾರೆ



ಮೈಸೂರು,ಜೂ.3(ಆರ್‌ಕೆಬಿ)– ದಕ್ಷಿಣ ಪದವೀಧರ ಕ್ಷೇತ್ರದ ಚುನಾವಣೆಯಲ್ಲಿ ಪಕ್ಷೇತರರಾಗಿ ಸ್ಪರ್ಧಿಸಿರುವ ತಮ್ಮತ್ತ ಕ್ಷೇತ್ರದ ಮತದಾರರು ಒಲವು ತೋರುತ್ತಿದ್ದಾರೆ ಎಂದು ಪಕ್ಷೇತರ ಅಭ್ಯರ್ಥಿ ಎನ್.ಎಸ್.ವಿನಯ್ ತಿಳಿಸಿದ್ದಾರೆ. ಮೈಸೂರು ಪತ್ರಕರ್ತರ ಭವನದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ ಒಂದೂವರೆ ವರ್ಷದಿಂದ ತಾವು ಕ್ಷೇತ್ರದಲ್ಲಿ ಸಕ್ರಿಯರಾಗಿದ್ದು, ಒಂದು ವೇಳೆ ತಾವು ಆಯ್ಕೆಯಾದರೆ ಪದವೀಧರರ ಪತ್ತಿನ ಸಹಕಾರ ಸಂಘ ಸ್ಥಾಪಿಸಿ, ಹಲವರಿಗೆ ಉದ್ಯೋಗ ಸೃಷ್ಟಿಸಲಾಗುವುದು. ಪದವೀಧರರು ಎದುರಿಸುತ್ತಿರುವ ನಿರುದ್ಯೋಗ ಹೋಗಲಾಡಿಸುವುದು, ಕಾಲೇಜು ಮತ್ತು ವಿವಿಗಳಲ್ಲಿ ಸೇವೆ ಸಲ್ಲಿಸುತ್ತಿರುವ ಅತಿಥಿ ಉಪನ್ಯಾಸಕರಿಗೆ ಸೇವಾ ಭದ್ರತೆ ಕೊಡಿಸಲು ಶ್ರಮಿಸುವುದಾಗಿ ಭರವಸೆ ನೀಡಿದರು. ಸುದ್ದಿಗೋಷ್ಠಿಯಲ್ಲಿ ಬೆಂಬಲಿಗರಾದ ಮಹದೇವ್, ಮಹದೇವಸ್ವಾಮಿ, ಸೋಮಶೇಖರ್ ಉಪಸ್ಥಿತರಿದ್ದರು.

ನಾಳೆ ಬ್ರಾಹ್ಮಣ ಮಹಾಸಭಾದಿಂದ ವಲಯ ಪದಾಧಿಕಾರಿಗಳ ಪದಗ್ರಹಣ

ಮೈಸೂರು, ಜೂ.3(ಆರ್‌ಕೆಬಿ)– ಮೈಸೂರು ಜಿಲ್ಲಾ ವಲಯ ಬ್ರಾಹ್ಮಣ ಮಹಾಸಭಾ ವಲಯ ಪದಾಧಿಕಾರಿಗಳ ಪದಗ್ರಹಣ, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಸದಸ್ಯತ್ವ ಅಭಿಯಾನ, ಬ್ರಾಹ್ಮಣ ವಿಶೇಷ ಚೇತನ ಮಕ್ಕಳಿಗೆ ಪ್ರೋತ್ಸಾಹಧನ ವಿತರಣಾ ಕಾರ್ಯಕ್ರಮ ಜೂ.5ರಂದು ಮೈಸೂರಿನ ಶಾರದಾವಿಲಾಸ ಶತಮಾನೋತ್ಸವ ಭವನದಲ್ಲಿ ಆಯೋಜಿಸಲಾಗಿದೆ.



ವಲಯ ಉಪಾಧ್ಯಕ್ಷ ಡಾ.ಬಿ.ಆರ್.ನಟರಾಜ್ ಜೋಯಿಸ್ ಮೈಸೂರು ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದರು. ಮೈಸೂರು ಜಿಲ್ಲಾ ಬ್ರಾಹ್ಮಣ ಮಹಾಸಭಾ, ಯುವ ಬ್ರಾಹ್ಮಣ ಮಹಾಸಭಾ, ಜಿಲ್ಲಾ ಬ್ರಾಹ್ಮಣ ಮಹಿಳಾ ಘಟಕಗಳ ಆಶ್ರಯದಲ್ಲಿ ಕಾರ್ಯಕ್ರಮ ನಡೆಯಲಿದೆ. ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷ ಅಶೋಕ್ ಹಾರನಹಳ್ಳಿ ಅಧ್ಯಕ್ಷತೆ ವಹಿಸುವರು. ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಧರ್ಮಬೀರು ಪ್ರಶಸ್ತಿ ಪ್ರದಾನ ಮಾಡುವರು ಎಂದರು.

ಕಾರ್ಯಕ್ರಮದಲ್ಲಿ ನಾಡೋಜ ಪ್ರಶಸ್ತಿ ಪುರಸ್ಕೃತ ಡಾ.ಭಾಷ್ಯಂ ಸ್ವಾಮೀಜಿ, ಕೆ.ಆರ್. ಕ್ಷೇತ್ರದ ಶಾಸಕ ಎಸ್.ಎ.ರಾಮದಾಸ್ ಇನ್ನಿತರ ಹಲವು ಮುಖಂಡರು ಮುಖ್ಯ ಅತಿಥಿಯಾಗಿ ಭಾಗವಹಿಸುವರು. ಈ ವೇಳೆ ಸಮಾಜದ ಶೇಷಾದ್ರಿ, ಡಾ.ಕೆ.ರಘುರಾಂ ವಾಜಪೇಯಿ, ಸುಬ್ರಹ್ಮಣ್ಯ, ನರಸಿಂಹನ್ ಮತ್ತು ಶಶಿಶೇಖರ ದೀಕ್ಷಿತ್ ದಂಪತಿಗಳಿಗೆ ಗೌರವ ಸಲ್ಲಿಸಲಾಗುವುದು. ಜೊತೆಗೆ ವಿವಿಧ ಕ್ಷೇತ್ರಗಳ ಪ್ರಮುಖರನ್ನು ಸನ್ಮಾನಿಸಲಾಗುವುದು ಎಂದು ಹೇಳಿದರು ಸುದ್ದಿಗೋಷ್ಠಿಯಲ್ಲಿ ರಘುರಾಂ ಕೆ.ವಾಜಪೇಯಿ, ಆಪ್ ಪಕ್ಷದ ಸಿ.ಆರ್. ವಿದ್ಯಾರಣ್ಯ, ಅಖಿಲ ಭಾರತ ಬ್ರಾಹ್ಮಣ ಮಹಾಸಭಾ ಮಹಿಳಾ ಘಟಕದ ಜಿಲ್ಲಾಧ್ಯಕ್ಷೆ ವಿಜಯಲಕ್ಷ್ಮಿ ಇನ್ನಿತರರು ಉಪಸ್ಥಿತರಿದ್ದರು.

ನಾಳೆ 'ರಾಜ್ ಇನ್‌ಸ್ಪಿರೇಷನ್' ನಾಟಕ ಪ್ರದರ್ಶನ



> ಮೈಸೂರಿನ ಕಲಾಮಂದಿರದ ಆವರಣದ ಕಿರುರಂಗ ಮಂದಿರದಲ್ಲಿ ಜೂ 5ರ ಸಂಜೆ 7ಕ್ಕೆ 'ರಾಜ್ ಇನ್‌ಸ್ಪಿರೇಷನ್' ನಾಟಕದ 2ನೇ ಪ್ರದರ್ಶನ ಏರ್ಪಡಿಸಲಾಗಿದೆ ಎಂದು ನಿರ್ದೇಶಕ ಪ್ರವೀಣ್ ಬೆಳ್ಳಿ ತಿಳಿಸಿದ್ದಾರೆ.

ಮೈಸೂರು, ಜೂ.3(ಎಸ್‌ಬಿಡಿ)– ಡಾ.ರಾಜ್‌ಕುಮಾರ್ ಅವರು ಅದ್ವಿತೀಯ ನಟ, ಅವರೊಬ್ಬ ಗಾಯಕರಷ್ಟೇ ಆಗಿರಲಿಲ್ಲ. ಅವರು ಸ್ಫೂರ್ತಿಯ ಚಿಲುಮೆ ಹಾಗೂ ಪ್ರೇರಣಾ ಶಕ್ತಿಯಾಗಿದ್ದರು. ಸಿನಿಮಾ ಪಾತ್ರಗಳು ಹಾಗೂ ಅವರ ವೈಯಕ್ತಿಕ ಜೀವನ ಪ್ರಭಾವ ಅದೆಷ್ಟೋ ಜನರ ಬದುಕನ್ನೇ ಬದಲಿಸಿದೆ. ಇಂತಹ ಸ್ಫೂರ್ತಿದಾಯಕ ಅಂಶಗಳ ಹೂರಣವನ್ನು ರಂಗರೂಪಕ್ಕಿಳಿಸುವಲ್ಲಿ 'ಪ್ರಯೋಗ' ರಂಗ ತಂಡ ಯಶಸ್ವಿಯಾಗಿದೆ.

ಇತ್ತೀಚೆಗೆ ಕಲಾಮಂದಿರ ಆವರಣದ ಕಿರುರಂಗಮಂದಿರದಲ್ಲಿ ಪ್ರವೀಣ್ ಬೆಳ್ಳಿ ನಿರ್ದೇಶನದಲ್ಲಿ ಪ್ರದರ್ಶನಗೊಂಡ 'ರಾಜ್ ಇನ್‌ಸ್ಪಿರೇಷನ್' ನಾಟಕಕ್ಕೆ ರಂಗಾಸಕ್ತರು ಭಾರೀ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ನಾಟಕದಿಂದ ಪ್ರಭಾವಿತರಾದ ಅನೇಕ ಪ್ರೇಕ್ಷಕರು ದಿನಕ್ಕೊಂದು ಡಾ.ರಾಜ್‌ಕುಮಾರ್ ಸಿನಿಮಾ ನೋಡುವುದಾಗಿ ಭಾವನಾತ್ಮಕವಾಗಿ ನುಡಿದಿದ್ದಾರೆ. ಈ ಮೂಲಕ 'ಪ್ರಯೋಗ' ತಂಡ ಮತ್ತೊಂದು ಹೊಸ ಪ್ರಯೋಗದಲ್ಲೂ ರಂಗಾಸಕ್ತರ ಹೃದಯ ಗೆದ್ದಿದೆ. ಜೂ.5ಕ್ಕೆ ಎರಡನೇ ಪ್ರದರ್ಶನ ಆಯೋಜಿಸಲಾಗಿದೆ.

ಡಾ.ರಾಜ್ ಸಿನಿಮಾ ಹಾಗೂ ಜೀವನ ಸಾರವನ್ನು ಸಂಜಯ್ ರಂಗರೂಪಕ್ಕಿಳಿಸಿದ್ದು, ಮನೋಜ್ ಭಾರದ್ವಾಜ್ ಸಮರ್ಥವಾಗಿ ನಿರ್ವಹಿಸಿದ್ದಾರೆ. ಎನ್.ಶ್ರೀಕಾಂತ್ ರಂಗಸಜ್ಜಿಕೆ, ಕಾರ್ತಿಕ್ ಉಪಮನ್ಯು ನೃತ್ಯ ಸಂಯೋಜನೆ, ರಂಗನಾಥ್ ಪ್ರಸಾದನ, ಮಧು ಮಳವಳ್ಳಿ ಬೆಳಕು ನಿರ್ವಹಣೆ ಹೊಣೆಗಾರಿಕೆ ನಿಭಾಯಿಸಿದ್ದಾರೆ. ಭರತ್, ಚೇತನ್ ಬಸವರಾಜ್, ಶ್ರಾವ್ಯ, ಆರ್.ಸೌಜನ್ಯ, ಗುರುರಾಜ ಕರ್ಣಂ, ಯಶ್ವಂತ್, ಸಿದ್ದೇಶ್, ದಿವ್ಯ, ಮೇಘನಾ, ಮನೋಜ್, ಭಾರದ್ವಾಜ್, ದರ್ಶಿನಿ, ಕಾರ್ತಿಕ್, ತೇಜಸ್ವಿನಿ, ಶ್ರೀನಿವಾಸ್, ಪ್ರಥಮ್ ಹಾಗೂ ಯಶಸ್ವಿನಿ ಪಾತ್ರ ನಿರ್ವಹಿಸಿದ್ದಾರೆ. ಅನೇಕ ಸಹೃದಯರ ಸಹಕಾರದಿಂದ ಸತತ 3 ತಿಂಗಳು ತಾಲೀಮು ನಡೆಸಿ, ನಾಟಕ ಪ್ರದರ್ಶಿಸಲಾಗಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ

ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ತಕ್ಷಣ ಬೇಕಾಗಿದ್ದಾರೆ
ಹೆಬ್ಬಾಳ್ ಮತ್ತು ಮೇಟಗಳ್ಳಿ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಸೂಪರ್ ವೈಸರ್ ಮತ್ತು ಗಾರ್ಡ್‌ಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ: SSLC ಮತ್ತು ಮೇಲ್ಪಟ್ಟು, ಸೂಪರ್‌ವೈಸರ್ 16,500 + W/o (8 Hrs), ಗಾರ್ಡ್: 15,500 + W/o (8 Hrs) ಊಟ, ತಿಂಡಿ ಸೌಲಭ್ಯವಿರುತ್ತದೆ. ಸಂಪರ್ಕಿಸಬೇಕಾದ ಸಂಖ್ಯೆಗಳು
9620667819
9880727819

HOUSE FOR SALE
Near Ramaswamy Circle, Measuring 18x65, East Facing, Commercial / Residential
9620975610

MUDA HOUSE FOR SALE
20x30
1st Stage, Srirampura, Rs.46.5 Lakhs
No Negotiable
9739493555

ಮನೆ ಮಾರಾಟಕ್ಕಿದೆ
#331, ಚಾಮುಂಡೇಶ್ವರಿ ಲೇಔಟ್, (ಮಿಲೇನಿಯಂ ಅಪಾರ್ಟ್‌ಮೆಂಟ್ ಹತ್ತಿರ)
22x40 ಅಳತೆ
7288956898
9686493073

ಬೇಕಾಗಿದ್ದಾರೆ
ಶೆಫ್ / ಟೀ ಮಾಸ್ಟರ್
ಕೆಫೆಟೇರಿಯಾದಲ್ಲಿ ಕೆಲಸ ಮಾಡಲು ಅನುಭವಿ ಶೆಫ್ ಬೆಳಗ್ಗಿನ ತಿಂಡಿ (ಇಡ್ಲಿ, ವಡ, ಬಾತ್, ದೋಸೆ) ಮಾಡಲು ಮತ್ತು ಸಂಜೆ ಫಾಸ್ಟ್‌ಫುಡ್ ಗೋಬಿ, ಚೈನಿಸ್ ಚಾಟ್ಸ್ ತಿಂಡಿ ತಯಾರಿಸಲು ಬೇಕಾಗಿದ್ದಾರೆ ಮತ್ತು ತರಬೇತಿ ಪಡೆದಿರುವ ಎಲ್ಲಾ ರೀತಿಯ ಟೀ, ಕಾಫಿಗಳನ್ನು ತಯಾರಿಸಲು ಟೀ ಮಾಸ್ಟರ್ ಬೇಕಾಗಿದ್ದಾರೆ. ಸ್ಥಳ: ಸೂರ್ಯ ಬೇಕರಿ ಹತ್ತಿರ, ಸಂಪರ್ಕಿಸಿ: ಎಂ.ವೆಂಕಟರಮಣ
7396703919

ತಕ್ಷಣ ಬೇಕಾಗಿದ್ದಾರೆ
ಕುವೆಂಪುನಗರ ಕ್ಯಾಂಟೀನ್ ಅಡುಗೆ ಭಟ್ಟರು ಮತ್ತು ಮಹಿಳೆಯರು House Keeping ಬೇಕಾಗಿದ್ದಾರೆ.
8971662736
7829090366

FREE SPOKEN ENGLISH COURSE
SSLC / PUC ಪಾಸಾದವರಿಗೆ ಉಚಿತವಾಗಿ ಸ್ಪೋಕನ್ ಇಂಗ್ಲೀಷ್ ತರಬೇತಿ ನೀಡಲಾಗುವುದು.
8073195952

RENT / SALE
30x40
Independent House Rent at Vijaynagar 3rd Stage, 20x30, 40x60 Rent at Dattagalli, R.K.Nagar, 20x30 & 40x60 Duplex House Sale at Dattagalli
6364462293

S.K.CONSTRUCTION
ನಿಮ್ಮ ಕೈಗೆಟುಕುವ ಬೆಲೆಯಲ್ಲಿ ಅತಿ ಉತ್ತಮ ಗುಣಮಟ್ಟದಲ್ಲಿ Plan, 3D Elevation Approved Loan ಸಹಿತ Construction ಮಾಡಿಕೊಡುತ್ತೇವೆ.
9620528490

COMMERCIAL SPACE FOR RENT
IT Office, Clinic, Tutorial, Developers Office, High Tension Main Road, Vijayanagar 2nd Stage
9880924180
9972280670

ಮನೆ ಮಾರಾಟಕ್ಕಿದೆ
30x40
ಪೂರ್ವ ದಿಕ್ಕು, ಲಾಲ್ ಬಹದ್ದೂರ್ ಶಾಸ್ತ್ರಿನಗರ, ಮೈಸೂರು JSS ಲೇಔಟ್ ಪಕ್ಕ
9901772178

ಬೇಕಾಗಿದ್ದಾರೆ
ಶ್ರೀ ವಿಜಯ ಟಿವಿ 24
ಮೈಸೂರಿನ ಕನ್ನಡ ಸುದ್ದಿ ವಾಹಿನಿಯಲ್ಲಿ ಕೆಲಸ ನಿರ್ವಹಿಸಲು Reporter, Video Editor, Script Writer, Graphics Designer, PCR, Camera Man, Anchors, Marketing Executive ತಕ್ಷಣವೇ ಬೇಕಾಗಿದ್ದಾರೆ. ಆಕರ್ಷಕ ವೇತನ ಲಭ್ಯವಿದೆ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:
6366313175 / 9986045766

ಮಳಿಗೆ ಬಾಡಿಗೆಗೆ ಮತ್ತು ಭೋಗ್ಯಕ್ಕಿದೆ
ನಂ.7, ಮುಡಾ ಕಾಂಪ್ಲೆಕ್ಸ್ 10x15 ಸಬ್‌ರಿಜಿಸ್ಟ್ರಾರ್ ಆಫೀಸ್ ಮುಂಭಾಗ, ರಾಮಕೃಷ್ಣನಗರ, ಆಂದೋಲನ ಸರ್ಕಲ್
8310931556

Maruthi Tube Wells (R)

8184000444

SPEEDPRINT SERVICE
WANTED REQUIRED
1) Tally GST Billing Experience (M/F)
2) Office Boy with 2 wheeler
3) Front office Customer Support Executive (F)
4) Field Marketing Executive with 2 Wheeler
IRWIN ROAD, MYSORE
9632019096 / 7349060511

airtel WANTED
Sales Executive
Salary: 10,000/- + Incentive up to 8,000/-. Contact:
9972728134

WANTED
Female Experienced Office Assistant, Fluency in English, Smart Hair Fixing, Anikethana Road, Kuvempunagar
8792945515

ಬೋಳು ತಲೆಯ ಸಮಸ್ಯೆಯೇ?

ಕಿಮೋತೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ಪರ್ಧಾತ್ಮಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
574, 9th Cross, Anikethana Road, kuvempunagar, Mysuru
MYSURU 9611028523 MANGALORE 9343142258

HOUSE FOR SALE / RENT
New Gr.Flr, 1BHK, Super Builtup area 887.16 Sq.ft Registered, Fully Furnished, 2 Bathrooms, Individual Car Parking Space, AC, Modular Kitchen for Sr. Citizen, Min 50 Yrs Age in Tapovan Solace Apartment, Sharada Devi Nagar.
No Brokers
9686617133

CONSTRUCTING DREAM HOMES SINCE 25 YEARS
Construction Starts @ Basic 1,70,000/- Sq.
Standard 1,85,000/- Sq.
Free Plan / 3D Elevation
9035138426

HOME LOAN
11B, 9/11A ಕಾರ್ಪೋರೇಷನ್ & ಮುಡಾ ಖಾತಾಗಳಿಗೆ ಸಾಲ ಸೌಲಭ್ಯ ಕೊಡಿಸಲಾಗುವುದು. ಮನೆ ಖರೀದಿ, ಸೈಟ್ ಖರೀದಿ, ಮನೆ ಕನ್ಸ್ಟ್ರಕ್ಷನ್, ಮಾರ್ಟ್‌ಗೇಜ್, ಫ್ಲಾಟ್ ಖರೀದಿ
HOUSING LOAN FOR PENSIONERS
ಶ್ರೀ ಸಾಯಿ ಎಂಟರ್‌ಪ್ರೈಸಸ್ ಮೈಸೂರು
8884176836

MUDA APPROVED SITE FOR SALE
30x40 East & West Facing @ 18 Lakhs. Immidiate Reg. & Bank Loan Available. Near Lalbahadur Shashtri Nagar 1.5 km from Ring Road
7795609173

30x50 ಸೈಟು @ Rs.25 ಲಕ್ಷ
ತಕ್ಷಣ ನೋಂದಣಿ / ಬ್ಯಾಂಕ್ ಲೋನ್ ಲಭ್ಯ. ಮೈದನಹಳ್ಳಿ ಪಕ್ಕ, ಇಲವಾಲ, ಹುಣಸೂರು ರೋಡ್, ಮೈಸೂರು.
9538583377

Gem Selections
(A Part of Khanna Gems Group)
100% Natural Govt. Lab Certified Gemstones
ಶೇಕಡಾ 100 ರಷ್ಟು ನೈಸರ್ಗಿಕ ಸರ್ಕಾರಿ ಪ್ರಯೋಗಾಲಯದಿಂದ ಪ್ರಮಾಣಿಕೃತ ರತ್ನದ ಹರಳುಗಳು ದೊರೆಯುತ್ತವೆ.
HIG-3, Near Akshaya Bhandar, New Kantharaju Urs Rd. Kuvempu Nagar, Mysuru, Karnataka-570023
8152066999

ನಿರ್ಮಲ ಸರ್ವೀಸ್
ಸಂಪು
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ:
6364079244

PART TIME WORK
ಬಿಡುವಿನ ವೇಳೆಯಲ್ಲಿ ನೀವು ಕುಳಿತ ಸ್ಥಳದಲ್ಲಿಯೇ
ಕೆಲಸ / JOB
ವಾರದ ಸಂಬಳ 3000/– ರಿಂದ 5000/– ಮೇಲ್ಪಟ್ಟು ಕೊರಿಯರ್ ಸೌಲಭ್ಯವಿದೆ.
9743217566
9108418233

ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್
ಜರ್ಮನ್ ಟೆಕ್ನಾಲಜಿ ಬಳಸಿ ಸಂಪು, ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್ ಮಾಡಲಾಗುತ್ತದೆ.
Mob: 9008711654



SUNZONE SOLAR SYSTEM
VM Double Road, Kuvempunagar, Mysuru
9845175443

ವೃದ್ಧಾಶ್ರಮ
ಆರೋಗ್ಯದಿಂದ ಚೆನ್ನಾಗಿರುವ ವೃದ್ಧರಿಗೆ ಉಚಿತ ಪ್ರವೇಶ. (ಷರತ್ತುಗಳು ಅನ್ವಯ) ಹಾಗೂ ವೃದ್ಧರನ್ನು ನೋಡಿಕೊಳ್ಳಲು ಮಹಿಳೆಯರು ಬೇಕಾಗಿದ್ದಾರೆ. ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ:
8197804473

2 SITES FOR SALE
(30X50) @ Sidganga Layout, (Near Yelwala Bus tand) Mysore - Hunsur Road, DTCP Approved 22 Lacs.
9538839926

ಬರವಣಿಗೆ ಕೆಲಸ
ಮನೆಯಿಂದಲೇ ಫಾರಂ ಭರ್ತಿಮಾಡುವ ಉದ್ಯೋಗ ಮಾಡಿ ಪ್ರತಿ 1 ಫಾರಂಗೆ 30 ರೂ.ಗಳನ್ನು ಪಡೆಯಿರಿ
9731891409

ಮನೆಯಿಂದಲೇ ಸಂಪಾದಿಸಿ
ಮನೆಯಿಂದಲೇ ಮೊಬೈಲ್, ಕಂಪ್ಯೂಟರ್ ಅಥವಾ ಕೈ ಬರವಣಿಗೆ ಮೂಲಕ ಉದ್ಯೋಗ ಮಾಡಿ 10,000 ರಿಂದ 30,000 ಸಂಪಾದಿಸಿ
7795560970

S.M. GOLD
ಗಿರವಿ ಚಿನ್ನಾಭರಣ ಖರೀದಿ
ಒಂದು ಗ್ರಾಂ ಚಿನ್ನಕ್ಕೆ 5200
ಯಾವುದೇ ಬ್ಯಾಂಕ್ ಮತ್ತು ಫೈನಾನ್ಸ್‌ನಲ್ಲಿ ಗಿರವಿ ಇಟ್ಟಿರುವ ಚಿನ್ನಾಭರಣಕ್ಕೆ ಹಣ ಬೇಕೆ ಕೂಡಲೇ ಸಂಪರ್ಕಿಸಿ.(T&C)
8050518881

ಸೋಲಾರ್ ವಾಟರ್ ಹೀಟರ್
Solar Water Heater

ಸೇಲ್ಸ್, ಸರ್ವೀಸ್ ರಿಪೇರಿ, ಎಕ್ಸ್‌ಚೇಂಜ್ ಹಾಗೂ ಬಿಡಿ ಭಾಗಗಳಿಗಾಗಿ ಸಂಪರ್ಕಿಸಿ
Vinaykrishna
9611648636

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

HOUSE FOR SALE 5 BHK
36X43 MUDA G+1 Duplex House, Near Forum Mall Road, Opp. Jalpuri Police Quartres.
9663874751 / 9108944547

ಉಚಿತ ಹೆಲ್ತ್‌ಕೇರ್ ತರಬೇತಿ
SSLC / PUC ಪಾಸಾದವರಿಗೆ ಜನರಲ್ ಡ್ಯೂಟಿ ಅಸಿಸ್ಟೆಂಟ್ ತರಬೇತಿಯನ್ನು ಉಚಿತವಾಗಿ ನೀಡಲಾಗುತ್ತದೆ ಹಾಗೂ ಆಸ್ಪತ್ರೆಯಲ್ಲಿ ಕೆಲಸ ಕೊಡಿಸಲಾಗುವುದು.
ಮಹಿಳೆಯರಿಗೆ ಮಾತ್ರ.
ವಯೋಮಿತಿ : 18 - 40 years
9886654463

HOUSE FOR RENT
2 BHK GROUND FLOOR, NEAR TO JSS COLLEGE & HOSPITAL, YELETHOTA CIRCLE, JLB ROAD, MYSORE
9620991399

ಮೈಸೂರು ಮ್ಯಾರೇಜ್ ಲಿಂಕ್ಸ್
ವಧು–ವರರನ್ನು ಹುಡುಕಲು ಸಹಾಯಬೇಕೆ ? ನಮಗೆ ಕರೆ ಮಾಡಿ.
ಡಾ. ಗುರೂಜಿ, ಮೈಸೂರು
6361740552

ಶ್ರೀ ಶಿವಂ ವಾಸ್ತು & ಆಸ್ಟ್ರೋ ಸೆಂಟರ್
ಒಂದು ಫೋನಿನ ಕರೆ ನಿಮ್ಮ ಜೀವನವನ್ನೇ ಬದಲಿಸುತ್ತದೆ. ಆಧ್ಯಾತ್ಮಿಕ ಗುರೂಜಿಯೊಂದಿಗೆ ಫೋನಿನ ಮೂಲಕ ನೇರ ಸಂಪರ್ಕಿಸಿ. ನಿಮ್ಮ ಜೀವನದ ಎಲ್ಲಾ ಸಮಸ್ಯೆಗಳಿಗೆ 100% ಸಲಹೆ ಮತ್ತು ಪರಿಹಾರವನ್ನು ಪಡೆಯಿರಿ.
ಡಾ. ಗುರೂಜಿ
Mob: 9449408551

ಶಿರಡಿ ಕ್ಷೇತ್ರ ದರ್ಶನ 7 ದಿನಗಳು
ಶಿರಡಿ, ಮಂತ್ರಾಲಯ, ದತ್ತಾತ್ರೇಯರು, ಪಾಂಡವಪುರ, ಶನಿಸಿಂಗಾಪುರ, ಬಾದಾಮಿ, ಐಹೊಳೆ, ಪಟ್ಟದಕಲ್ಲು, ಬನಶಂಕರಿ, ಕೂಡಲ ಸಂಗಮ, ದಕ್ಷಿಣ ಕಾಶಿ, ಕಾಫಿ, ತಿಂಡಿ, ಊಟ, ರೂಂ, ಟೀ ಇರುತ್ತದೆ. Mob: 9620202173. ದಿನಾಂಕ 20.6.2022
ಒಂದು ದಿನದ ಪ್ರವಾಸ: ಮೇಲುಕೋಟೆ, ಆದಿಚುಂಚನಗಿರಿ, ಬೆಲಗೂರು ಆಂಜನೇಯ, ಹಾಲೂ ರಾಮೇಶ್ವರ. ತಿಂಡಿ, ಊಟ ಇರುತ್ತದೆ.

SDJ JEWELERS
ಪುರುಷರು ಮತ್ತು ಮಹಿಳೆಯರು Tele Callers ಮತ್ತು Sales Executive ಬೇಕಾಗಿದ್ದಾರೆ.
Qualification: SSLC/ PUC/ Degree/ Post Graduation
ಉಳಿದುಕೊಳ್ಳಲು PG ವ್ಯವಸ್ಥೆ ಇರುತ್ತದೆ
Salary : 20,000
8884304444

HOUSE FOR SALE
30x40 MUDA
New 4 BHK E/F Door & Site, Pillar Construction at Ramkrishnagar with Kabini Water, Near Andolana Circle - Rs.1.55 Cr.
(Brokers Excuse)
8660105902

DRIVERS AVAILABLE FOR YOUR OWN VEHICLES
Good experienced drivers & automatic Gear drive also. part time & full time monthly base Drivers available. Contact for Comfort Drives
6363192066 / 9036951272

ಬೇಕಾಗಿದ್ದಾರೆ
ಮೈಸೂರಿನಲ್ಲಿರುವ ಪ್ರತಿಷ್ಠಿತ ಆಸ್ಪತ್ರೆಯ ಕ್ಯಾಂಟೀನ್ ಮತ್ತು ಡಯಟರಿಯಲ್ಲಿ ಕೆಲಸ ಮಾಡಲು, ಇಂಗ್ಲೀಷ್ ಮತ್ತು ಕನ್ನಡ ಓದಲು, ಬರೆಯಲು SSLC ಅಥವಾ PUC ಪಾಸ್ ಅಥವಾ ಫೇಲ್ ಆದ ಹುಡುಗರು ಮತ್ತು ಹುಡುಗಿಯರು Part time and full time ಕೆಲಸಕ್ಕೆ ಬೇಕಾಗಿದ್ದಾರೆ. ಮತ್ತು ಗ್ರೈಂಡರ್ ಕೆಲಸದವರು ಮತ್ತು ದೋಸೆ ಭಟ್ಟರು ಬೇಕಾಗಿದ್ದಾರೆ. Assistant Manager, Supervisors, Desk Co-Ordinators, Stewards, Washing, Cooking and House Keeping ಕೆಲಸ ಮಾಡಲು ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ. ಪಿ.ಎಫ್ ಮತ್ತು ಇ.ಎಸ್.ಐ ಹಾಗೂ ಊಟ ತಿಂಡಿ ಸೌಲಭ್ಯವಿರುತ್ತದೆ. ವಯಸ್ಸು 18 ತುಂಬಿರಬೇಕು. ಸಂಪರ್ಕಿಸಬೇಕಾದ ವಿಳಾಸ Agrahara, Mysore. Mobile No.: 7022392897

ಟೆಲಿಕಾಲಿಂಗ್ ಮಾಡಲು ಹುಡುಗಿಯರು ಬೇಕಾಗಿದ್ದಾರೆ
ಸಂಬಳ 8000 (+Incentive) Field Work ಮಾಡಲು ಹುಡುಗರು ಬೇಕಾಗಿದ್ದಾರೆ. ಸಂಬಳ: 10,000 ಮತ್ತು 2000 Petrol Allowance, 12,000 + Incentive ಸ್ಥಳ: ಚಾಮುಂಡಿಪುರಂ (Near GTR Hotel) ಎನ್.ಆರ್.ಮೊಹಲ್ಲಾ, (Near FTS Circle)
9535926093

ಸುವರ್ಣಾವಕಾಶ
ನಿವೃತ್ತಿ, ಸ್ವಯಂ ನಿವೃತ್ತಿ, ಗೃಹಣಿಯರಿಗೆ ಸ್ವಯಂ ಉದ್ಯಮದಾರರಿಗೆ, ಪ್ರಖ್ಯಾತ ಬ್ಯಾಂಕ್ ಸಮೂಹದಿಂದ Part Time / Full Time ಕೆಲಸಕ್ಕೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ.
fixed Salary / PF-ESI, Age:- Above 30Years
9008799156 / 9513395132

ಬೇಕಾಗಿದ್ದಾರೆ
ಕಂಪ್ಯೂಟರ್ ಆಫೀಸ್‌ನಲ್ಲಿ "ಟ್ರೈನೀ ಸರ್ವಿಸ್ ಇಂಜಿನಿಯರ್" ಕೆಲಸಕ್ಕೆ ITI / PUC / DIP ಮಾಡಿರುವ 25 ವರ್ಷದೊಳಗಿನ ಪುರುಷ ಅಭ್ಯರ್ಥಿಗಳು ಬೇಕಾಗಿದ್ದಾರೆ. ಹಾರ್ಡ್‌ವೇರ್ ಮತ್ತು ನೆಟ್‌ವರ್ಕಿಂಗ್‌ನಲ್ಲಿ ತರಬೇತಿ, ಕಂಪ್ಯೂಟರ್‌ನಲ್ಲಿ ಜ್ಞಾನವುಳ್ಳವರಿಗೆ ಹೆಚ್ಚಿನ ಆದ್ಯತೆ. ಸಂಪರ್ಕಿಸಿ:
8073393505

ವಧು–ವರಾನ್ವೇಷಣೆ
ಒಕ್ಕಲಿಗ / ಕುರುಬ / ಲಿಂಗಾಯತ / ನಾಯಕ / SC & ಎಲ್ಲಾ ಜಾತಿಯ ವಧು – ವರರಿಗಾಗಿ ಕೂಡಲೇ ಸಂಪರ್ಕಿಸಿ.
(2nd Marriages Also)
9343175000

ಮುಡಾ ಸೈಟು ಬೇಕಾಗಿದೆ
30x40 E/F ಅಥವಾ N/F ಅರವಿಂದನಗರ, ಶಾರದಾದೇವಿನಗರ, ನ್ಯಾಯಾಂಗ ಬಡಾವಣೆ, ಎಸ್.ಬಿ.ಎಂ ಲೇಔಟ್, ರಾಜ ರಾಜೇಶ್ವರಿ ನಗರ, ವಿಜಯನಗರ 4ನೇ ಹಂತ ಸುತ್ತಮುತ್ತ ಮಾಲೀಕರು ನೇರವಾಗಿ ಸಂಪರ್ಕಿಸಿ.
9449529819

ಪ್ರಮಾಣ ಪತ್ರ
ಮಂಡ್ಯ ಜಿಲ್ಲೆ, ನಾಗಮಂಗಲ ತಾಲ್ಲೂಕು, ಕಸಬಾ ಹೋಬಳಿ, ಮಂಡ್ಯರಸ್ತೆ, ಹನೀಫ್ ಮೊಹಲ್ಲಾ, ನಾಗಮಂಗಲ ಟೌನ್ ಇಲ್ಲಿ ವಾಸವಾಗಿರುವ ಇಶ್ರತ್ ಫಾತಿಮಾ ಖಾನಂ ಆದ ನಾನು ಪ್ರಮಾಣೀಕರಿಸುವುದೇನೆಂದರೆ, ಆಧಾರ್ ಕಾರ್ಡ್‌ನಲ್ಲಿ ನನ್ನ ಹೆಸರು Ishrath Fathima Khanum ಎಂದು ನಮೂದಾಗಿದ್ದು, ಪಾಸ್ ಪೋರ್ಟ್ ನಂ K3829929 ನಲ್ಲಿ ನನ್ನ ಹೆಸರು Ishrath Fatima ಎಂದು ಸರ್‌ನೇಮ್ Khanum ಎಂದು ನಮೂದಾಗಿದ್ದು, ಈ ಮೇಲಿನ ಎರಡೂ ಹೆಸರುಗಳು ನನಗೇ ಸೇರಿದ್ದು ಎಂದು ನೋಟರಿ ಮಹದೇವರವರ ಎದುರು ಪ್ರಮಾಣೀಕರಿಸುತ್ತೇನೆ. ಸಹಿ/– ಇಶ್ರತ್ ಫಾತಿಮ್ ಖಾನಂ.

ಸೈಟ್ ಬೇಕಾಗಿದೆ
30x40
ಮೈಸೂರಿನಲ್ಲಿ ಬ್ರೋಕರ್ಸ್ ಕ್ಷಮಿಸಿ
9900505342

ಅಕೌಂಟೆಂಟ್ ಬೇಕಾಗಿದ್ದಾರೆ
H D ದೇವೇಗೌಡ ಸರ್ಕಲ್ ಹತ್ತಿರ, ಆಲನಹಳ್ಳಿ
9916832479

FOR SALE
1) 30x40 attch Brahmins layout 12 lks
2) 40x60 KBL Bannur road
3) 20@30 and 30x40 G+1floor Srirampura Nagar
4) Land 0.28 gunte Varkodu Narasipura road
5) 12x36 north G+1 floor Kuvempu nagar
6) 30@40 g+floor new house Bogadi near Hari vidyalaya
PRAKRUTHI PROPERTIES
90359 90359 / 95386 90359

ಜಮೀನು ಮಾರಾಟಕ್ಕಿದೆ
17 ಗುಂಟೆ ಜಮೀನು ಮಾರಾಟಕ್ಕಿದೆ. ahad ಸಿಟಿ ಪಕ್ಕ, ಶೂಟಿಂಗ್ ಮಹದೇವಪುರ ರಸ್ತೆ
7892565278

ಎಸ್.ವಿ.ಐಟಿಐ ಕಾಲೇಜು
ಆಲನಹಳ್ಳಿ, ಮೈಸೂರು–28
ನಮ್ಮ ಕಾಲೇಜಿನಲ್ಲಿ 2 ವರ್ಷದ ಫಿಟ್ಟರ್ ತರಬೇತಿಗಾಗಿ SSLC ಪಾಸಾದ PUC (ಪಾಸ್ ಅಥವಾ ಫೇಲ್) ವಿದ್ಯಾರ್ಥಿಗಳಿಗೆ ಕೆಲವೇ ಸೀಟುಗಳು ದೊರೆಯಲಿದೆ. ವಿವರಗಳಿಗೆ: ಪ್ರಾಂಶುಪಾಲರು
9035217221 / 9980425791

SITES FOR SALE
20x30 - 12.60 Lakhs
30x40 - 25.20 Lakhs
Bank Loan upto 75%, Ready for Registration, Near Gurur Bus Stop, Ramabainagar, Mysore, DTCP approved, (Corporation Limit) 1.5 kms from J P Nagar Ring Road.
8660105902

4 BHK DUPLEX HOUSE FOR RENT
in Niveditha Nagar, Mysore
9448053926
9449833926

ತಕ್ಷಣ ಬೇಕಾಗಿದ್ದಾರೆ
ಮೈಸೂರಿನಲ್ಲಿ ವಯಸ್ಸಾದ ವೃದ್ಧರನ್ನು ಆರೈಕೆ ಮಾಡಲು ಅನುಭವವಿರುವ / ಇಲ್ಲದಿರುವ ಮಹಿಳೆಯರು / ವಿಧವೆಯರು / ವಿಚ್ಛೇದಿತೆಯರು ಹೋಂ ಕೇರ್ ಕೆಲಸಕ್ಕಾಗಿ ತಕ್ಷಣ ಬೇಕಾಗಿದ್ದಾರೆ. (ಮನೆಯಲ್ಲೇ ಉಳಿದುಕೊಳ್ಳುವವರಿಗೆ ಆದ್ಯತೆ). ಸಂಬಳ: ಊಟ, ವಸತಿಯೊಂದಿಗೆ ತಿಂಗಳ ವೇತನ ರೂ.10,000/– ರಿಂದ ರೂ.15,000/–ರವರೆಗೆ (ಆಧಾರ್ ಕಾರ್ಡ್, ಫೋಟೋ ಕಡ್ಡಾಯ) ಸಂಪರ್ಕಿಸಿ.
8904288903

ಸುಮ ಹುರುಳಿ ಹಪ್ಪಳ
ಮೈಸೂರಿನಲ್ಲಿ ಮನೆಯಲ್ಲಿ ಮಾಡಿದ ಹುರುಳಿ ಹಪ್ಪಳ ಸಿಗುತ್ತದೆ. ಉಚಿತ ಡೆಲವರಿ ಇರುತ್ತದೆ. ಮೈಸೂರಿನಲ್ಲಿ ಮಾತ್ರ. ಸಂಪರ್ಕಿಸಿ. : ಬೆಳಿಗ್ಗೆ 9 ರಿಂದ 6 ರವರೆಗೆ. ಸಂಪರ್ಕಿಸುವ ಸಂಖ್ಯೆ
9481150072

ಜಮೀನು ಮಾರಾಟಕ್ಕಿದೆ
ಮೈಸೂರು ಹೆಚ್.ಡಿ.ಕೋಟೆ ಮುಖ್ಯರಸ್ತೆಯಲ್ಲಿ 1 ಎಕರೆ 18 ಗುಂಟೆ ಹಾಗೂ ಮಾದರಹುಂಡಿ ಗ್ರಾಮದಲ್ಲಿ 32 ಗುಂಟೆ, 33 ಗುಂಟೆ 1 ಎಕರೆ 35 ಗುಂಟೆ ಕಾಂಪೌಂಡ್ ಗೇಟ್ ತಂತಿ ಬೇಲಿ ಅಳವಡಿಸಲಾಗಿದೆ. ಅತಿ ಕಡಿಮೆ ಬೆಲೆಯಲ್ಲಿ ಮಾರಾಟಕ್ಕಿದೆ.
9945661696

HOUSE FOR LEASE
Single Bedroom with all Modern Facilities House for Lease at 1st Floor (East Facing) 20x30 House in Vijayanagar 4th Stage, 1st Phase (Near Kannada Circle)
9945534749

HOUSE FOR SALE OR LEASE
North Facing 40x60 Ground Floor 3BHK, 1st Floor, 2BHK, 2 Portion with Teak & Morbles Fully Furnished Vijayanagar 3rd Stage, 'B' Block. Brokers Excuse. 3BHK 30 Lakh Lease
9686881429 / 8453878567

HOUSE FOR SALE
30x40 MUDA
New 3 BHK Duplex with Borewell, N/F Site & E/F Door, Vijayanagar 4th Stage, Near Marimallappa School - Rs.1.58 Cr.
Brokers Don't Call
8660105902

HOUSE FOR SALE
MUDA 30x40
New 4 BHK Duplex House with 22 Squares Furnished, S/F Site, E/F Door at SBM Layout, Bogadi - Rs.1.40 Cr Pillar construction, 100 mtrs from Gaddige Road
Direct Owner: 6361295132

ತಕ್ಷಣವೇ ಬೇಕಾಗಿದ್ದಾರೆ
ಪ್ರತಿಷ್ಠಿತ ಫೈನಾನ್ಸ್ ಕಂಪನಿಯಲ್ಲಿ ಕೆಲಸ ಮಾಡಲು ಹುಡುಗ, ಹುಡುಗಿಯರು ಕೆಲಸಕ್ಕೆ ಬೇಕಾಗಿದ್ದಾರೆ.
ಹುದ್ದೆ : Telecaller
ಅನುಭವ: Fresher or Experience
ಸಂಬಳ: ಆಕರ್ಷಕ ಸಂಬಳ ಜೊತೆಗೆ ಇನ್ಸೆಂಟಿವ್ (Incentive) ಟಾರ್ಗೆಟ್ ಇರುತ್ತದೆ.
ವಿದ್ಯಾರ್ಹತೆ: SSLC to any ಡಿಗ್ರಿ
8722746712
7411760524

ಸೈಟುಗಳು ಮಾರಾಟಕ್ಕಿವೆ
ತಳೂರು ಸರ್ಕಲ್, ಉದ್ಬೂರು ರಸ್ತೆ
20x30, 30x40, 40x60
H.D ಕೋಟೆ ರಿಂಗ್ ರಸ್ತೆ– 5km
ಬ್ಯಾಂಕ್ ಲೋನ್ ಲಭ್ಯವಿದೆ.
9900871768
9880779491

WANTED
Trainers / Teachers with Good English
Salary 10k to 15k
8553855535
8880183636
efelearningsolutions@gmail.com

WANTED
SALES EXECUTIVES for Mandya - Mysore District.
Contact: Sumukha Enterprises
Authorised Distributor
Forroc Chemicals (Ind) Pvt. Ltd
#KI 59 Bangalore - Mysore Road.
Kallahalli Gate, Mandya-571401
8123121462

HOUSE FOR LEASE
30x40 Architect Built 3 Bedrooms at Somanath Nagar Dattagalli Mysore
Brokers excuse
9741461969

ಛತ್ರ ಖಾಲಿ ಇದೆ
ಜೈನ್ ಭವನ ಕಲ್ಯಾಣ ಮಂಟಪ ನಂ.588, ದಿವಾನ್ಸ್ ರಸ್ತೆ, ಲಕ್ಷ್ಮೀಪುರಂ, ಮೈಸೂರು.
ದಿನಾಂಕ: 22/6/22 ರಿಂದ 23/6/22 ರಂದು ಛತ್ರ ರಿಯಾಯಿತಿ ದರದಲ್ಲಿ ದೊರೆಯುತ್ತದೆ. ಕೂಡಲೇ ಸಂಪರ್ಕಿಸಿ:
9844033655 / 9945295134
0821-2333539

ಶ್ರೀ ಕಾರ್ಯಸಿದ್ಧಿ ಸ್ವರ ಭವಿಷ್ಯ ನುಡಿದಂತೆ ನಡೆಯುವುದು
ಗುರೂಜಿ : ರಾಘವೇಂದ್ರರಾವ್
ವಿವಾಹದಲ್ಲಿ ಅಡೆತಡೆ, ಪ್ರೀತಿಯಲ್ಲಿ ನಂಬಿ ಮೋಸ, ಸತಿಪತಿ ಕಲಹ, ಇಷ್ಟಪಡುವವರು ನಿಮ್ಮಂತೆ ಆಗಲು, ಶತ್ರುಬಾಧೆ, ಲೈಂಗಿಕ ಸಮಸ್ಯೆ, ಇನ್ನು ಹಲವಾರು ಸಮಸ್ಯೆಗಳಿಗೆ ಅಷ್ಟಮಂಗಳ ಪ್ರಶ್ನೆಗಳಿಂದ ಸಮಸ್ಯೆಗಳಿಗೆ ಪರಿಹಾರ ತಿಳಿಸುತ್ತಾರೆ.
9036367905

ಶ್ರೀ ಕನ್ನಿಕಾ ಪರಮೇಶ್ವರಿ ಜ್ಯೋತಿಷ್ಯಾಲಯ
ಪಂಡಿತ್ ಭೀಮರಾವ್
Mob: 9972196728
ನಿಮ್ಮ ಒಂದು ಕರೆ ನಿಮ್ಮ ಭವಿಷ್ಯವನ್ನು ಬದಲಿಸಬಲ್ಲದು. ಬೇರೆ ಯಾರಾದರು ಮಾಡಿಕೊಟ್ಟಲ್ಲಿ ಸೂಕ್ತ ಬಹುಮಾನ ಕೊಡಲಾಗುವುದು. ಮದುವೆ, ಸಂತಾನ, ಅತ್ತೆ, ಸೊಸೆ ಕಲಹ, ಆರೋಗ್ಯ ಶತ್ರುನಾಶ, ವ್ಯಾಪಾರ ವಶ, ಲಕ್ಷ್ಮಿ ವಶ, ದಾಂಪತ್ಯ ಸಮಸ್ಯೆ, ಲೈಂಗಿಕ ಸಮಸ್ಯೆ ಇನ್ನೂ ಅನೇಕ ಗುಪ್ತ ಸಮಸ್ಯೆ ಏನೇ ಇರಲಿ ಎಷ್ಟೇ ಕಠಿಣವಾಗಿರಲಿ, 100% ಶಾಶ್ವತ ಪರಿಹಾರ.
ವಿಳಾಸ: 806, 3ನೇ ಹಂತ, ಆದಿತ್ಯ ಆಸ್ಪತ್ರೆ ಹತ್ತಿರ, ಗೋಕುಲಂ, ಮೈಸೂರು

ಕೊಳ್ಳೇಗಾಲದ ಜ್ಯೋತಿಷ್ಯರು
ಮೋಡಿ ಮಾಂತ್ರಿಕರು ಪಂ.ಎಸ್‌ಕುಮಾರಸ್ವಾಮಿ
ಮೊ.: 9880583804
ಸ್ತ್ರೀ ಪುರುಷ ಪ್ರೇಮ, ಸಂತಾನ, ದಾಂಪತ್ಯ ಸಮಸ್ಯೆ (Divorce) ಡಿವೋರ್ಸ್ ಪ್ರಾಬ್ಲಮ್, ಸಾಲಬಾಧೆ, ಶತ್ರುಬಾಧೆ, ದುಷ್ಟಶಕ್ತಿ, ಇಷ್ಟಪಟ್ಟವರು ನಿಮ್ಮಂತಾಗಲು, ಕೊಳ್ಳೇಗಾಲ ಮೋಡಿ ಮಾಂತ್ರಿಕ ಶಕ್ತಿಯಿಂದ ನಿಮ್ಮ ಯಾವುದೇ ಸಮಸ್ಯೆಗಳಿಗೆ ಎರಡೇ ದಿನದಲ್ಲಿ ಶಾಶ್ವತ ಪರಿಹಾರ ಶತಃಸಿದ್ಧ. ನಂಬಿ ಬನ್ನಿ. ಖಾಯಂ ವಿಳಾಸ: (Reliance Smart) ಹತ್ತಿರ, ATM ಪಕ್ಕ, ಟಿಕೆಟ್ ಬುಕ್ಕಿಂಗ್ ಕೌಂಟರ್ ಹತ್ತಿರ, (KSRTC) ಸಬರ್ಬ್ ಬಸ್ ಸ್ಟ್ಯಾಂಡ್, ಮೈಸೂರು

ಮೈಸೂರು ಮಿತ್ರ
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತು ಗಳು ವಿಶ್ವಾಸಪೂರ್ಣವೇ ಆದರೂ ಅವು ಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸ ಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಸೋಮವಾರ
ಗುರುವಾರ
ಶನಿವಾರ
ಪ್ರತಿ ಜಾಹೀರಾತಿಗೆ
ರೂ. 630 ಮಾತ್ರ

ದಶಪಥ ರಸ್ತೆಗೆ ಸಂಪರ್ಕ ಕಲ್ಪಿಸುವ ಬಗ್ಗೆ ಶೀಘ್ರ ಮಾತುಕತೆ

ಸಚಿವ ಕೆ.ಸಿ.ನಾರಾಯಣಗೌಡ ಭರವಸೆ



ಮಂಡ್ಯ, ಜೂ.3(ಮೋಹನ್‌ರಾಜ್)– ದಶಪಥ ರಸ್ತೆಯಾಗಿ ಮೇಲ್ದರ್ಜೆಗೇರುತ್ತಿರುವ ಮೈಸೂರು–ಬೆಂಗಳೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ಮಂಡ್ಯ, ರಾಮನಗರ, ಮೈಸೂರು ಜಿಲ್ಲಾ ರಸ್ತೆಗಳು ಹಾಗೂ ಗ್ರಾಮೀಣ ರಸ್ತೆಗಳಿಗೆ ಸಂಪರ್ಕ ಕಲ್ಪಿಸಿಲ್ಲ ಎಂಬ ಅಳಲನ್ನು ಸ್ಥಳೀಯರು ವ್ಯಕ್ತಪಡಿಸುತ್ತಿದ್ದು, ಈ ಬಗ್ಗೆ ಶೀಘ್ರ ಸಂಬಂಧಿಸಿದ ಅಧಿಕಾರಿಗಳೊಂದಿಗೆ ಚರ್ಚಿಸಿ, ಸಮಸ್ಯೆ ಬಗೆಹರಿಸುವುದಾಗಿ ಕ್ರೀಡೆ ಹಾಗೂ ರೇಷ್ಮೆ ಸಚಿವ ಕೆ.ಸಿ.ನಾರಾಯಣಗೌಡ ಭರವಸೆ ನೀಡಿದರು.

ನಗರದ ಪತ್ರಿಕಾ ಭವನದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದಶಪಥ ರಸ್ತೆ ಕಾಮಗಾರಿ ನಡೆಯುತ್ತಿದ್ದು, ಹೆಚ್.ಡಿ.ಕುಮಾರಸ್ವಾಮಿ ನೇತೃತ್ವದ ಸಮ್ಮಿಶ್ರ ಸರ್ಕಾರ ಅಧಿಕಾರದಲ್ಲಿದ್ದಾಗ ನಮಗೆ ರಸ್ತೆ ಬ್ಲೂಪ್ರಿಂಟ್ ಬಗ್ಗೆ ಮಾಹಿತಿ ಇರಲಿಲ್ಲ. ರಸ್ತೆ ಹಾದು ಹೋಗುವ ಕ್ಷೇತ್ರಗಳ ಶಾಸಕರು ಸಹ ಈ ಬಗ್ಗೆ ಯಾವುದೇ ವಿಚಾರ ಪ್ರಸ್ತಾಪ ಮಾಡಿಲ್ಲ. ಆದರೆ ಇದೀಗ ರಸ್ತೆ ಮುಗಿಯುವ ಸಂದರ್ಭ ಹೆದ್ದಾರಿಯಿಂದ ಗ್ರಾಮಗಳು ಹಾಗೂ ಜಿಲ್ಲಾ ರಸ್ತೆಗಳಿಗೆ ಸಂಪರ್ಕವಿಲ್ಲ ಎಂಬ ಮಾಹಿತಿ ಹೊರಬಿದ್ದಿದ್ದು, ಇದನ್ನು ಸರಿಪಡಿಸುತ್ತೇವೆ ಎಂದರು. ಮೈಸೂರು–ಬೆಂಗಳೂರು ದಶಪಥ ರಸ್ತೆ ಕೆಂಗೇರಿಯಿಂದ ಮೈಸೂರು ನಗರವನ್ನು ಸಂಪರ್ಕಿಸಲಿದ್ದು, ರಾಮನಗರ, ಚನ್ನಪಟ್ಟಣ, ಮದ್ದೂರು, ಮಂಡ್ಯ, ಶ್ರೀರಂಗಪಟ್ಟಣ ನಗರ ಪ್ರದೇಶ ಹೊರತುಪಡಿಸಿ, ಫ್ಲೈ ಓವರ್ ಹಾಗೂ ರಿಂಗ್ ರಸ್ತೆ ಮೂಲಕ ಮೈಸೂರು ತಲುಪಲಿದೆ. ಆದರೆ ಪ್ರಮುಖವಾಗಿ ರಾಮನಗರ ಮತ್ತು ಮಂಡ್ಯ ಜಿಲ್ಲೆ ದಶಪಥ ರಸ್ತೆ ಪಕ್ಕದಲ್ಲಿ ಬರುವ ಗ್ರಾಮಗಳಿಗೆ ರಾಷ್ಟ್ರೀಯ ಹೆದ್ದಾರಿಯಲ್ಲಿ ಸಂಪರ್ಕ ಕಲ್ಪಿಸುವ ರಸ್ತೆಯಿಲ್ಲ. ಸರ್ವೀಸ್ ರಸ್ತೆಯಲ್ಲೇ ಹೋಗಬೇಕಾದ ಪರಿಸ್ಥಿತಿ ಅನಿವಾರ್ಯವಾಗಿದೆ ಇದರಿಂದ ನಾಲ್ಕೈದು ಕಿಲೋ ಮೀಟರ್ ಬಳಸಿಕೊಂಡು ಹೋಗಬೇಕಿದೆ. ಈ ನಿಟ್ಟಿನಲ್ಲಿ ಗ್ರಾಮ ಹಾಗೂ ನಗರ ಪ್ರದೇಶದಲ್ಲಿ ಅಗತ್ಯ ರಸ್ತೆ ಸಂಪರ್ಕ ಕಲ್ಪಿಸುವಂತೆ ಅಧಿಕಾರಿಗಳ ಬಳಿ ಮಾತನಾಡಲಾಗುವುದು ಎಂದರು.

ಸಂಸದ ಪ್ರತಾಪ್ ಸಿಂಹ ಅವರಿಗೂ ಈ ಬಗ್ಗೆ ಮಾಹಿತಿ ಇದ್ದು, ಅವರು ಸಹ ಕೆಲವು ಗ್ರಾಮಸ್ಥರಿಂದ ಅಹವಾಲು ಸ್ವೀಕರಿಸಿದ್ದಾರೆ. ನಾನು ಸಹ ಸಂಸದರೊಂದಿಗೆ ಈ ಬಗ್ಗೆ ಮಾತನಾಡಿ, ಅಗತ್ಯ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು. ಸುದ್ದಿಗೋಷ್ಠಿಯಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ಸಿ.ಪಿ.ಉಮೇಶ್, ಮುಖಂಡರಾದ ಸಿದ್ದರಾಮಯ್ಯ, ಸಿ.ಟಿ.ಮಂಜುನಾಥ್, ನಾಗಾನಂದ್ ಇತರರಿದ್ದರು.

ಹೆಚ್.ಕೆ.ರಾಮು ಪರ ಶಾಸಕ ತಮ್ಮಣ್ಣ ಪ್ರಚಾರ



ಮದ್ದೂರು, ಜೂ.3– ಹೆಚ್.ಡಿ.ಕುಮಾರಸ್ವಾಮಿ ಅವರು ಮುಖ್ಯಮಂತ್ರಿಯಾಗಿದ್ದ ವೇಳೆ ಹಲವು ಅಭಿವೃದ್ಧಿ ಕಾರ್ಯಗಳಿಗೆ ಒತ್ತು ನೀಡಲಾಗಿತ್ತು. ಅಷ್ಟೇ ಅಲ್ಲದೇ ಶಿಕ್ಷಣ ಕ್ಷೇತ್ರಕ್ಕೂ ಆದ್ಯತೆ ನೀಡಲಾಗಿತ್ತು ಎಂದು ಶಾಸಕ ಡಿ.ಸಿ.ತಮ್ಮಣ್ಣ ತಿಳಿಸಿದರು.

ಪಟ್ಟಣದ ಶಿವಪುರ ಪೂರ್ಣಪ್ರಜ್ಞಾ ಕಾನ್ವೆಂಟ್‌ನಲ್ಲಿ ದಕ್ಷಿಣ ಪದವೀಧರರ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಹೆಚ್.ಕೆ.ರಾಮು ಪರ ಪ್ರಚಾರ ನಡೆಸಿ ಮಾತನಾಡಿದ ಅವರು, ಈಗಿರುವ ಬಿಜೆಪಿ ಸರ್ಕಾರ ಯಾವುದೇ ಜನಪರ ಕೆಲಸ ಮಾಡದೆ ರೈತ, ಜನವಿರೋಧಿಯಾಗಿದೆ. ಶಿಕ್ಷಣ ಕ್ಷೇತ್ರಕ್ಕೂ ಯಾವುದೇ ಅನುದಾನ ನೀಡುತ್ತಿಲ್ಲ ಎಂದು ಟೀಕಿಸಿದರು.

2023ಕ್ಕೆ ನಮ್ಮ ಜೆಡಿಎಸ್ ಸರ್ಕಾರ ಅಧಿಕಾರಕ್ಕೆ ಬಂದರೆ ಕುಮಾರಸ್ವಾಮಿ ಅವರು ಪಂಚತಂತ್ರದಲ್ಲಿ ಘೋಷಿಸಿರುವಂತೆ ಶಿಕ್ಷಣ ಕ್ಷೇತ್ರಕ್ಕೆ ಮಹತ್ವ ನೀಡಲಿದ್ದಾರೆ. ಹೆಚ್.ಕೆ.ರಾಮು ಅತ್ಯಂತ ಸೂಕ್ತ ಅಭ್ಯರ್ಥಿಯಾಗಿದ್ದು, ಸರ್ಕಾರಿ ನೌಕರರ ಸಂಘದ ಅಧ್ಯಕ್ಷರಾಗಿ ಕೆಲಸ ಮಾಡಿರುವ ಅವರ ಅನುಭವ ಹಾಗೂ ಜನಪರತೆ ಪ್ರಯೋಜನಕ್ಕೆ ಬರುತ್ತದೆ ಎಂದರು.

ವಿಧಾನಪರಿಷತ್ ಸದಸ್ಯ ಕೆ.ಟಿ.ಶ್ರೀಕಂಠೇಗೌಡ ಮಾತನಾಡಿ, ಹೆಚ್.ಕೆ.ರಾಮು ಅವರು ಸರ್ಕಾರಿ ನೌಕರರ ಸಂಘದ ಅಧ್ಯಕ್ಷರಾಗಿ ಸರ್ಕಾರಿ ನೌಕರರ ಕ್ಷೇಮಾಭಿವೃದ್ಧಿಗೆ ಕೆಲಸ ಮಾಡಿದ್ದಾರೆ. ಪದವಿಧರ ಕ್ಷೇತ್ರದ ಚುನಾವಣೆಯಲ್ಲಿ ಆಯ್ಕೆಯಾದರೆ ಕ್ಷೇತ್ರದ ವ್ಯಾಪ್ತಿಯ 1.40 ಲಕ್ಷ ಪದವೀಧರರ ಒಳಿತಿಗಾಗಿ ದುಡಿಯುತ್ತಾರೆ. ದಕ್ಷಿಣ ಪದವಿಧರ ಕ್ಷೇತ್ರದ ಚುನಾವಣೆಯಲ್ಲಿ ಬಿಜೆಪಿ ಅವರಿಗೆ ಮತ ಕೇಳಲು ಯಾವುದೇ ನೈತಿಕತೆ ಇಲ್ಲ ಎಂದು ಟೀಕಿಸಿದರು. ಈ ವೇಳೆ ಶಾಲೆ ಅಧ್ಯಕ್ಷೆ ಕಸ್ತೂರಿ, ಕಾರ್ಯದರ್ಶಿ ಅನಂತೇಗೌಡ, ಮುಖಂಡರಾದ ಸಿ.ಕೆ.ಸ್ವಾಮಿಗೌಡ, ಜಯಶಂಕರ್ ಇದ್ದರು.

ನಾಗಮಂಗಲ ಬಳಿ ತೆಂಗಿನ ಗಿಡ, ಟೊಮೆಟೋ ಬೆಳೆ ಧ್ವಂಸ



ನಾಗಮಂಗಲ, ಜೂ.3– ದುಷ್ಕರ್ಮಿಗಳು ರಾತ್ರೋ ರಾತ್ರಿ ಜಮೀನಿನಲ್ಲಿ ಬೆಳೆದಿದ್ದ ತೆಂಗಿನಗಿಡ ಮತ್ತು ಟೊಮೆಟೋ ಬೆಳೆಯನ್ನು ನಾಶ ಮಾಡಿರುವ ಘಟನೆ ತಾಲೂಕಿನ ಹೊಣಕೆರೆ ಹೋಬಳಿ ಶಾನುಬೋಗನಹಳ್ಳಿ ಗ್ರಾಮದಲ್ಲಿ ನಡೆದಿದೆ.



ವಿವರ: ಗ್ರಾಮದ ಸರ್ವೆ ನಂ.18ರಲ್ಲಿ 1.10 ಎಕರೆ ಜಮೀನಿದ್ದು, ಗ್ರಾಮದ ನಿವಾಸಿ ಮೇಲೇಗೌಡರು 1996 ರಂದಲೂ ವ್ಯವಸಾಯ ಮಾಡಿಕೊಂಡು ಬರುತ್ತಿದ್ದರು. ಅಲ್ಲದೇ ಆ ಜಮೀನು ಸರ್ಕಾರದ ಗೋಮಾಳವಾದ್ದರಿಂದ ನಂ.53ರ ಫಾರಂನಲ್ಲಿ ದರಖಾಸ್ತು ನಿಯಮದಡಿ ತನಗೆ ಮಾಡಿಕೊಡಬೇಕೆಂದು ಮನವಿ ಸಲ್ಲಿಸಿದರು. ಈ ಜಮೀನಿನ ಉಳುಮೆ ವಿಷಯದಲ್ಲಿ ಕೆಲವು ಗ್ರಾಮಸ್ಥರಿಗೂ ಇವರಿಗೂ ಸ್ವಲ್ಪ ವೈಮನಸ್ಸು ಇತ್ತು ಎನ್ನಲಾಗಿದೆ.

ಮೇಲೇಗೌಡರ ಪುತ್ರ ಶ್ರೀನಿವಾಸ್ ಜಮೀನನ್ನು ಮಟ್ಟ ಮಾಡಿ ತೆಂಗಿನಗಿಡ ನೆಟ್ಟು, ಟೊಮೆಟೋ ಬೆಳೆದಿದ್ದರು. ಫಸಲು ಕಟಾವಿಗೆ ಬಂದಿತ್ತು. ಒಂದೆರಡು ದಿನದಲ್ಲಿ ಟೊಮೆಟೋವನ್ನು ಮಾರುಕಟ್ಟೆಗೆ ಹಾಕಬೇಕೆಂದು ನಿರ್ಧರಿಸಿದ್ದರು. ಆದರೆ ದುಷ್ಕರ್ಮಿಗಳು ಜಮೀನಿನಲ್ಲಿದ್ದ ಸುಮಾರು 70ಕ್ಕೂ ಹೆಚ್ಚು ತೆಂಗಿನ ಗಿಡ ಹಾಗೂ 8 ಗುಂಟೆ ಜಮೀನಿನಲ್ಲಿ ಬೆಳೆದಿದ್ದ ಟೊಮೆಟೋ ಬೆಳೆ ನಾಶ ಮಾಡಿ, ನೀರು ಹಾಯಿಸಲು ಅಳವಡಿಸಿದ್ದ ಪೈಪ್‌ಗಳನ್ನು ತುಂಡು ಮಾಡಿ ಹೋಗಿದ್ದಾರೆ. ಇದರಿಂದ ಲಕ್ಷಾಂತರ ರೂ. ನಷ್ಟ ಸಂಭವಿಸಿದೆ ಎನ್ನಲಾಗಿದೆ. ಈ ಸಂಬಂಧ ನಾಗಮಂಗಲ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಶಾಸಕರ ಭೇಟಿ: ವಿಷಯ ತಿಳಿಯುತ್ತಿದ್ದಂತೆ ಶಾಸಕ ಸುರೇಶ್‌ಗೌಡ ಗ್ರಾಮಕ್ಕೆ ಭೇಟಿ ನೀಡಿ ನಾಶವಾಗಿದ್ದ ಬೆಳೆ ವೀಕ್ಷಿಸಿ ಕುಟುಂಬಕ್ಕೆ ಸಾಂತ್ವನ ಹೇಳಿದರು.

ತಂಬಾಕು ದುಷ್ಪರಿಣಾಮದ ಬಗ್ಗೆ ಜಾಗೃತಿ ಮೂಡಿಸಿ

ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಜಿಲ್ಲಾ ನಿರ್ದೇಶಕ ಮಹಾಬಲ ಕುಲಾಲ್

ಕೆ.ಆರ್.ಪೇಟೆ, ಜೂ.3(ಶ್ರೀನಿವಾಸ್)– ಮಾನವನ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುವ ತಂಬಾಕು ಹಾಗೂ ತಂಬಾಕು ಉತ್ಪನ್ನಗಳ ಬಗ್ಗೆ ಶ್ರೀಸಾಮಾನ್ಯರಲ್ಲಿ ಜಾಗೃತಿ ಮೂಡಿಸುವ ಕೆಲಸವನ್ನು ವಿದ್ಯಾರ್ಥಿಗಳು ಹಾಗೂ ಯುವಕರು ಮಾಡಬೇಕು ಎಂದು ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಜಿಲ್ಲಾ ನಿರ್ದೇಶಕ ಮಹಾಬಲ ಕುಲಾಲ್ ಕರೆ ನೀಡಿದರು.

ಪಟ್ಟಣದ ಸರ್ಕಾರಿ ಪದವಿಪೂರ್ವ ಕಾಲೇಜಿನ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಆಶ್ರಯದಲ್ಲಿ ವಿಶ್ವ ತಂಬಾಕು ವಿರೋಧಿ ದಿನ ಕುರಿತು ಆಯೋಜಿಸಿದ್ದ ಜಾಗೃತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಆರೋಗ್ಯ ಭಾಗ್ಯಕ್ಕಿಂತ ಮಿಗಿಲಾದ ಭಾಗ್ಯ ಇಲ್ಲ. ಮಾನವನ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರಿ ಸಾವಿನ ಬಾಗಿಲನ್ನು ತಟ್ಟುವಂತೆ ಮಾಡುವ ನಿಕೋಟಿನ್ ಎಂಬ ವಿಷಕಾರಿ ವಸ್ತುವು ತಂಬಾಕಿನಲ್ಲಿರುವುದರಿಂದ ವಿದ್ಯಾರ್ಥಿಗಳು, ಯುವಕರು ಸೇರಿದಂತೆ ಗ್ರಾಮೀಣ ಜನರು ಹಾಗೂ ಮಹಿಳೆಯರು ತಂಬಾಕು ವಸ್ತುಗಳ ಬಳಕೆಯಿಂದ ದೂರವಿದ್ದು ದುಶ್ಚಟಗಳಿಗೆ ಬಲಿಯಾಗದಂತೆ ಎಚ್ಚರ ವಹಿಸಬೇಕು ಎಂದರು.

ಪಟ್ಟಣ ಠಾಣೆ ಇನ್ಸ್‌ಪೆಕ್ಟರ್ ಎಂ.ಕೆ.ದೀಪಕ್ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಧರ್ಮಸ್ಥಳ ಸಂಸ್ಥೆಯವರು ತಂಬಾಕಿನಿಂದಾಗುವ ದುಷ್ಪರಿಣಾಮಗಳ ಬಗ್ಗೆ ವಿದ್ಯಾರ್ಥಿಗಳಿಗೆ ಅರಿವು ಮೂಡಿಸುತ್ತಿದ್ದು, ಕುಡಿತ, ಮಾದಕ ವಸ್ತುಗಳ ಬಳಕೆಯಿಂದಾಗುವ ಕೆಡಕುಗಳ ಬಗ್ಗೆ ಜಾಗೃತಿ ಮೂಡಿಸಿ ಕ್ಷಣಿಕ ಸುಖದ ಆಸೆಗೆ ಅಮೂಲ್ಯ ಜೀವನ ಹಾಳು ಮಾಡಿಕೊಳ್ಳದಂತೆ ಮನವಿ ಮಾಡುತ್ತಿದ್ದಾರೆ. ಯುವಕರು ತಂಬಾಕು ಸೇರಿದಂತೆ ಮಾದಕ ವಸ್ತುಗಳ ದಾಸರಾಗಿ ಸಮಾಜಕ್ಕೆ ಕಂಟಕರಾಗಿ ತಂದೆ ತಾಯಿ ಹಾಗೂ ಸಮಾಜಕ್ಕೆ ಹೊರೆಯಾಗದೇ ಶಿಸ್ತುಬದ್ಧ ಆರೋಗ್ಯವಂತ ಜೀವನ ನಡೆಸಿ ಇತರರಿಗೆ ಮಾದರಿಯಾಗಬೇಕು ಎಂದರು.

ಸರ್ಕಾರಿ ಪದವಿಪೂರ್ವ ಕಾಲೇಜು ಪ್ರೌಢಶಾಲಾ ವಿಭಾಗದ ಉಪಪ್ರಾಂಶುಪಾಲ ರವಿಕುಮಾರ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ತಾಲೂಕು ಆರೋಗ್ಯಾಧಿಕಾರಿ ಡಾ.ಮಧುಸೂದನ್, ತಾಲೂಕು ಆರೋಗ್ಯ ಶಿಕ್ಷಣಾಧಿಕಾರಿ ಶಿವಮ್ಮ, ಪದವಿಪೂರ್ವ ಕಾಲೇಜಿನ ಎನ್‌ಎಸ್‌ಎಸ್ ಅಧಿಕಾರಿ ಚಂದ್ರಶೇಖರ್, ಧರ್ಮಸ್ಥಳ ಜನಜಾಗೃತಿ ಹೋರಾಟ ಸಮಿತಿ ನಿಕಟಪೂರ್ವ ಜಿಲ್ಲಾಧ್ಯಕ್ಷ ಡಾ.ಕೆ.ಎಸ್.ರಾಜೇಶ್, ಪುರಸಭಾ ಸದಸ್ಯ ಕೆ.ಆರ್.ನೀಲಕಂಠ, ತಾಲೂಕು ಯೋಜನಾಧಿಕಾರಿ ಮಮತಾಶೆಟ್ಟಿ, ಸ್ತ್ರೀಶಕ್ತಿ ಪ್ರಗತಿ ಬಂಧು ಸ್ವಸಹಾಯ ಸಂಘಗಳ ಒಕ್ಕೂಟದ ಅಧ್ಯಕ್ಷೆ ಚಂದ್ರಕಲಾ, ಮೇಲ್ವಿಚಾರಕರಾದ ಅನ್ನಪೂರ್ಣ, ಕಾವ್ಯ ಮತ್ತಿತರರಿದ್ದರು.



ಬೈಕ್ ಡಿಕ್ಕಿ: ಪಾದಚಾರಿ ಸಾವು



ಮಳವಳ್ಳಿ,ಜೂ.3– ಬೈಕ್ ಡಿಕ್ಕಿ ಹೊಡೆದ ಪರಿಣಾಮ ಪಾದಚಾರಿ ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ಪಟ್ಟಣದ ಕನಕಪುರ ರಸ್ತೆಯಲ್ಲಿ ಗುರುವಾರ ರಾತ್ರಿ ನಡೆದಿದೆ. ತಾಲೂಕಿನ ಅಂಚೆದೊಡ್ಡಿ ಗ್ರಾಮದ ನಿವಾಸಿ ಮನುಕುಮಾರ್(35) ಸಾವನ್ನಪ್ಪಿದವರು. ಈತ ಮಳವಳ್ಳಿಯಲ್ಲಿ ಬಾಲಾಜಿ ಡಿಸ್ಟ್ರಿಬ್ಯೂಟರ್ಸ್ ಹೆಸರಿನಲ್ಲಿ ವಿವಿಧ ಕಂಪನಿಗಳ ಸಾಮಗ್ರಿಗಳನ್ನು ಮಾರಾಟ ಮಾಡುವ ಏಜೆನ್ಸಿ ನಡೆಸುತ್ತಿದ್ದರು. ಗುರುವಾರ ರಾತ್ರಿ ಊಟ ಮುಗಿಸಿಕೊಂಡು ಸ್ನೇಹಿತನೊಂದಿಗೆ ವಾಯು ವಿಹಾರಕ್ಕೆ ತೆರಳಿದ್ದ ವೇಳೆ ಹಿಂಬದಿಯಿಂದ ಬಂದ ಬೈಕ್ ಡಿಕ್ಕಿ ಹೊಡೆದಿದೆ. ಪರಿಣಾಮ ತೀವ್ರ ಗಾಯಗೊಂಡು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಈ ಸಂಬಂಧ ಮಳವಳ್ಳಿ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಮುಂದಿನ ತನಿಖೆ ಕೈಗೊಂಡಿದ್ದಾರೆ.

ಇಂದು ವಿದ್ಯುತ್ ವ್ಯತ್ಯಯ

ಮಂಡ್ಯ, ಜೂ.3–ವಿ.ಸಿ.ಫಾರಂ ವಿದ್ಯುತ್ ವಿತರಣಾ ಕೇಂದ್ರದಲ್ಲಿ ತ್ರೈಮಾಸಿಕ ಕಾರ್ಯ ಹಮ್ಮಿಕೊಂಡಿರುವುದರಿಂದ ಜೂ.4 ರಂದು ಬೆಳಗ್ಗೆ 9 ರಿಂದ ಸಂಜೆ 5ರವರೆಗೆ ವಿ.ಸಿ.ಫಾರಂ, ಶಿವಳ್ಳಿ, ದುದ್ದ, ಬಿ.ಹಟ್ನ, ಬೇವಕಲ್ಲು, ಹುಲಿಕೆರೆ, ಚಂದಗಾಲು, ಹುಲ್ಲೇನಹಳ್ಳಿ, ಹೊಳಲು ಸೇರಿದಂತೆ ಸುತ್ತಮುತ್ತಲ ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ವಿಶ್ವ ಪರಿಸರ ದಿನಾಚರಣೆ

ಮಂಡ್ಯ, ಜೂ.3–ಜಿಲ್ಲಾಡಳಿತ, ಜಿಪಂ, ಸಾರ್ವಜನಿಕ ಮತ್ತು ಪದವಿಪೂರ್ವ ಶಿಕ್ಷಣ ಇಲಾಖೆ, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ, ವಿಜ್ಞಾನ ಮತ್ತು ಪರಿಸರ ಶಿಕ್ಷಣ, ಆಕಾಡೆಮಿ, ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಸಂಯುಕ್ತಾಶ್ರಯದಲ್ಲಿ ಜೂ.6 ರಂದು ಬೆಳಗ್ಗೆ 9.30ಕ್ಕೆ ನಗರದ ಶ್ರೀ ನಾಲ್ವಡಿ ಕೃಷ್ಣರಾಜ ಕಲಾಮಂದಿರದಲ್ಲಿ ವಿಶ್ವ ಪರಿಸರ ದಿನಾಚರಣೆ ಆಯೋಜಿಸಲಾಗಿದೆ ಎಂದು ಪ್ರಾದೇಶಿಕ ಕಚೇರಿ ಪರಿಸರ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹೊಸಹಳ್ಳಿ ಗ್ರಾಪಂಗೆ ಜಯಶೀಲಾ ಅಧ್ಯಕ್ಷೆ



ಶ್ರೀರಂಗಪಟ್ಟಣ, ಜೂ.3(ವಿನಯ್ ಕಾರೇಕುರ)– ತಾಲೂಕಿನ ಹೊಸಹಳ್ಳಿ ಗ್ರಾಪಂ ಅಧ್ಯಕ್ಷರಾಗಿ ಜಯಶೀಲಾ ಆಯ್ಕೆಯಾಗಿದ್ದಾರೆ.

20 ಸದಸ್ಯ ಬಲದ ಗ್ರಾಪಂನಲ್ಲಿ ನಿಕಟಪೂರ್ವ ಅಧ್ಯಕ್ಷೆ ಉಮಾ ಅವರ ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನಕ್ಕೆ ಕಾಂಗ್ರೆಸ್ ಬೆಂಬಲಿತರಾಗಿ ಜಯಶೀಲಾ, ಜೆಡಿಎಸ್ ಬೆಂಬಲಿತರಾಗಿ ಎಲಿಜಬೆತ್ ರಾಣಿ, ಕೋಮಲಾ, ಅಂಬಿಕಾ, ನಂದಿನಿ ಮತ್ತು ಲಕ್ಷ್ಮಿ ಸೇರಿದಂತೆ 6 ಮಂದಿ ಸ್ಪರ್ಧಿಸಿದ್ದರು. ನಂತರ ನಡೆದ ಚುನಾವಣೆಯಲ್ಲಿ ಜಯಶೀಲಾ 11 ಮತ ಪಡೆದು ಜಯಗಳಿಸಿದರೆ, ಎಲಿಜಬೆತ್ ರಾಣಿ 9 ಮತ ಪಡೆದು ಪರಾಭವಗೊಂಡರು. ಉಳಿದವರಿಗೆ ಯಾವುದೇ ಮತ ಸಿಗಲಿಲ್ಲ. ತಾಪಂ ಇಓ ಜಿ.ಬಿಂದು ಚುನಾವಣಾ ಪ್ರಕ್ರಿಯೆ ನಡೆಸಿಕೊಟ್ಟರು. ನೂತನ ಅಧ್ಯಕ್ಷೆ ಜಯಶೀಲಾ ಅವರನ್ನು ಪಿಡಿಓ ಸೆಂದಿಲ್, ಸದಸ್ಯರು ಹಾಗೂ ಕಾಂಗ್ರೆಸ್ ಮುಖಂಡರು ಅಭಿನಂದಿಸಿದರು.

ಇಲ್ಲದ ನಿವೇಶನಗಳ ನೋಂದಣಿ ಮಾಡಿ ದಂಪತಿಗೆ 38 ಲಕ್ಷ ರೂ. ವಂಚನೆ

ಮೈಸೂರು, ಜೂ.3–ನಕಲಿ ದಾಖಲೆಗಳನ್ನು ಸೃಷ್ಟಿಸಿ ಎರಡು ನಿವೇಶನಗಳನ್ನು ನೋಂದಣಿ ಮಾಡಿಕೊಳ್ಳುವ ಮೂಲಕ ದಂಪತಿಗೆ 38 ಲಕ್ಷ ರೂ. ವಂಚಿಸಿರುವ ಬಗ್ಗೆ ಮೈಸೂರಿನ ಕೆ.ಆರ್.ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕ್ರೈಂ ಬಾಕ್ಸ್

ರಾಮಾನುಜ ರಸ್ತೆ ನಿವಾಸಿ, ಜೆ.ಕೆ.ಟೈರ್ಸ್ ನಿವೃತ್ತ ಉದ್ಯೋಗಿ ಹೆಚ್.ಆರ್.ರಮೇಶ್ ಮತ್ತು ಬಿಎಸ್‌ಎನ್‌ಎಲ್ ನಿವೃತ್ತ ಉದ್ಯೋಗಿ ಬಿ.ಜಿ.ಮಾಲತಿ ವಂಚನೆಗೊಳಗಾದವರು. ರಾಮಕೃಷ್ಣನಗರ 'ಇ' ಅಂಡ್ 'ಎಫ್' ಬ್ಲಾಕ್‌ನ ರಾಘವೇಂದ್ರ ಸೇಠ್ ಮತ್ತು ಕೆ.ಆರ್.ಮೊಹಲ್ಲಾದ ಸಿದ್ದರಾಜು ಆರೋಪಕ್ಕೆ ಗುರಿಯಾಗಿರುವವರು.

ವಿವರ: ಇವರ ಮನೆಯಲ್ಲಿ ಜವರಮ್ಮ ಸುಮಾರು 20 ವರ್ಷದಿಂದ ಕೆಲಸ ಮಾಡುತ್ತಿದ್ದು, ಆಕೆ ಬಾರದೇ ಇದ್ದಾಗ ಮಗಳು ಭಾಗ್ಯ ಕೆಲಸಕ್ಕೆ ಬರುತ್ತಿದ್ದರು. ಈ ವಿಶ್ವಾಸದಿಂದಾಗಿ ಭಾಗ್ಯ ಅವರಿಗೆ ದಂಪತಿ 12.50 ಲಕ್ಷ ರೂ. ಸಾಲ ನೀಡಿದ್ದು, ಹಣವನ್ನು ವಾಪಸ್ ಕೇಳಿದಾಗ ಆಕೆ ತಾನು ಸಿದ್ದರಾಜು ಎಂಬಾತನಿಗೆ ಹಣ ನೀಡಿದ್ದು, ಆತ ವಾಪಸ್ ಕೊಡದೇ ಸತಾಯಿಸುತ್ತಿದ್ದಾನೆ. ಹೀಗಾಗಿ ಹಣ ವಸೂಲಿ ಮಾಡಲು ರಾಘವೇಂದ್ರ ಸೇಠ್ ಎಂಬಾತನಿಗೆ ಹೇಳಿದ್ದೇನೆ ಎಂದು ದಂಪತಿಗೆ ತಿಳಿಸಿದ್ದಾಳೆ.

ನಂತರ ಭಾಗ್ಯ ಮೂಲಕ ದಂಪತಿಗೆ ಪರಿಚಯವಾದ ರಾಘವೇಂದ್ರ ಸೇಠ್, ಸಿದ್ದರಾಜುವಿನಿಂದ ಹಣ ವಸೂಲಿ ಮಾಡುವುದು ಅಷ್ಟು ಸುಲಭವಲ್ಲ. ಆತನಿಂದ ಹಣ ವಸೂಲಿ ಮಾಡಲು ತನಗೆ 3 ಲಕ್ಷ ರೂ. ನೀಡಬೇಕೆಂದು, ಅದನ್ನೂ ಚೆಕ್ ಮೂಲಕ ಪಡೆದಿದ್ದಾನೆ. ಕೆಲ ದಿನಗಳ ನಂತರ ದಂಪತಿ ಭೇಟಿ ಮಾಡಿದ ರಾಘವೇಂದ್ರ ಸೇಠ್, ಈಗ ಸಿದ್ದರಾಜು ಬಳಿ ಹಣವಿಲ್ಲ. ಆದರೆ ರಾಮಾನುಜ ರಸ್ತೆಯಲ್ಲಿ 30X40 ಅಳತೆಯ ಎರಡು ನಿವೇಶನಗಳಿದ್ದು, ಅದನ್ನು ನಿಮ್ಮ ಹೆಸರಿಗೆ ಬರೆದುಕೊಡುತ್ತಾರೆ ಎಂದು ತಿಳಿಸಿ, ನಿವೇಶನಕ್ಕೆ 38 ಲಕ್ಷ ರೂ.ಗಳನ್ನು ನಿಗದಿಪಡಿಸಿ, ಹಣವನ್ನು ಪಡೆದಿದ್ದಾನೆ. ಅದರಂತೆ 2021ರ ಜುಲೈ 28ರಂದು ಮೈಸೂರು ದಕ್ಷಿಣ ಉಪ ನೋಂದಣಾಧಿಕಾರಿಗಳ ಕಚೇರಿಯಲ್ಲಿ ಹೆಚ್.ಆರ್.ರಮೇಶ್ ಮತ್ತು ಅವರ ಪತ್ನಿ ಮಾಲತಿ ಅವರಿಗೆ ಪ್ರತ್ಯೇಕವಾಗಿ 30X40 ವಿಸ್ತೀರ್ಣದ ಎರಡು ನಿವೇಶನಗಳನ್ನು ನೋಂದಣಿ ಮಾಡಿಕೊಟ್ಟಿದ್ದು, ಅವರಿಗೆ ನಿವೇಶನಗಳ ಯಾವುದೇ ದಾಖಲೆಗಳನ್ನು ತೋರಿಸಿಲ್ಲ. ದಾಖಲಾತಿಗಳನ್ನು ನಂತರ ಕೊಡಿಸುತ್ತೇನೆ ಎಂದು ರಾಘವೇಂದ್ರ ಸೇಠ್ ನಂಬಿಸಿದ್ದ. ನಂತರ ನಕಲಿ ದಾಖಲೆ ಸೃಷ್ಟಿಸಿ ನಿವೇಶನ ನೋಂದಣಿ ಮಾಡಿರುವುದು ಗೊತ್ತಾಗಿದೆ. ಈ ಸಂಬಂಧ ಹೆಚ್.ಆರ್.ರಮೇಶ್ ನೀಡಿದ ದೂರನ್ನು ದಾಖಲಿಸಿಕೊಂಡಿರುವ ಕೆ.ಆರ್.ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ. ಈ ಪ್ರಕರಣದಲ್ಲಿ ಆರೋಪಿಗಳನ್ನು ಇನ್ನೂ ಬಂಧಿಸಿಲ್ಲ. ತನಿಖೆ ಮುಂದುವರೆದಿದೆ ಎಂದು ಕೆ.ಅರ್.ಠಾಣೆ ಇನ್ಸ್‌ಪೆಕ್ಟರ್ ಮಹದೇವಸ್ವಾಮಿ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ವಾಕ್ ಶ್ರವಣ ಸಂಸ್ಥೆ ವಸತಿ ಗೃಹದ ಬಾಗಿಲು ಮುರಿದು 4.36 ಲಕ್ಷ ಮೌಲ್ಯದ ಚಿನ್ನಾಭರಣ ಕಳವು

ಮೈಸೂರು, ಜೂ.3–ಮೈಸೂರಿನ ಅಖಿಲ ಭಾರತೀಯ ವಾಕ್ ಶ್ರವಣ ಸಂಸ್ಥೆಯ ವಸತಿ ಗೃಹದ ಬಾಗಿಲು ಮುರಿದು 4.36 ಲಕ್ಷ ರೂ. ಮೌಲ್ಯದ ಚಿನ್ನಾಭರಣ ದೋಚಿರುವ ಬಗ್ಗೆ ವರದಿಯಾಗಿದೆ.

ವಾಕ್ ಶ್ರವಣ ಸಂಸ್ಥೆಯ ವೈದ್ಯೆ ಡಾ. ಜಿ.ರಾಜೇಶ್ವರಿ(52) ಸಂಸ್ಥೆಯ ವಸತಿ ಗೃಹದಲ್ಲಿ ವಾಸವಿದ್ದು, ಮೇ 31ರಂದು ಮಧ್ಯಾಹ್ನ ಮನೆ ಬೀಗ ಹಾಕಿಕೊಂಡು ಬೆಂಗಳೂರಿಗೆ ಹೋಗಿದ್ದಾರೆ. ಜೂನ್ 2ರಂದು ಅವರು ವಾಪಸ್ಸಾದಾಗ ಬಾಗಿಲು ಮುರಿದು ಕಳ್ಳತನ ನಡೆದಿರುವುದು ಗೊತ್ತಾಗಿದೆ. ಖದೀಮರು ಮನೆಯಲ್ಲಿದ್ದ 25 ಗ್ರಾಂ ತೂಕದ ಚಿನ್ನದ ಸರ, 20 ಗ್ರಾಂನ 4 ಬಳೆಗಳು, 10 ಗ್ರಾಂ ತೂಕದ ಬ್ರೇಸ್‌ಲೆಟ್, 5 ಗ್ರಾಂನ ಪೇಡೆಂಟ್, 5 ಗ್ರಾಂನ ಹಿಯರ್ ರಿಂಗ್, 5 ಗ್ರಾಂನ ಹಿಯರ್ ಸ್ಟಡ್, 5 ಗ್ರಾಂನ ರೂಬಿ ವಿತ್ ಗ್ರೀನ್ ಸ್ಟೋನ್ ಹಿಯರ್ ರಿಂಗ್, 5 ಗ್ರಾಂನ ಉಂಗುರ ಹಾಗೂ 250 ಗ್ರಾಂ ತೂಕದ ಬೆಳ್ಳಿ ಪದಾರ್ಥಗಳು ಸೇರಿ 4.36 ಲಕ್ಷ ರೂ. ಮೌಲ್ಯದ ಆಭರಣಗಳನ್ನು ದೋಚಿದ್ದಾರೆ. ಇವರ ವಸತಿ ಗೃಹದಲ್ಲಿ ಮತ್ತಷ್ಟು ಆಭರಣಗಳಿತ್ತು. ಅದರ ಬಗ್ಗೆ ಅವರ ಸಹೋದರಿ ದೇವಿಕಾ ಅವರಿಗೆ ಗೊತ್ತಿದ್ದು, ಅವರು ಬೆಂಗಳೂರಿನಿಂದ ಬಂದ ನಂತರ ಕಳುವಾಗಿರುವ ಮತ್ತಷ್ಟು ಆಭರಣಗಳ ವಿವರಗಳನ್ನು ನೀಡುವುದಾಗಿ ಡಾ. ರಾಜೇಶ್ವರಿ ನೀಡಿದ ದೂರನ್ನು ದಾಖಲಿಸಿಕೊಂಡಿರುವ ಜಯಲಕ್ಷ್ಮೀಪುರಂ ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ಮಾನಸ ಗಂಗೋತ್ರಿ ಎಸ್‌ಬಿಐ ಶಾಖೆಯಲ್ಲಿ 500ರ 7 ಖೋಟಾ ನೋಟು ಪತ್ತೆ

ಮೈಸೂರು, ಜೂ.3–ಬ್ಯಾಂಕ್‌ಗೆ ಡೆಪಾಸಿಟ್ ಮಾಡಿದ ಹಣದಲ್ಲಿ 500 ರೂ. ಮುಖ ಬೆಲೆಯ 7 ಖೋಟಾ ನೋಟುಗಳು ಪತ್ತೆಯಾಗಿರುವ ಬಗ್ಗೆ ವರದಿಯಾಗಿದೆ. ಮಾನಸ ಗಂಗೋತ್ರಿ ಕ್ಯಾಂಪಸ್‌ನಲ್ಲಿರುವ ಭಾರತೀಯ ಸ್ಟೇಟ್ ಬ್ಯಾಂಕ್‌ನಲ್ಲಿ ಜೂನ್ 1ರಂದು ಮಧ್ಯಾಹ್ನ ಕೆ.ಮನುಕುಮಾರ್ ಎಂಬವರು ಎನ್.ಸುಬ್ರಮಣಿ ಎಂಬುವರ ಖಾತೆಗೆ 50 ಸಾವಿರ ರೂ. ಜಮೆ ಮಾಡಿದ್ದಾರೆ. ಈ ಹಣವನ್ನು ಕ್ಯಾಷಿಯರ್ ಪಿ.ಅರುಣ್ ಕುಮಾರ್ ಪರಿಶೀಲಿಸಿದಾಗ ಅದರಲ್ಲಿ 500 ರೂ. ಮುಖ ಬೆಲೆ 7 ಖೋಟಾ ನೋಟುಗಳು ಪತ್ತೆಯಾಗಿವೆ. ಈ ಸಂಬಂಧ ಹಣ ಜಮೆ ಮಾಡಲು ಬಂದಿದ್ದ ಮನು ಕುಮಾರ್ ಅವರಿಂದ ಆರ್‌ಬಿಐ ನಿಯಮಾನುಸಾರ ಅನೆಕ್ಸ್–2 ಫಾರಂನಲ್ಲಿ ವಿವರಗಳನ್ನು ನಮೂದಿಸಿ, ಸಹಿ ಪಡೆದು ಅವರ ಆಧಾರ್ ಮತ್ತು ಪಾನ್ ಕಾರ್ಡ್ ಜೆರಾಕ್ಸ್ ಪಡೆದು ಬ್ಯಾಂಕ್ ಸಿಬ್ಬಂದಿ ಕಳುಹಿಸಿದ್ದಾರೆ. ಈ ಸಂಬಂಧ ಬ್ಯಾಂಕ್ ಮ್ಯಾನೇಜರ್ ವಿ.ತೇಜಸ್ವಿನಿ ಅವರು ನೀಡಿದ ದೂರಿನ ಮೇರೆಗೆ ಜಯಲಕ್ಷ್ಮೀಪುರಂ ಠಾಣೆ ಪೊಲೀಸರು ಕೆ.ಮನು ಕುಮಾರ್ ಎಂಬಾತನ ವಿರುದ್ಧ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.



ತಮ್ಮ 50ನೇ ಹುಟ್ಟು ಹಬ್ಬ ಆಚರಿಸಿಕೊಂಡ ಉದ್ಯಮಿ ಎಸ್.ರಮೇಶ್ ಗೌಡ ಅವರನ್ನು ಸ್ವೀಟ್ ಮಹೇಶ್, ಬಿಜೆಪಿ ಮುಖಂಡರಾದ ಎಲ್.ಚೌಡಪ್ಪ, ಭೂಮಿ ನಾರಾಯಣ್ ಮತ್ತು ಸ್ನೇಹಿತರು ಆತ್ಮೀಯವಾಗಿ ಅಭಿನಂದಿಸಿ ಶುಭಾಶಯ ಕೋರಿದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

4.06.2022 ಶನಿವಾರ, ಮಳೆ ನಕ್ಷತ್ರ : ರೋಹಿಣಿ 25.05.2022 ರಿಂದ 7.06.2022
ಶ್ರೀ ಶುಭಕೃತುನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಜ್ಯೇಷ್ಠ ಮಾಸ, ಶುಕ್ಲ ಪಕ್ಷ
ತಿಥಿ: ಪಂಚಮಿ, ನಕ್ಷತ್ರ : ಪುಷ್ಯ, ರಾಹುಕಾಲ: ಬೆಳಗ್ಗೆ 9 ರಿಂದ 10.30ರವರೆಗೆ

■ **ಶ್ರೀ ಚಂದ್ರಮೌಳೀಶ್ವರ ಸ್ವಾಮಿ ದೇವಸ್ಥಾನಂ ಚಾರಿಟಬಲ್ ಟ್ರಸ್ಟ್** : 80ನೇ ಜಯಂತ್ಯುತ್ಸವ, ಬೆಳಗ್ಗೆ 9ಕ್ಕೆ ಲಲಿತ ಸಹಸ್ರನಾಮ ಹೋಮ, ಸ್ಥಳ: ಶ್ರೀ ಚಂದ್ರಮೌಳೀಶ್ವರಸ್ವಾಮಿ ದೇವಸ್ಥಾನ, ವಿ.ವಿ. ಮೊಹಲ್ಲಾ.

■ **ಅರಸು ಮಂಡಳಿ ಸಂಘ** : ಮಹಾಪ್ರಭು ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಜಯಂತ್ಯೋತ್ಸವ, ಮೆರವಣಿಗೆ ಉದ್ಘಾಟನೆ: ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್, ಭಾವಚಿತ್ರಕ್ಕೆ ಪುಷ್ಪಾರ್ಚನೆ : ಸಂಸದ ಪ್ರತಾಪ್ ಸಿಂಹ, ಅಧ್ಯಕ್ಷತೆ:ಶಾಸಕ ಎಸ್.ಎ. ರಾಮದಾಸ್, ಮುಖ್ಯ ಅತಿಥಿಗಳು : ಶಾಸಕರಾದ ಜಿ.ಟಿ. ದೇವೇಗೌಡ, ಎಲ್. ನಾಗೇಂದ್ರ, ತನ್ವೀರ್ ಸೇಠ್, ಎ.ಹೆಚ್. ವಿಶ್ವನಾಥ್, ಡಾ. ಡಿ. ತಿಮ್ಮಯ್ಯ, ಮರಿತಿಬ್ಬೇಗೌಡ, ಮಂಜೇಗೌಡ, ಸ್ಥಳ: ಸಂಘದ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಭವನ, ತ್ಯಾಗರಾಜ ರಸ್ತೆ, ಬೆಳಗ್ಗೆ 9ಕ್ಕೆ.

■ **ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾನಿಲಯ** : ಶಬ್ದ್, ಸಾಹಿತ್ಯಿಕ ಹಬ್ಬ, ಮುಖ್ಯ ಅತಿಥಿಗಳು : ಕಲಾವಿದ ವಿಲಾಸ್ ನಾಯಕ್, ಉಪಸ್ಥಿತರು : ಜೆಎಸ್‌ಎಸ್ ವಿಶ್ವವಿದ್ಯಾನಿಲಯ ಉಪಕುಲಪತಿ ಎ.ಎನ್. ಸಂತೋಷ್‌ಕುಮಾರ್, ಕುಲಸಚಿವ ಎಸ್.ಎ. ಧನರಾಜ್, ಪ್ರಾಂಶುಪಾಲ ಎಸ್.ಬಿ. ಕಿವಾಡೆ, ಪ್ರಾಧ್ಯಾಪಕ ಮಾರ್ಗದರ್ಶಕ ಡಾ. ವಾಣಿಶ್ರೀ ಅರುಣ್, ಸ್ಥಳ: ಐಎಸ್ ಸೆಮಿನಾರ್ ಸಭಾಂಗಣ, ಬೆಳಗ್ಗೆ 10ಕ್ಕೆ.

■ **ಶ್ರೀ ರಾಘವೇಂದ್ರ ಸ್ವಾಮಿಗಳವರ ಬೃಂದಾವನ ಸನ್ನಿಧಾನ** : ಶ್ರೀ ರಾಘವೇಂದ್ರ ಸ್ವಾಮಿಗಳವರ ಬೃಂದಾವನ ಪ್ರತಿಷ್ಠಾಪನಾ 'ವಜ್ರ ಮಹೋತ್ಸವ', ಶ್ರೀಮನ್ಮಧ್ವಾಚಾರ್ಯ ಮೂಲಮಹಾಸಂಸ್ಥಾನ ಶ್ರೀಮದುತ್ತರಾದಿ ಮಠಾಧೀಶರಾದ ಶ್ರೀ1008 ಸತ್ಯಾತ್ಮತೀರ್ಥ ಶ್ರೀಪಾದಂಗಳವರ ದಿವ್ಯ ಉಪಸ್ಥಿತಿ, ಶ್ರೀಗಳವರಿಗೆ ಪಾದಪೂಜೆ, ತಪ್ತಮುದ್ರಾಧಾರಣೆ, ಶ್ರೀಗಳಿಂದ ರಾಯರ ಬೃಂದಾವನಕ್ಕೆ ವಿಶೇಷ ಪಂಚಾಮೃತ ಅಭಿಷೇಕ, ಶ್ರೀ ರಾಮದೇವರ ಸಂಸ್ಥಾನ ಪೂಜೆ, ಮಹಾಮಂಗಳಾರತಿ, ತೀರ್ಥಪ್ರಸಾದ, ಫಲ ಮಂತ್ರಾಕ್ಷತೆ, ಸ್ಥಳ: ಸನ್ನಿಧಾನ, ಕೃಷ್ಣಮೂರ್ತಿಪುರಂ.

■ **ಮೈಸೂರು ವಿಶ್ವವಿದ್ಯಾನಿಲಯ ಇತಿಹಾಸ ಅಧ್ಯಯನ ವಿಭಾಗ, ಶ್ರೀ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಸಾಮಾಜಿಕ ಅಭಿವೃದ್ಧಿ ಅಧ್ಯಯನ ಕೇಂದ್ರ** : ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರ 138ನೇ ಜನ್ಮ ದಿನಾಚರಣೆ ಹಾಗೂ ನಾಲ್ವಡಿ ಕೃಷ್ಣರಾಜ ಒಡೆಯರ್ ಕುರಿತು ಉಪನ್ಯಾಸ ಕಾರ್ಯಕ್ರಮ, ಅಧ್ಯಕ್ಷತೆ : ಇತಿಹಾಸ ಅಧ್ಯಯನ ವಿಭಾಗದ ಮುಖ್ಯಸ್ಥ ಡಾ. ಕೆ. ಸದಾಶಿವ, ಡಾ. ಎಸ್. ನರೇಂದ್ರ ಪ್ರಸಾದ್ ಅವರಿಂದ ಉಪನ್ಯಾಸ, ಉಪಸ್ಥಿತರು : ಇತಿಹಾಸ ಅಧ್ಯಯನ ವಿಭಾಗದ ಪ್ರಾಧ್ಯಾಪಕ ಪ್ರೊ. ವೈ.ಹೆಚ್. ನಾಯಕವಾಡಿ, ಸ್ಥಳ: ನಾಲ್ವಡಿ ಕೃಷ್ಣರಾಜ ಒಡೆಯರ್ ಸಭಾಂಗಣ, ಮಾನಸಗಂಗೋತ್ರಿ, ಬೆಳಗ್ಗೆ 10.30ಕ್ಕೆ.

■ **ಶ್ರೀಗಂಧ ಕಲಾವೃಂದ** : ಎಸ್.ಪಿ. ಬಾಲಸುಬ್ರಹ್ಮಣ್ಯಂ ಮತ್ತು ಇಳಯರಾಜರವರ ಹುಟ್ಟುಹಬ್ಬದ ಪ್ರಯುಕ್ತ ಗಾನ ಗಂಧರ್ವರ ಗಾನ ಮಿಲನ, ಸ್ಥಳ: ನಾದಬ್ರಹ್ಮ ಸಂಗೀತ ಸಭಾ, ನಂಜು ಮಳಿಗೆ, ಸಂಜೆ 5ಕ್ಕೆ.

■ **ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ** : ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರ 80ನೇ ಜನ್ಮ ದಿನೋತ್ಸವ, ಲಕ್ಷ ಶ್ರೀಸೂಕ್ತ ಮಹಾಯಾಗ ಮತ್ತು ಕೋಟಿ ದತ್ತ ಹೋಮ, ಸ್ಥಳ: ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ.

■ **ಟೀಂ ಮೈಸೂರು** : ನಾಲ್ವಡಿ ಕೃಷ್ಣರಾಜ ಒಡೆಯರ್ ಜಯಂತಿ ಅಂಗವಾಗಿ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಸಾಮಾಜಿಕ ವೈಭವ ಸ್ಮರಣೆ ಕುರಿತು ಡಾ. ಸುಧಾಕರ್ ಹೊಸಹಳ್ಳಿ ಅವರಿಂದ ಉಪನ್ಯಾಸ ಕಾರ್ಯಕ್ರಮ, ಮುಖ್ಯ ಅತಿಥಿಗಳು : ಕಾವೇರಿ ಆಸ್ಪತ್ರೆ ಸಂಸ್ಥಾಪಕ ಡಾ. ಚಂದ್ರಶೇಖರ್, ಸ್ಥಳ: ರೋಟರಿ ಸಭಾಂಗಣ, ಸಂಜೆ 5.30ಕ್ಕೆ.

■ **ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್** : ನಾಲ್ವಡಿ ಕೃಷ್ಣರಾಜ ಒಡೆಯರ್ ಜಯಂತ್ಯೋತ್ಸವ, ಉದ್ಘಾಟನೆ : ಅರಸು ಮಂಡಳಿ ಸಂಘದ ಅಧ್ಯಕ್ಷ ಹೆಚ್.ಎಂ.ಟಿ. ಲಿಂಗರಾಜ ಅರಸು, ಅಧ್ಯಕ್ಷತೆ : ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಒಡೆಯರ್ ಕುರಿತು ಭಾಷಣ : ಪ್ರೊ. ಎ.ಆರ್. ಮಲ್ಲರಾಜೇ ಅರಸು, ಮುಖ್ಯ ಅತಿಥಿಗಳು : ಸಾಹಿತಿ ಡಾ. ಜಯಪ್ಪ ಹೊನ್ನಾಳಿ, ಸ್ಥಳ: ಜಿಲ್ಲಾ ಸಾಹಿತ್ಯ ಭವನ, ವಿಜಯನಗರ, ಸಂಜೆ 5ಕ್ಕೆ.

■ **ಶ್ರೀರಾಮಕೃಷ್ಣ ಆಶ್ರಮ** : ಸ್ವಾಮಿ ಮಹಿಪಾಲಾನಂದ ಅವರಿಂದ ಸ್ವಾಮಿ ವಿವೇಕಾನಂದರ ದಿವ್ಯಸ್ಮೃತಿ ಒಳನೋಟ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ, 6.20 ಗೀತಾರಾಧನ, 6.35 ಭವದ ಬಯಲಿಗರು– ವಚನಕಾರರ ಪರಿಚಯಾತ್ಮಕ ಕಾರ್ಯಕ್ರಮ, ಲೇಖನ ಮತ್ತು ಪ್ರಸ್ತುತಿ– ಮೈಸೂರು ಉಮೇಶ್, 6.40 ಹಾಡು ಹೇಳಿದ ಕಥೆ, ಪ್ರಸ್ತುತಿ– ಡಾ. ಮೈಸೂರು ಉಮೇಶ್, 9.00 ರಾಗಲಹರಿ–ಕರ್ನಾಟಕ ಶಾಸ್ತ್ರೀಯ ಸಂಗೀತದ ರಾಗಗಳ ಚಿತ್ತಾರ ವರ್ಷದ ಸಂಭ್ರಮ– ವಿಶೇಷ ಕಾರ್ಯಕ್ರಮ, 9.30 ಭಾರತದ ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ ದೈನಂದಿನ ವಿಶೇಷ ಕಾರ್ಯಕ್ರಮ ಸರಣಿ ಸ್ವಾತಂತ್ರ್ಯ ಚಳವಳಿಯ ಪಯಣ– ಆಕಾಶವಾಣಿಯೊಂದಿಗೆ, 10.00 ಎಂ.ರಾಘವೇಂದ್ರ – ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

ಮಧ್ಯಾಹ್ನ: 12.30ಎದೆ ತುಂಬಿದ ಹಾಡು–ಕವಿ ಮೆಚ್ಚಿದ ಕವನ, ಕವಿ ಮಾತು ಹಾಗೂ ಹಾಡುಗಳನ್ನೊಳಗೊಂಡ ಕಾರ್ಯಕ್ರಮ, 12.45 ಜನಪದಗೀತೆ, 1.20 ಅಂತಾರಾಷ್ಟ್ರೀಯ ಯೋಗ ದಿನದ ಸಂದರ್ಭದಲ್ಲಿ ವಿಶೇಷ ಕಾರ್ಯಕ್ರಮ, 3.35 ಮಕ್ಕಳ ಮಂಟಪ, 4.30 ನೆನಪಿನಂಗಳ, ಪ್ರಸ್ತುತಿ– ಎಸ್. ಲಕ್ಷ್ಮೀನಾರಾಯಣ, 6.50ಕೃಷಿರಂಗ–ಕಿಸಾನ್‌ವಾಣಿ, ತೋರಣ ಹೂರಣ–ಸಾಪ್ತಾಹಿಕ ಸರಣಿ ಕಾರ್ಯಕ್ರಮ, 9.00ಲಾಕ್‌ಡೌನ್, ಕಥಾನಾಟಕ. ಲಾಕ್‌ಡೌನ್ ಕಥೆಗಳನ್ನಾಧರಿಸಿದ ಸರಣಿ– "ಲಾಕ್‌ಡೌನ್‌ನಲ್ಲಿ ಲಾಕ್ ಇನ್", ನಿರ್ಮಾಣ– ಪ್ರಭುಸ್ವಾಮಿ ಮಳೀಮಠ್, 9.15 ಅಂತರ್ಜಲ ಪರಪರೆಯ ಜ್ಞಾನ–ವಿಜ್ಞಾನಿ ಎಸ್.ಎಸ್. ಹೆಗ್ಡೆ ಅವರೊಂದಿಗೆ ಸಂದರ್ಶನ, 9.30 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ– ಅಜಯ್ ಪಗ್ರೆ – ಬಾನ್ಸುರಿವಾದನ, 11.00 ಸವಿನೆನಪು

ಪ್ರಧಾನಿ ಮೋದಿ ಯೋಜನೆಗಳಿಂದ ದೇಶ ಅಭಿವೃದ್ಧಿ

ಬಿಜೆಪಿ ಅಭ್ಯರ್ಥಿ ಪರ ಮತಯಾಚಿಸಿದ ಸಚಿವ ವಿ.ಸೋಮಣ್ಣ ಬಣ್ಣನೆ

ಚಾಮರಾಜನಗರ, ಜೂ.3(ಎಸ್‌ಎಸ್)– ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ 8 ವರ್ಷಗಳನ್ನು ಪೂರೈಸಿದ್ದು, ಪ್ರಧಾನಿಗಳು ಜಾರಿಗೊಳಿಸಿರುವ ಅನೇಕ ಯೋಜನೆಗಳಿಂದ ದೇಶ ಅಭಿವೃದ್ಧಿಯತ್ತ ಸಾಗುತ್ತಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ವಿ.ಸೋಮಣ್ಣ ಬಣ್ಣಿಸಿದರು.

ದಕ್ಷಿಣ ಪದವೀಧರ ಕ್ಷೇತ್ರ ಚುನಾವಣಾ ಬಿಜೆಪಿ ಅಭ್ಯರ್ಥಿ ಮೈ.ವಿ.ರವಿಶಂಕರ್ ಪರ ಮತ ಪ್ರಚಾರ ಹಿನ್ನೆಲೆ ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಶುಕ್ರವಾರ ಕರೆದಿದ್ದ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು.

2014ರಲ್ಲಿ ಅಧಿಕಾರಕ್ಕೆ ಬಂದ ಪ್ರಧಾನಿ ಮೋದಿ ಉತ್ತಮ ಆಡಳಿತದೊಂದಿಗೆ ದೇಶದ 135 ಕೋಟಿ ಜನರ ಸಾಮರ್ಥ್ಯ ಹಾಗೂ ಸಂಘಟನೆಯೊಡನೆ ದೇಶವನ್ನು ಮುನ್ನಡೆಸುತ್ತಿದ್ದಾರೆ. ಪವಿತ್ರ ಗಂಗಾ ನದಿ ಸ್ವಚ್ಛಗೊಳಿಸುವ ನಮಾಮಿ ಗಂಗೆ ಯೋಜನೆಯೊಂದಿಗೆ ಕಾರ್ಯ ಪ್ರವೃತ್ತವಾದ ಕೇಂದ್ರ ಸರ್ಕಾರ ನಂತರದಲ್ಲಿ ಜನ್‌ಧನ್ ಯೋಜನೆಯಡಿ 44 ಕೋಟಿಗೂ ಹೆಚ್ಚು ಜನರಿಗೆ ಖಾತೆಗಳನ್ನು ಶೂನ್ಯ ವೆಚ್ಚದಲ್ಲಿ ತೆರೆದು ಜನತೆ ಅನುಕೂಲ ಕಲ್ಪಿಸಲಾಗಿದೆ. ಈ ಪೈಕಿ 24 ಕೋಟಿ ಖಾತೆಗಳನ್ನು ಮಹಿಳೆಯರೇ ಹೊಂದಿರುವುದು ವಿಶೇಷ. ಅಲ್ಲದೆ ಸ್ವಚ್ಛ ಭಾರತ್ ಅಭಿಯಾನ, ಉಜ್ವಲ ಯೋಜನೆ, ಕಿಸಾನ್ ಸಮ್ಮಾನ್ ನಿಧಿ, ಪ್ರಧಾನಮಂತ್ರಿ ಆವಾಸ್, ಮುದ್ರಾ, ಫಸಲ್ ಬಿಮಾ ಯೋಜನೆ, ತ್ರಿವಳಿ ತಲಾಖ್ ನಿಷೇಧ, ಜಲ ಜೀವನ್ ಮಿಷನ್, ಕೃಷಿ ಬಜೆಟ್, ಕಿಸಾನ್ ರೈಲು ಯೋಜನೆ ಸೇರಿದಂತೆ ಅನೇಕ ಜನಪರ ಯೋಜನೆಗಳನ್ನು ಜಾರಿಗೆ ತರಲಾಗಿದೆ ಎಂದರು.

ಮಹಿಳೆ ಹಾಗೂ ಮಕ್ಕಳ ಅಭಿವೃದ್ಧಿಗಾಗಿ 17,669 ಕೋಟಿ ರೂ.ಮೀಸಲಿಟ್ಟು ಕಾಳಜಿ ವಹಿಸಲಾಗಿದೆ. ಕೌಶಲ್ಯಾಭಿವೃದ್ಧಿ ಯೋಜನೆಯಡಿ 1,197 ಕೋಟಿಗಳನ್ನು ಮೀಸಲಿಟ್ಟು ರಾಷ್ಟ್ರೀಯ ಗ್ರಾಮೀಣ ಜೀವನಾಧಾರ ಯೋಜನೆ, ರಾಷ್ಟ್ರೀಯ ಸ್ವ-ಉದ್ಯೋಗ ಯೋಜನೆ ಹಾಗೂ ದೀನದಯಾಳ್ ಅಂತ್ಯೋದಯ ಯೋಜನೆ ಕಾರ್ಯಗತಗೊಳಿಸಲಾಗಿದೆ. ಅಲ್ಲದೆ ಕಳೆದ 8 ವರ್ಷಗಳಲ್ಲಿ 1,29,777 ಕೋಟಿ ರೂ.ಗಳನ್ನು ರಾಜ್ಯಕ್ಕೆ ಹಂಚಿಕೆ ಮಾಡಿದೆ. ಮಹಾತ್ಮಗಾಂಧಿ ನರೇಗಾ ಯೋಜನೆಗೆ 27,418 ಕೋಟಿ ರೂ., ಕೃಷಿ ಕ್ಷೇತ್ರಕ್ಕೆ 19,734 ಕೋಟಿ ರೂ., ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್ ಯೋಜನೆಯಡಿ 2018–19ರಿಂದ 2021–22ರ ವರೆಗೆ 8,704 ಕೋಟಿ ನೀಡಲಾಗಿದ್ದು, 4.17 ಕೋಟಿ ಫಲಾನುಭವಿಗಳಿಗೆ ಪ್ರಯೋಜನ ದೊರಕಿದೆ ಎಂದು ವಿವರಿಸಿದರು.

ಕಾಶಿಯಲ್ಲಿ ಸುಸಜ್ಜಿತ ಕಾರಿಡಾರ್ ನಿರ್ಮಾಣ, ಪುಣ್ಯಸ್ಥಳಗಳಲ್ಲಿ ಪ್ರಸಾದ ಯೋಜನೆ, ಚಾರ್‌ಧಾಮಗಳ ಅಭಿವೃದ್ಧಿ, ಡಾ.ಬಿ.ಆರ್.ಅಂಬೇಡ್ಕರ್ ಅವರಿಗೆ ಸಂಬಂಧಿಸಿದ ಸ್ಥಳಗಳ ಟೂರಿಸಂ ಸರ್ಕ್ಯೂಟ್‌ಗೆ ಚಾಲನೆ ಹಾಗೂ ರಾಮ ಮಂದಿರ ನಿರ್ಮಾಣ ಮಾಡಲಾಗುತ್ತಿದೆ. ಈ ಎಲ್ಲಾ ಅಭಿವೃದ್ಧಿ ಕಾರ್ಯಗಳನ್ನು ಮನಗಂಡು ಈ ಬಾರಿ ದಕ್ಷಿಣ ಪದವೀಧರ ಕ್ಷೇತ್ರದ ಚುನಾವಣೆಗೆ ಬಿಜೆಪಿ ಅಭ್ಯರ್ಥಿ ಮೈ.ವಿ.ರವಿಶಂಕರ್ ಅವರಿಗೆ ಮೊದಲ ಪ್ರಾಶಸ್ತ್ಯದ ಮತ ನೀಡಿ, ಗೆಲ್ಲಿಸಬೇಕು. ಆ ಮೂಲಕ ಜಿಲ್ಲೆಯ ಪದವೀಧರ ಮತದಾರರು ಬಿಜೆಪಿಯನ್ನು ಬೆಂಬಲಿಸಬೇಕು ಎಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಶಾಸಕ ಎನ್. ಮಹೇಶ್, ಬಿಜೆಪಿ ರಾಜ್ಯ ವಕ್ತಾರ ಮಹೇಶ್, ಬಿಜೆಪಿ ಜಿಲ್ಲಾಧ್ಯಕ್ಷ ಆರ್. ಸುಂದರ್, ಜಿಲ್ಲಾ ವಕ್ತಾರ ಅಯ್ಯನಪುರ ಶಿವಕುಮಾರ್, ಮುಖಂಡ ಫಣೀಶ್ ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಗುಂಡ್ಲುಪೇಟೆ ವಿವಿಧೆಡೆ ಸಚಿವರಿಂದ ಮತಪ್ರಚಾರ



ಗುಂಡ್ಲುಪೇಟೆಯ ಕೆ.ಎಸ್.ನಾಗರತ್ನಮ್ಮ ಪ್ರೌಢಶಾಲೆಯಲ್ಲಿ ಸಚಿವ ಸೋಮಣ್ಣ ಬಿಜೆಪಿ ಅಭ್ಯರ್ಥಿ ಪರ ಮತಯಾಚಿಸಿದರು.

ಗುಂಡ್ಲುಪೇಟೆ, ಜೂ.3(ಸೋಮ್.ಜಿ)– ಪಟ್ಟಣ ಸೇರಿದಂತೆ ತಾಲೂಕಿನ ವಿವಿಧೆಡೆ ಸಂಚರಿಸಿ, ದಕ್ಷಿಣ ಪದವೀಧರ ಕ್ಷೇತ್ರ ಚುನಾವಣಾ ಬಿಜೆಪಿ ಅಭ್ಯರ್ಥಿ ಮೈ.ವಿ. ರವಿಶಂಕರ್ ಪರ ಮತ ಪ್ರಚಾರ ನಡೆಸಿದರು.

ಪಟ್ಟಣದ ಜೆಎಸ್‌ಎಸ್ ಕಾಲೇಜು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ದೊಡ್ಡಹುಂಡಿ ಭೋಗಪ್ಪ ಸರ್ಕಾರಿ ಪದವಿಪೂರ್ವ ಕಾಲೇಜು, ಶ್ರೀ ಮದ್ದಾನೇಶ್ವರ ಪ್ರೌಢಶಾಲೆ, ಕೆ.ಎಸ್.ನಾಗರತ್ನಮ್ಮ ಪ್ರೌಢಶಾಲೆ, ತಾಲೂಕಿನ ಹಂಗಳ ಗ್ರಾಮದ ಸರ್ಕಾರಿ ಪ್ರೌಢಶಾಲೆ ಹಾಗೂ ಪದವಿಪೂರ್ವ ಕಾಲೇಜು ಸೇರಿದಂತೆ ವಿವಿಧ ಶಿಕ್ಷಣ ಸಂಸ್ಥೆಗಳಿಗೆ ಭೇಟಿ ನೀಡಿ, ಮತಯಾಚಿಸಿದರು.

ಈ ಸಂದರ್ಭದಲ್ಲಿ ಶಾಸಕ ಸಿ.ಎಸ್. ನಿರಂಜನಕುಮಾರ್, ಬಿಜೆಪಿ ಮಂಡಲಾಧ್ಯಕ್ಷ ಜಗದೀಶ್, ವೀರಶೈವ ಮಹಾಸಭಾ ಮಾಜಿ ಜಿಲ್ಲಾಧ್ಯಕ್ಷ ಕೊಡಸೋಗೆ ಶಿವಬಸಪ್ಪ, ಪಿಕಾರ್ಡ್ ಬ್ಯಾಂಕ್ ನಿರ್ದೇಶಕ ಎಸ್.ಎಂ.ಮಲ್ಲಿಕಾರ್ಜುನ ಸ್ವಾಮಿ, ಮುಖಂಡರಾದ ಎಂ.ಪಿ. ಸುನಿಲ್, ಎಸ್.ಪಿ.ಸುರೇಶ್, ಮಲ್ಲೇಶ್ ಸೇರಿದಂತೆ ಹಲವರಿದ್ದರು.

ಅವಿಶ್ವಾಸದಿಂದ ಅಧ್ಯಕ್ಷ ಸ್ಥಾನ ಕಳೆದುಕೊಂಡ ಗೌಡಹಳ್ಳಿ ಗ್ರಾಪಂ ಅಧ್ಯಕ್ಷೆ



ಅವಿಶ್ವಾಸದ ಪರ ಕೈ ಎತ್ತುವ ಮೂಲಕ ಮತ ಚಲಾಯಿಸಿದ ಗ್ರಾಪಂ ಸದಸ್ಯರು.

ಯಳಂದೂರು, ಜೂ.3(ವಿ.ನಾಗರಾಜು)– ತಾಲೂಕಿನ ಗೌಡಹಳ್ಳಿ ಗ್ರಾಮ ಪಂಚಾಯಿತಿ ಅಧ್ಯಕ್ಷೆ ಅಶ್ವಿನಿ ವಿರುದ್ಧ ಅವಿಶ್ವಾಸ ನಿರ್ಣಯವನ್ನು ತಂದಿದ್ದ ಸದಸ್ಯರಿಗೆ ಗೆಲುವಾಗಿದೆ. ಉಪವಿಭಾಗಾಧಿಕಾರಿ ಮಂಜುನಾಥ ನೇತೃತ್ವದಲ್ಲಿ ಬುಧವಾರ ಗ್ರಾಪಂ ಕಚೇರಿಯಲ್ಲಿ ಅವಿಶ್ವಾಸ ಮತಯಾಚನೆ ನಡೆಯಿತು.

ಈ ಪಂಚಾಯಿತಿ ತಾಲೂಕಿನ ದೊಡ್ಡ ಪಂಚಾಯಿತಿಯಲ್ಲಿ ಒಂದಾಗಿದೆ ಒಟ್ಟು 19 ಸದಸ್ಯರಿರುವ ಇಲ್ಲಿ 13 ಮಂದಿ ಈ ಪ್ರಕ್ರಿಯೆಯಲ್ಲಿ ಭಾಗವಹಿಸಿದ್ದರು. ಇನ್ನುಳಿದ 6 ಮಂದಿ ಗೈರಾಗಿದ್ದರು. ಈ ಸಂಖ್ಯೆ 13 ಮಂದಿಯೂ ಅಧ್ಯಕ್ಷರ ಅವಿಶ್ವಾಸ ಪರವಾಗಿ ಕೈ ಎತ್ತಿ ಬೆಂಬಲ ಸೂಚಿಸಿದ್ದರಿಂದ ಇದಕ್ಕೆ ಗೆಲುವಾಗಿದ್ದು ಅಧ್ಯಕ್ಷೆ ಅಶ್ವಿನಿ ಅಧ್ಯಕ್ಷೆ ಪದವಿಯಿಂದ ಕೆಳಕ್ಕಿಳಿಯಲಿದ್ದಾರೆ.

ಈ ಹಿಂದೆ ತಮ್ಮನ್ನು ಬೆಂಬಲಿಸಿದ್ದ ಸದಸ್ಯರೇ ಅವಿಶ್ವಾಸಕ್ಕೆ ಸಹಿ ಹಾಕಿದ್ದಾರೆ, ಇಲ್ಲಿ ಬೇಕೆಂತಲೇ ದಲಿತ ಮಹಿಳೆಯ ತೇಜೋವಧೆ ಮಾಡಲಾಗುತ್ತಿದೆ ಎಂದು ಆರೋಪಿಸಿ ಗ್ರಾಪಂ ಅಧ್ಯಕ್ಷೆ ಅಶ್ವಿನಿ ತಮ್ಮ ಅತ್ತೆ ಮಹದೇವಮ್ಮನವರ ಜೊತೆಗೂಡಿ ಎ.ಬೇವರಹಳ್ಳಿ ಗ್ರಾಮದ ಸದಸ್ಯೆ ಮಮತಾ ನಾಗೇಂದ್ರ ಅವರ ಮನೆ ಮುಂದೆ ಧರಣಿ ನಡೆಸಿದ್ದರು. ಜೆಸಿಬಿ ಬಳಸಿಕೊಂಡು ಮಾಡಲಾದ ನರೇಗಾ ಕಾಮಗಾರಿಗಳು ಅಕ್ರಮವಾಗಿವೆ, ಇದಕ್ಕೆ ನಾನು ಸಹಿ ಹಾಕುವುದಿಲ್ಲ ಎಂದು ಹೇಳಿದ್ದೆ, ಇದನ್ನೇ ನೆಪವಾಗಿಟ್ಟುಕೊಂಡು ನನ್ನ ವಿರುದ್ಧ ಅವಿಶ್ವಾಸವನ್ನು ತಂದಿದ್ದಾರೆ ಎಂಬುದು ಇವರ ಆರೋಪವಾಗಿತ್ತು.

ಆದರೆ ಅವಿಶ್ವಾಸದ ನಿರ್ಣಯದ ದಿನಾಂಕದಂದು ಅಧ್ಯಕ್ಷೆ ಅಶ್ವಿನಿ ಪರ ಸದಸ್ಯರಾದ ಚಂದ್ರಶೇಖರ್, ಎಂ.ಚನ್ನಸ್ವಾಮಿ, ಉಮಾ, ಗಾಯತ್ರಿ, ಪ್ರಭುಸ್ವಾಮಿ ಸೇರಿದಂತೆ 6 ಮಂದಿ ಸದಸ್ಯರು ಸಭೆಗೆ ಗೈರಾಗಿದ್ದರು. ಸಭೆಗೆ ಕೋರಂ ಇದ್ದ ಕಾರಣ ಉಪವಿಭಾಗಾಧಿಕಾರಿ ಅವಿಶ್ವಾಸ ನಿರ್ಣಯವನ್ನು ಮಂಡಿಸಿದರು. ಗ್ರಾಪಂ ಉಪಾಧ್ಯಕ್ಷ ರಫಿ, ಸದಸ್ಯರಾದ ಎಂ.ಶಾಂತ ಮಲ್ಲು, ಸುಂದರ್, ಶಿವನಂಜಮ್ಮ, ಎಸ್.ಪುಷ್ಪಾ, ಬಿ.ನಂದಿನಿ, ವಸಂತ, ನೀಲವೇಣಿ, ಶಿವಣ್ಣನಾಯಕ್, ಆರ್.ನಾಗರಾಜು, ಮಮತಾ, ರಾಜೇಶ್ವರಿ, ಎನ್.ಉಮೇಶ್ ಪಿಡಿಒ ನಾಗವೇಣಿ, ಕಾರ್ಯದರ್ಶಿ ನಾಗೇಶ್ ಸೇರಿದಂತೆ ಅನೇಕರು ಹಾಜರಿದ್ದರು.

ಚಾಮುಲ್ ಚುನಾವಣೆ; 8 ಅಭ್ಯರ್ಥಿಗಳಿಂದ ಉಮೇದುವಾರಿಕೆ



ಕೋಡಿಮೋಳೆ ರಾಜಶೇಖರ್ ನಾಮಪತ್ರ ಸಲ್ಲಿಸಿದರು.

ಚಾಮರಾಜನಗರ, ಜೂ.3(ಎಸ್‌ಎಸ್)–ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ(ಚಾಮುಲ್)ದ ಆಡಳಿತ ಮಂಡಳಿಯ ನಿರ್ದೇಶಕರ ಸ್ಥಾನಕ್ಕೆ ಆಯ್ಕೆ ಬಯಸಿ 8 ಅಭ್ಯರ್ಥಿಗಳು ಶುಕ್ರವಾರ ನಾಮಪತ್ರ ಸಲ್ಲಿಸಿದರು. ತಾಲೂಕಿನ ಕುದೇರು ಗ್ರಾಮದ ಬಳಿ ಇರುವ ಚಾಮುಲ್ ಆಡಳಿತ ಮಂಡಳಿಯ ಕಚೇರಿಯಲ್ಲಿ ಚುನಾವಣಾಧಿಕಾರಿಗಳಿಗೆ ಉಮೇದುವಾರಿಕೆ ಸಲ್ಲಿಸಿದರು. ಗುಂಡ್ಲುಪೇಟೆ ಕ್ಷೇತ್ರದಿಂದ ಚಾಮುಲ್ ಹಾಲಿ ಅಧ್ಯಕ್ಷ ಹೆಚ್.ಎಸ್. ನಂಜುಂಡಪ್ರಸಾದ್ ಹಾಗೂ ಹೆಚ್.ಎನ್.ನಟೇಶ್ ಕಾಂಗ್ರೆಸ್ ಬೆಂಬಲಿತರಾಗಿ ನಾಮಪತ್ರ ಸಲ್ಲಿಸಿದರು. ಚಾಮರಾಜನಗರ ತಾಲೂಕು ಕ್ಷೇತ್ರದಿಂದ ಆಲೂರು ಸಿ.ರಾಜಶೇಖರ ಹಾಗೂ ಬಿ.ಕೆ.ರವಿ ಕುಮಾರ್ ಕಾಂಗ್ರೆಸ್ ಬೆಂಬಲಿತರಾಗಿ ಕಣಕ್ಕೆ ಇಳಿದಿದ್ದು, ತಮ್ಮ ಉಮೇದುವಾರಿಕೆ ಸಲ್ಲಿಸಿದರು. ಕೊಳ್ಳೇಗಾಲ ಕ್ಷೇತ್ರದಿಂದ ಎಂ.ನಂಜುಂಡಸ್ವಾಮಿ, ಯಳಂದೂರು ಕ್ಷೇತ್ರದಿಂದ ಜಿಪಂ ಮಾಜಿ ಉಪಾಧ್ಯಕ್ಷ ಜೆ.ಯೋಗೇಶ್ ನಾಮಪತ್ರ ಸಲ್ಲಿಸಿದ್ದು, ಇವರು ಸಹ ಕಾಂಗ್ರೆಸ್ ಬೆಂಬಲಿತರಾಗಿದ್ದಾರೆ. ಚಾಮುರಾಜನಗರದ ಕ್ಷೇತ್ರಕ್ಕೆ ಮೈಮುಲ್ ಮಾಜಿ ನಿರ್ದೇಶಕ ಕೋಡಿಮೋಳೆ ರಾಜಶೇಖರ್, ಚಾಮುಲ್ ನಿರ್ದೇಶಕ ಮಲೆಯೂರು ರವಿಕುಮಾರ್ ಸಹ ತಮ್ಮ ಉಮೇದುವಾರಿಕೆ ಸಲ್ಲಿಸಿದರು.

ಆರ್‌ಎಸ್‌ಎಸ್ ಕುರಿತ ಸಿದ್ದರಾಮಯ್ಯರ ಟೀಕೆಗೆ ಮಲ್ಲೇಶ್ ಖಂಡನೆ



ಸುದ್ದಿಗೋಷ್ಠಿಯಲ್ಲಿ ಬಿಜೆಪಿ ರೈತ ಮುಖಂಡ ಮಲ್ಲೇಶ್ ಮಾತನಾಡಿದರು.

ಚಾಮರಾಜನಗರ, ಜೂ.3(ಎಸ್‌ಎಸ್)– ಮಾಜಿ ಸಿಎಂ ಸಿದ್ದರಾಮಯ್ಯ ಅವರು ಕ್ರಾಂತಿಕಾರಿ ಚಿಂತನೆಯುಳ್ಳವರೇ ಅಗಿದ್ದಲ್ಲಿ, ಆರ್‌ಎಸ್‌ಎಸ್ ಅನ್ನು ಟೀಕಿಸುವ ಬದಲು ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಬಹುಮತ ಪಡೆದುಕೊಂಡಲ್ಲಿ ಮಲ್ಲಿಕಾರ್ಜುನ ಖರ್ಗೆ ಅಥವಾ ಡಾ.ಪರಮೇಶ್ವರ್ ಅವರನ್ನು ಮುಖ್ಯಮಂತ್ರಿ ಮಾಡುವುದಾಗಿ ಘೋಷಿಸಲಿ ಎಂದು ಬಿಜೆಪಿ ರೈತ ಮುಖಂಡ ಮಲ್ಲೇಶ್ ಹೇಳಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಆರ್‌ಎಸ್‌ಎಸ್‌ನವರು ಆರ್ಯರು, ಹೊರಗಿನಿಂದ ಬಂದವರು ಎಂದು ಸಿದ್ದರಾಮಯ್ಯ ಹೇಳಿರುವುದು ವಿಪರ್ಯಾಸ. ಸಿದ್ದರಾಮಯ್ಯ ಅವರು ಪಕ್ಷದಲ್ಲಿರುವ ಕೆನೆಪದರದ ನಾಯಕರನ್ನು ಮೂಲೆಗುಂಪು ಮಾಡಿದ್ದಾರೆ. ರಾಜ್ಯಸಭಾ ಸದಸ್ಯ ಮಲ್ಲಿಕಾರ್ಜುನಖರ್ಗೆ ಅವರನ್ನು ಕೇಂದ್ರಕ್ಕೆ ಕಳುಹಿಸಿದರು. ಮಾಜಿ ಉಪ ಮುಖ್ಯಮಂತ್ರಿ ಡಾ.ಜಿ.ಪರಮೇಶ್ವರ್ ಅವರನ್ನು ಸೋಲಿಸಿದ್ದು. ಸಂಸದ ಶ್ರೀನಿವಾಸ ಪ್ರಸಾದ್ ಅವರನ್ನು ಪಕ್ಷದಿಂದ ಹೊರ ಕಳುಹಿಸಿದರು. ಹೀಗಿರುವಾಗ ಇವರು ಆರ್ಯರು, ದ್ರಾವಿಡರ ಬಗ್ಗೆ ಹೇಗೆ ಮಾತನಾಡುತ್ತಾರೆ? ಎಂದು ಪ್ರಶ್ನಿಸಿದರಲ್ಲದೆ, ಭ್ರಷ್ಟಾಚಾರದ ವಿರುದ್ಧ ಮಾತನಾಡುವ ಸಿದ್ದರಾಮಯ್ಯ ಅವರು ಸಿಎಂ ಆಗಿದ್ದಾಗ ಲೋಕಾಯುಕ್ತ ಮುಚ್ಚಿಸಿದರು ದೂರಿದರು. ಬಿಜೆಪಿ ಮುಖಂಡರಾದ ರಾಮಸಮುದ್ರ ಬಸವರಾಜು, ಗೌಡ್ರು ಸುರೇಶ್, ನಲ್ಲೂರು ಪರಮೇಶ್, ಬಸವನಪುರ ರಾಜಶೇಖರ್, ಸತೀಶ್ ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಆಲೂರಿನಲ್ಲಿ ಡೆಂಗ್ಯೂ ಕುರಿತು ಬೀದಿನಾಟಕ

ಆಲೂರು, ಜೂ.3–ಚಾಮರಾಜನಗರ ಸ್ಕೂಲ್ ಜೆಎಸ್‌ಎಸ್ ನರ್ಸಿಂಗ್ ವತಿಯಿಂದ ಚಾಮರಾಜನಗರ ತಾಲೂಕಿನ ಆಲೂರು ಗ್ರಾಮದಲ್ಲಿ ಡೆಂಗ್ಯೂ ಜ್ವರ ಕುರಿತು ಬೀದಿ ನಾಟಕ ಪ್ರದರ್ಶಿಸಲಾಯಿತು. ಗ್ರಾಮದ ಶಾಲಾವರಣ, ಪ್ರಮುಖ ವೃತ್ತಗಳಲ್ಲಿ ಡೆಂಗ್ಯೂ ಜ್ವರ ಕುರಿತು ಬೀದಿ ನಾಟಕ ಪ್ರದರ್ಶಿಸಿದ ಕಾಲೇಜು ವಿದ್ಯಾರ್ಥಿಗಳು ಡೆಂಗ್ಯೂ ಹರಡುವಿಕೆ ಹಾಗೂ ಅದನ್ನು ತಡೆಗಟ್ಟುವ ಬಗ್ಗೆ ಅರಿವು ಮೂಡಿಸಿದರು. ಈ ಸಂದರ್ಭದಲ್ಲಿ ಜೆಎಸ್‌ಎಸ್ ನರ್ಸಿಂಗ್ ಕಾಲೇಜು ಸಿಬ್ಬಂದಿ ಶ್ರೀಮತಿ ಮಧು ಮಹದೇವಸ್ವಾಮಿ, ವಿದ್ಯಾರ್ಥಿಗಳು ಹಾಜರಿದ್ದರು.

ಡಿಸಿಎಂ ತರಬೇತಿಗೆ ಅರ್ಜಿ ಆಹ್ವಾನ

ಚಾಮರಾಜನಗರ, ಜೂ.3– ಜಿಲ್ಲಾ ಸಹಕಾರ ಒಕ್ಕೂಟದ ವತಿಯಿಂದ ಮೈಸೂರಿನಲ್ಲಿ 6 ತಿಂಗಳ ಅವಧಿಯ ಡಿಪ್ಲೊಮಾ ಇನ್–ಕೋ–ಆಪರೇಟಿವ್ ಮ್ಯಾನೇಜ್‌ಮೆಂಟ್ (ಡಿಸಿಎಂ) ತರಬೇತಿಗೆ ಅರ್ಜಿ ಆಹ್ವಾನಿಸಲಾಗಿದೆ. ಎಸ್‌ಎಸ್‌ಎಲ್‌ಸಿ ಉತ್ತೀರ್ಣರಾಗಿರುವ ಅಭ್ಯರ್ಥಿಗಳು ಅರ್ಜಿಯನ್ನು ನಗರದ ಜಿಲ್ಲಾಡಳಿತ ಭವನದ 3ನೇ ಮಹಡಿಯ ಕೊಠಡಿ ಸಂಖ್ಯೆ 336 ರಲ್ಲಿರುವ ಜಿಲ್ಲಾ ಸಹಕಾರ ಒಕ್ಕೂಟ ಕಚೇರಿಯಲ್ಲಿ ಜೂ.25 ರೊಳಗೆ ಪಡೆದು ಸಲ್ಲಿಸಬಹುದು. ಮಾಹಿತಿಗೆ ಮೊ.ನಂ.9141873304 ಸಂಪರ್ಕಿಸಿ.

ಪಿಎಲ್‌ಡಿ ಬ್ಯಾಂಕ್ ಮಾಜಿ ಉಪಾಧ್ಯಕ್ಷ ಮುದ್ದಯ್ಯ ನಿಧನ

ಚಾಮರಾಜನಗರ, ಜೂ.3–ತಾಲೂಕಿನ ಸಿದ್ದಯ್ಯನಪುರ ಗ್ರಾಮದ ನಿವಾಸಿ, ಪಿಎಲ್‌ಡಿ ಬ್ಯಾಂಕ್ ಮಾಜಿ ಉಪಾಧ್ಯಕ್ಷ ಮುದ್ದಯ್ಯ(80) ಶುಕ್ರವಾರ ಮಧ್ಯಾಹ್ನ ನಿಧನರಾದರು.



ಮೃತರು ಅನಾರೋಗ್ಯದಿಂದ ಚಾಮರಾಜನಗರ ಯಡಪುರ ಸರ್ಕಾರಿ ಆಸ್ಪತ್ರೆಯಲ್ಲಿ ದಾಖಲಾಗಿ ಚಿಕಿತ್ಸೆ ಪಡೆಯುತ್ತಿದ್ದರು. ಚಿಕಿತ್ಸೆ ಫಲಕಾರಿಯಾಗದೆ ಕೊನೆಯುಸಿರೆಳೆದಿದ್ದಾರೆ. ಮೃತರು ಶಾಸಕ ಸಿ.ಪುಟ್ಟರಂಗಶೆಟ್ಟಿ ಅವರ ಮಾಜಿ ಆಪ್ತ ಸಹಾಯಕ ಹಾಗೂ ಕಂದಾಯ ಇಲಾಖೆ ಸಿಬ್ಬಂದಿ ರವೀಂದ್ರ ಸೇರಿದಂತೆ ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧು–ಬಳಗ ಅಗಲಿದ್ದಾರೆ. ಶನಿವಾರ ಮಧ್ಯಾಹ್ನ ಮೃತರ ಸ್ವಗ್ರಾಮವಾದ ಸಿದ್ದಯ್ಯನಪುರದಲ್ಲಿರುವ ಜಮೀನಿನಲ್ಲಿ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದವರು ತಿಳಿಸಿದ್ದಾರೆ.

ಸೈಕಲ್ ಸವಾರಿ ಆರೋಗ್ಯಕ್ಕೆ ಪೂರಕ: ಬೋಪಯ್ಯ



ಮಡಿಕೇರಿ, ಜೂ.3– ಪ್ರತಿಯೊಬ್ಬರೂ ಆರೋಗ್ಯದಿಂದ ಇದ್ದರೆ ಪ್ರತಿನಿತ್ಯದ ಕೆಲಸ–ಕಾರ್ಯಗಳನ್ನು ಕ್ರಿಯಾಶೀಲತೆಯಿಂದ ನಿರ್ವಹಿಸಬಹುದು, ಆ ನಿಟ್ಟಿನಲ್ಲಿ ಸೈಕಲ್ ಜಾಥಾ ಪೂರಕವಾಗಲಿದೆ ಎಂದು ಶಾಸಕ ಕೆ.ಜಿ.ಬೋಪಯ್ಯ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ನಗರಸಭೆ, ನೆಹರು ಯುವ ಕೇಂದ್ರ, ಯುವಜನ ವ್ಯವಹಾರ ಹಾಗೂ ಕ್ರೀಡಾ ಸಚಿವಾಲಯ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಜಿಲ್ಲಾ ಯುವ ಒಕ್ಕೂಟ, ಮಡಿಕೇರಿ, ಸೋಮವಾರಪೇಟೆ ಮತ್ತು ವಿರಾಜಪೇಟೆ ತಾಲೂಕು ಯುವ ಒಕ್ಕೂಟ ಹಾಗೂ ಮಡಿಕೇರಿ ಕಾವೇರಿ ಕಲಾವೃಂದ ಸಂಯುಕ್ತಾಶ್ರಯದಲ್ಲಿ ಆಜಾದಿಕಾ ಅಮೃತ ಮಹೋತ್ಸವ ಪ್ರಯುಕ್ತ ನಗರದ ಕೋಟೆ ಆವರಣದಲ್ಲಿ ಶುಕ್ರವಾರ ನಡೆದ 'ವಿಶ್ವ ಬೈಸಿಕಲ್ ದಿನಾಚರಣೆ' ಅಂಗವಾಗಿ ಏರ್ಪಡಿಸಲಾಗಿದ್ದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಸ್ವಾತಂತ್ರ್ಯ ದೊರೆತು 75 ವರ್ಷ ಪೂರ್ಣಗೊಂಡ ಹಿನ್ನೆಲೆ ಸರ್ಕಾರ ವಿವಿಧ ಕಾರ್ಯಕ್ರಮ ಹಮ್ಮಿಕೊಂಡಿದೆ. ಆ ನಿಟ್ಟಿನಲ್ಲಿ ಸ್ವಾತಂತ್ರ್ಯ ಸಂರಕ್ಷಿಸುವುದು ಎಲ್ಲರ ಆದ್ಯ ಕರ್ತವ್ಯವಾಗಿದೆ.ಮಹಾನ್ ವ್ಯಕ್ತಿಗಳ ತ್ಯಾಗ–ಬಲಿದಾನಗಳ ಪ್ರತೀಕವಾಗಿ ಆಜಾದಿಕಾ ಅಮೃತ ಮಹೋತ್ಸವ ಸವಿನೆನಪಿಗಾಗಿ ಸರ್ಕಾರದಿಂದ ಹಲವು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ರಾಷ್ಟ್ರ ಬಲಪಡಿಸುವುದು ಯುವಜನರ ಕೈಯಲ್ಲಿದೆ ಎಂದು ಬೋಪಯ್ಯ ಹೇಳಿದರು.

ಪಶ್ಚಿಮ ಘಟ್ಟಗಳ ಕಾರ್ಯಪಡೆಯ ಅಧ್ಯಕ್ಷ ರವಿಕುಶಾಲಪ್ಪ ಮಾತನಾಡಿ, ಪರಿಸರಕ್ಕೆ ಪೂರಕವಾದ ವ್ಯವಸ್ಥೆಗೆ ವಿಶ್ವದಲ್ಲೆಡೆ ಕೈಜೋಡಿಸುವ ಕೆಲಸ ಆಗಿದೆ. ಆ ನಿಟ್ಟಿನಲ್ಲಿ ಸೈಕಲ್ ಜಾಥಾವು ಪೂರಕವಾಗಿದೆ ಎಂದರು.

ಪರಿಸರ ನಾಶದಿಂದ ಶುದ್ಧಗಾಳಿ ಸಿಗದ ಪರಿಸ್ಥಿತಿ ನಿರ್ಮಾಣ ಆಗಿದೆ. ಉಸಿರಾಡುವ ಗಾಳಿಯನ್ನು ಕೂಡ ಹಣ ಕೊಟ್ಟು ಖರೀದಿಸುವಂತಾಗಿದೆ. ಆ ದಿಸೆಯಲ್ಲಿ ಪರಿಸರ ಸಂರಕ್ಷಿಸುವ ಕೆಲಸ ಯುವ ಪೀಳಿಗೆಗಳಿಂದ ಆಗಬೇಕು ಎಂದರು.

ಕಾವೇರಿ ನದಿ ತೀರದ ಪ್ರದೇಶಗಳಲ್ಲಿ ಗಿಡಗಳನ್ನು ನೆಡುವ ಕೆಲಸ ಆಗಬೇಕಾಗಿದೆ. ಮುಂದಿನ ದಿನದಲ್ಲಿ ಜಿಲ್ಲಾಡಳಿತದ ಜೊತೆಗೂಡಿ ಕಾವೇರಿ ನದಿ ತೀರದ ಪ್ರದೇಶಗಳಲ್ಲಿ ಗಿಡ ಬೆಳೆಸಲಾಗುವುದು. ಪಶ್ಚಿಮ ಘಟ್ಟಗಳನ್ನು ಉಳಿಸುವುದರ ಜೊತೆಗೆ ಇಡೀ ರಾಜ್ಯವನ್ನು ಪರಿಸರ ಮಯವಾಗಿ ಮಾಡಬೇಕಾಗಿದೆ ಎಂದು ರವಿಕುಶಾಲಪ್ಪ ಅವರು ಹೇಳಿದರು.

ಶಾಸಕ ಎಂ.ಪಿ.ಅಪ್ಪಚ್ಚುರಂಜನ್ ಮಾತನಾಡಿ, ಸ್ವಾತಂತ್ರ್ಯ ಬಂದು ಎಪ್ಪತ್ತೈದು ವರ್ಷ ಆಚರಿಸುವ ಈ ಸಂದರ್ಭದಲ್ಲಿ ಎಲ್ಲರೂ ಕೂಡ ಸೈಕಲ್ ಜಾಥಾದಲ್ಲಿ ಭಾಗವಹಿಸಿದ್ದಕ್ಕೆ ಸಂತೋಷ ವ್ಯಕ್ತಪಡಿಸಿದರು.

ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಮಹನೀಯರನ್ನು ಈ ಸಂದರ್ಭದಲ್ಲಿ ನೆನೆಯುವುದು ನಮ್ಮ ಆದ್ಯ ಕರ್ತವ್ಯವಾಗಿದೆ. ಸೈಕ್ಲಿಂಗ್ ಆರೋಗ್ಯಕರ ಮತ್ತು ಕ್ರೀಡಾ ಚಟುವಟಿಕೆಯಾಗಿದ್ದು, ಪ್ರತಿನಿತ್ಯ ಕನಿಷ್ಠ 5 ಕಿಲೋ ಮೀಟರ್ ಸೈಕ್ಲಿಂಗ್ ಮಾಡಿದರೆ ಆರೋಗ್ಯವನ್ನು ಚೆನ್ನಾಗಿ ಇಟ್ಟುಕೊಳ್ಳಬಹುದು ಎಂದು ಅವರು ಹೇಳಿದರು.

ಜಿಲ್ಲಾಧಿಕಾರಿ ಡಾ.ಬಿ.ಸಿ.ಸತೀಶ ಮಾತನಾಡಿ, ಆಜಾದಿಕಾ ಅಮೃತ ಮಹೋತ್ಸವ ಸವಿನೆನಪಿಗಾಗಿ ಸೈಕಲ್ ಜಾಥಾವನ್ನು ಹಮ್ಮಿಕೊಳ್ಳಲಾಗಿದೆ. ನಗರದಲ್ಲಿ 7.5 ಕಿಲೋ ಮೀಟರ್ ಸೈಕ್ಲಿಂಗ್ ಮಾಡುವ ಮೂಲಕ ಜನರಲ್ಲಿ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಸೈಕಲ್ ಜಾಥಾ ಆಯೋಜಿಸಲಾಗಿದೆ ಎಂದರು.

ನಗರಸಭೆ ಸಹಯೋಗದೊಂದಿಗೆ ಪ್ಲಾಸ್ಟಿಕ್ ಬಳಕೆಯ ಬಗ್ಗೆ ಜಾಗೃತಿ ಮೂಡಿಸುವ ಕೆಲಸ ಸೈಕ್ಲಿಂಗ್ ಮೂಲಕ ಆಗಿದೆ. ಮಕ್ಕಳೆಲ್ಲರೂ ಕೂಡ ಉತ್ಸಾಹದಿಂದ ಸೈಕಲ್ ಜಾಥಾದಲ್ಲಿ ಪಾಲ್ಗೊಂಡಿದ್ದಾರೆ. ಎಲ್ಲರೂ ಕೂಡ ಸೈಕ್ಲಿಂಗ್ ಮಾಡಬೇಕು. ಇದರಿಂದ ದೈಹಿಕವಾಗಿ ಮತ್ತು ಮಾನಸಿಕವಾಗಿ ಸದೃಢವಾಗಲು ಸಹಾಯಕವಾಗಲಿದೆ ಎಂದರು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ.ಎ.ಅಯ್ಯಪ್ಪ ಮಾತನಾಡಿ, ಮಾನಸಿಕ ಮತ್ತು ದೈಹಿಕವಾಗಿ ಸದೃಢರಾಗಲು ಸೈಕ್ಲಿಂಗ್ ಸಹಕಾರಿಯಾಗಿದೆ ಎಂದರು.

ಸೈಕ್ಲಿಂಗ್ ಒಂದು ಆರೋಗ್ಯಕರ ಮತ್ತು ಕ್ರೀಡಾ ಚಟುವಟಿಕೆಯಾಗಿದ್ದು, ಸೈಕ್ಲಿಂಗ್‌ನಲ್ಲಿ ಎಲ್ಲರೂ ತೊಡಗುವಂತಾಗಬೇಕು. ಕ್ರೀಡೆ ಒಂದು ಆರೋಗ್ಯಕರ ಚಟುವಟಿಕೆಯಾಗಿದ್ದು, ಯುವಜನರು ಇದನ್ನು ಮುಂದುವರಿಸಿಕೊಂಡು ಹೋಗಬೇಕು ಎಂದು ಅವರು ಸಲಹೆ ಮಾಡಿದರು.


ಜಾನಪದ ಪರಿಷತ್ತಿನ ಜಿಲ್ಲಾ ಅಧ್ಯಕ್ಷ ಬಿ.ಜಿ. ಅನಂತಶಯನ ಮಾತನಾಡಿ, ಸೈಕ್ಲಿಂಗ್ ಯಾವತ್ತೂ ಮರೆಯಬೇಡಿ. ಇದೊಂದು ದೈಹಿಕ ಮತ್ತು ಸಾಮರ್ಥ್ಯ ಜೀವನಕ್ಕೆ ಸಹಕಾರಿ ಎಂದರು.

ಸೈಕಲ್ ಜಾಥಾದಲ್ಲಿ ಪಾಲ್ಗೊಂಡವರಿಗೆ ಪ್ರಮಾಣಪತ್ರ ವಿತರಿಸಲಾಯಿತು. ಜಿಲ್ಲಾಧಿಕಾರಿ ಅವರ ಮಕ್ಕಳು ಸೈಕಲ್ ಜಾಥಾದಲ್ಲಿ ಪಾಲ್ಗೊಂಡು ಗಮನ ಸೆಳೆದರು.

ನಗರಸಭೆ ಅಧ್ಯಕ್ಷೆ ಅನಿತಾ ಪೂವಯ್ಯ, ನೆಹರು ಯುವ ಕೇಂದ್ರದ ಅಧಿಕಾರಿ ಉಲ್ಲಾಸ್, ಪೌರಾಯುಕ್ತ ಎಸ್.ವಿ.ರಾಮದಾಸ್, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ಜಿ.ಎಸ್. ಗುರುಸ್ವಾಮಿ ಇತರರು ಇದ್ದರು.

ಇಂದುಮತಿ ಪ್ರಾರ್ಥಿಸಿದರು, ಸುಕುಮಾರ್ ಸ್ವಾಗತಿಸಿ, ವಂದಿಸಿದರು.

ಕೊಡವ ಪಾರಂಪರಿಕ ಕೇಂದ್ರ ವೀಕ್ಷಿಸಿದ ಶಾಸಕ, ಅಧಿಕಾರಿಗಳು



ಮಡಿಕೇರಿ, ಜೂ.3–ನಗರದ ಗಾಲ್ಫ್ ಮೈದಾನದ ಬಳಿ ನಿರ್ಮಾಣವಾಗುತ್ತಿರುವ ಕೊಡವ ಹೆರಿಟೇಜ್ (ಪಾರಂಪರಿಕ) ಕೇಂದ್ರಕ್ಕೆ ಶಾಸಕ ಎಂ.ಪಿ.ಅಪ್ಪಚ್ಚುರಂಜನ್, ಜಿಲ್ಲಾಧಿಕಾರಿ ಡಾ. ಬಿ.ಸಿ.ಸತೀಶ, ಪ್ರವಾಸೋದ್ಯಮ ಇಲಾಖೆ ನಿರ್ದೇಶಕ ಟಿ.ವೆಂಕಟೇಶ್, ಜಂಗಲ್ ಲಾಡ್ಜ್ ಅಂಡ್ ರೆಸಾರ್ಟ್‌ನ ಯೋಜನಾ ವ್ಯವಸ್ಥಾಪಕ ಮನೋಜ್ ಕುಮಾರ್, ಪ್ರವಾಸೋದ್ಯಮ ಇಲಾಖೆ ಉಪ ನಿರ್ದೇಶಕ ಯತೀಶ್ ಉಳ್ಳಾಲ್ ಇತರರು ಶುಕ್ರವಾರ ಭೇಟಿ ನೀಡಿ ವೀಕ್ಷಿಸಿದರು.

ಕೊಡವ ಹೆರಿಟೇಜ್ ಕೇಂದ್ರದಲ್ಲಿ ಆಗಬೇಕಿರುವ ಬಾಕಿ ಕಾಮಗಾರಿಯನ್ನು ಡಿಸೆಂಬರ್ ಅಂತ್ಯದೊಳಗೆ ಪೂರ್ಣಗೊಳಿಸುವಂತೆ ಶಾಸಕ ಎಂ.ಪಿ.ಅಪ್ಪಚ್ಚುರಂಜನ್ ಸೂಚಿಸಿದರು.

ಸರ್ಕಾರದಿಂದ 3.33 ಕೋಟಿ ರೂ.ನಲ್ಲಿ ಈಗಾಗಲೇ 2.86 ಕೋಟಿ ರೂ. ಬಿಡುಗಡೆಯಾಗಿದ್ದು, 47 ಲಕ್ಷ ಬಿಡುಗಡೆಗೆ ಬಾಕಿ ಇದೆ. ಕೊಡವ ಹೆರಿಟೇಜ್ ಕೇಂದ್ರದ ಬಾಕಿ ಕಾಮಗಾರಿಯನ್ನು ತ್ವರಿತವಾಗಿ ಪೂರ್ಣಗೊಳಿಸುವ ನಿಟ್ಟಿನಲ್ಲಿ ಪ್ರವಾಸೋದ್ಯಮ ಸಚಿವರನ್ನು ಜಿಲ್ಲೆಗೆ ಆಹ್ವಾನಿಸಲಾಗುವುದು ಎಂದು ಶಾಸಕರು ತಿಳಿಸಿದರು.

ಪೂರ್ಣ ಪ್ರಮಾಣದ ನಕ್ಷೆಗೆ ಅನುಗುಣವಾಗಿ ಕೊಡವ ಪಾರಂಪರಿಕ ಕೇಂದ್ರ ನಿರ್ಮಾಣದ ಕಾಮಗಾರಿಯನ್ನು ತ್ವರಿತವಾಗಿ ಪೂರ್ಣಗೊಳಿಸುವಂತೆ ಶಾಸಕರು ಹೇಳಿದರು.

ಕೊಡವ ಹೆರಿಟೇಜ್ ಕೇಂದ್ರದಲ್ಲಿ ವಾಟರ್ ಬಾಡಿ ಮತ್ತು ವ್ಯೂ ಪಾಯಿಂಟ್, ಓಪನ್ ಏರ್ ಥಿಯೇಟರ್, ಅಪ್ಪರ್ ಮತ್ತು ಲೋಯರ್ ಡಿಸ್‌ಪ್ಲೇ, ಹೆರಿಟೇಜ್ ಕೇಂದ್ರಕ್ಕೆ ತೆರಳಲು ರಸ್ತೆ, ತಡೆಗೋಡೆ ಮತ್ತು ಪ್ರವೇಶ ದ್ವಾರ ನಿರ್ಮಾಣ, ವಾಹನ ನಿಲುಗಡೆಗೆ ವ್ಯವಸ್ಥೆ ಮಾಡುವುದು ಮತ್ತಿತರ ಕಾಮಗಾರಿ ಬಾಕಿ ಇದ್ದು, ಕನಿಷ್ಠ ಇನ್ನೂ 2.50 ಕೋಟಿ ರೂ. ಬೇಕಿದೆ ಎಂದು ಲೋಕೋಪಯೋಗಿ ಇಲಾಖೆ ಕಾರ್ಯಪಾಲಕ ಎಂಜಿನಿಯರ್ ನಾಗರಾಜು ತಿಳಿಸಿದರು.

ಜಿಲ್ಲಾಧಿಕಾರಿ ಡಾ.ಬಿ.ಸಿ.ಸತೀಶ ಕೊಡಗು ಜಿಲ್ಲೆಯಲ್ಲಿ ಪ್ರವಾಸೋದ್ಯಮ ಇಲಾಖೆ ವ್ಯಾಪ್ತಿಯಲ್ಲಿ ಆಗಬೇಕಿರುವ ಕಾಮಗಾರಿ ಸಂಬಂಧ ಪ್ರವಾಸೋದ್ಯಮ ನಿರ್ದೇಶಕರ ಗಮನಕ್ಕೆ ತಂದರು. ಲೋಕೋಪಯೋಗಿ ಇಲಾಖೆಯ ಎಇಇ ಶಿವರಾವ್, ಪೌರಾಯುಕ್ತ ಎಸ್.ವಿ. ರಾಮದಾಸ್, ಎಂಜಿನಿಯರ್ ಚೆನ್ನಕೇಶವ, ಸತೀಶ್ ಇತರರು ಇದ್ದರು.

ಸೋ.ಪೇಟೆ: ರಸಗೊಬ್ಬರ ಮಳಿಗೆಗಳ ಪರಿಶೀಲನೆ

ಸೋಮವಾರಪೇಟೆ, ಜೂ.3– ಕೃಷಿ ಇಲಾಖೆ ವತಿಯಿಂದ ರಸಗೊಬ್ಬರ ಮತ್ತು ಔಷಧಿ ಮಳಿಗೆಗಳಿಗೆ ಇಲಾಖೆಯ ಸಹಾಯಕ ನಿರ್ದೇಶಕ ಯಾದವ್ ಬಾಬು ಭೇಟಿ ನೀಡಿ, ದಾಖಲಾತಿಗಳನ್ನು ಪರಿಶೀಲಿಸಿದರು.

ನಂತರ ಮಾತನಾಡಿ, ಮುಂಗಾರು ಹಂಗಾಮಿಗೆ ಬಿತ್ತನೆ ಬೀಜ ಮತ್ತು ರಸಗೊಬ್ಬರ ದಾಸ್ತಾನು ಇರಿಸಲಾಗಿದೆ. ಬಿತ್ತನೆ ಬೀಜವನ್ನು ಆಯಾ ರೈತ ಸಂಪರ್ಕ ಕೇಂದ್ರದಲ್ಲಿ ಸರ್ಕಾರದ ಸಹಾಯ ಧನದಲ್ಲಿ ನೀಡ ಲಾಗುತ್ತಿದೆ. ಯಾವುದೇ ವ್ಯಾಪಾರಿಗಳು ರೈತರಿಂದ ರಸಗೊಬ್ಬರ ಮತ್ತು ಕ್ರಿಮಿನಾಶಕಗಳಿಗೆ ನಿಗದಿತ ದರಕ್ಕಿಂತ ಹೆಚ್ಚಿನ ಹಣ ಪಡೆಯಬಾರದು. ರಸಗೊಬ್ಬರಗಳ ನಿಗದಿತ ದರ ಮತ್ತು ದಾಸ್ತಾನಿನ ಬಗ್ಗೆ ಅಂಗಡಿಯಲ್ಲಿ ಬೋರ್ಡ್ ಹಾಕಬೇಕು ಎಂದು ಹೇಳಿದರು.

ಯಾವುದೇ ರೀತಿಯ ದೂರುಗಳಿದ್ದರೂ 8277931907 ಸಂಪರ್ಕಿಸಲು ಕೋರಿದ್ದಾರೆ. ನಂತರ ಕೂಡಿಗೆ, ಹೆಬ್ಬಾಲೆ ಸೇರಿದಂತೆ ಹಲವು ಅಂಗಡಿಗಳಿಗೆ ಭೇಟಿ ನೀಡಿ ಮಾಹಿತಿ ಪಡೆದರು.



ವಿ.ಪೇಟೆಯಲ್ಲಿ ಆಟೋ ಚಾಲಕರ ಸಂಘ ಅಸ್ತಿತ್ವಕ್ಕೆ



ವಿರಾಜಪೇಟೆ, ಜೂ.3– ಆಟೋ ಚಾಲಕರು ಬಡಕುಟುಂಬದವರಾಗಿದ್ದು, ಸರಕಾರ ಕಟ್ಟಡ ಕಾರ್ಮಿಕರಿಗೆ ನೀಡುವಂತ ಸೌಲಭ್ಯಗಳನ್ನು ಆಟೋ ಚಾಲಕರಿಗೂ ನೀಡುವಂತಾಗಬೇಕು, ಆಟೋ ಚಾಲಕರ ಹಿತ ಕಾಯುವ ನಿಟ್ಟಿನಲ್ಲಿ ಸಿಐಟಿಯು ಸಂಘಟನೆ ವತಿಯಿಂದ ತಾಲೂಕಿನಲ್ಲಿ ನೂತನ ಆಟೋ ಚಾಲಕರ ಸಂಘವನ್ನು ರಚಿಸಲಾಗಿದೆ ಎಂದು ಸಂಘದ ಗೌರವ ಅಧ್ಯಕ್ಷ ಎ.ಮಹದೇವ ತಿಳಿಸಿದ್ದಾರೆ.

ಸಿಐಟಿಯು ಸಂಘಟನೆ ವತಿಯಿಂದ ಕರೆದಿದ್ದ ಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಹಿಂದೆ ಆಟೋ ಚಾಲಕರ ವೃತ್ತಿ ಲಾಭದಾಯಕವಾಗಿತ್ತು. ಆದರೆ ಇತ್ತೀಚಿನ ದಿನದಲ್ಲಿ ಆಟೋ ಚಾಲಕರ ಬದುಕು ಕಷ್ಟಕರವಾಗಿದೆ. ಈಗಾಗಲೇ ಆಟೋಗಳ ಸಂಖ್ಯೆ ಹೆಚ್ಚಾಗುತ್ತಿದ್ದು, ತೈಲ, ಬಿಡಿಭಾಗದ ದರ ಏರಿಕೆಯಾಗಿದೆ. ಜೊತೆಗೆ ದೈನಂದಿನ ಜೀವನ ನಡೆಸಲು ಮುಂಜಾನೆಯಿಂದ ರಾತ್ರಿವರೆಗೆ ಕಾದುನಿಲ್ಲುವಂತಾಗಿದೆ. ಮಕ್ಕಳ ಉತ್ತಮ ಶಿಕ್ಷಣ ಇತ್ಯಾದಿಗಳಿಗೆ ಬಡ ಕುಟುಂಬದ ಚಾಲಕರು ಪರದಾಡುವಂತಾಗಿದೆ. ಅದರಿಂದ ಕಟ್ಟಡ ಕಾರ್ಮಿಕರ ಕಲ್ಯಾಣ ಮಂಡಳಿಯಿಂದ ಆಟೋ ಚಾಲಕರನ್ನು ಅಸಂಘಟಿತ ಕಾರ್ಮಿಕರೆಂದು ಗುರುತಿಸಿ ಅವರಿಗೂ ಗುರುತಿನ ಚೀಟಿ ನೀಡುವ ಮೂಲಕ ಎಲ್ಲಾ ಸೌಲಭ್ಯಗಳನ್ನು ನೀಡುವಂತಾಗಬೇಕು ಎಂದರಲ್ಲದೆ ನಿವೇಶನ ರಹಿತ ಆಟೋ ಚಾಲಕರಿಗೆ ಸೂಕ್ತ ನಿವೇಶನ ಹಾಗೂ ಮಾಸಿಕ ಹತ್ತು ಸಾವಿರ ರೂ, ನೀಡುವಂತೆ ಒತ್ತಾಯಿಸಿದರು. ಇದಕ್ಕೂ ಮೊದಲು ಪಾಲಿಬೆಟ್ಟದಲ್ಲಿ ಸಭೆ ನಡೆಸಿ ನೂತನ ಆಟೋ ಚಾಲಕರ ಸಂಘ ರಚಿಸಲಾಗಿದ್ದು. ನೂತನ ಸಂಘದ ಅಧ್ಯಕ್ಷರಾಗಿ ದೂಜ ವೇಗಸ್, ಗೌ.ಅಧ್ಯಕ್ಷರಾಗಿ ಮಹಾದೇವ, ಕಾರ್ಯದರ್ಶಿ ನಜೀರ್, ಸಹಕಾರ್ಯದರ್ಶಿ ಈಶ್ವರ ಮತ್ತು ಶಹದ್, ಉಪಾಧ್ಯಕ್ಷರಾಗಿ ಬಿದ್ದಪ್ಪ, ಖಜಾಂಚಿ ರಿಯಾಜ್, ಸಮಿತಿ ಸದಸ್ಯರಾಗಿ ಬೋಪಣ್ಣ, ಗಫೂರ್, ಲೋಹಿತ್, ಮಂಜು, ರೋಹಿತ್, ಮೊಂಟೆಶಾ ಮತ್ತು ರಾಸಿಕ್ ಅವರುಗಳನ್ನು ಆಯ್ಕೆ ಮಾಡಲಾಗಿದೆ ಎಂದರು.

ಗೋಷ್ಠಿಯಲ್ಲಿ ಆಟೋ ಚಾಲಕರ ಸಂಘದ ಅಧ್ಯಕ್ಷ ದೂಜವೇಗಸ್, ಉಪಾಧ್ಯಕ್ಷ ಬಿದ್ದಪ್ಪ, ಸಹಕಾರ್ಯದರ್ಶಿ ಶಹದ್ ಮತ್ತು ಈಶ್ವರ, ಖಜಾಂಚಿ ರಿಯಾಜ್ ಉಪಸ್ಥಿತರಿದ್ದರು.

ಸಾಂಕ್ರಾಮಿಕ ರೋಗ ತಡೆಗೆ ಮುಂಜಾಗ್ರತೆ ಅಗತ್ಯ

ಮಡಿಕೇರಿ, ಜೂ.3– ಮಳೆಗಾಲದಲ್ಲಿ ಹರಡಬಹುದಾದ ಸಾಂಕ್ರಾಮಿಕ ರೋಗಗಳನ್ನು ನಿಯಂತ್ರಿಸಲು ಜನರು ಅಗತ್ಯ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಬೇಕೆಂದು ಮಡಿಕೇರಿ ತಾಲೂಕು ಆರೋಗ್ಯಾಧಿಕಾರಿ ಡಾ.ಚೇತನ ಕರೆ ನೀಡಿದ್ದಾರೆ.



ಮಳೆಗಾಲದಲ್ಲಿ ಹರಡುವ ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟುವ ಕುರಿತು ಕರಿಕೆ ಗ್ರಾ.ಪಂ ವತಿಯಿಂದ ಪಂಚಾಯ್ತಿ ಸಭಾಂಗಣದಲ್ಲಿ ಸಭೆ ನಡೆಯಿತು. ಸಭೆಯಲ್ಲಿ ಪಾಲ್ಗೊಂಡು ಮಾತನಾಡಿದ ಆರೋಗ್ಯಾಧಿಕಾರಿ ಚೇತನ್, ಕಾಲರಾ, ಕರಳುಬೇನೆ, ವಾಂತಿ, ಭೇದಿ, ಅತಿಸಾರ ಭೇದಿ, ಕಾಮಾಲೆ, ಚಿಕೂನ್ ಗುನ್ಯ ಹಾಗೂ ಡೆಂಗ್ಯು ಜ್ವರಗಳ ಬಗ್ಗೆ ಎಚ್ಚರ ವಹಿಸಬೇಕೆಂದು ಸಲಹೆ ನೀಡಿದರು. ಗ್ರಾ.ಪಂ ಉಪಾಧ್ಯಕ್ಷ ಬಾಲಚಂದ್ರನ್ ನಾಯರ್ ಮಾತನಾಡಿ, ಮಳೆಗಾಲದಲ್ಲಿ ಡೆಂಗ್ಯೂ ಜ್ವರ ಹರಡದಂತೆ ಸಾರ್ವಜನಿಕ ಸ್ಥಳಗಳು, ಆಸ್ಪತ್ರೆ, ಶಾಲೆ ಮತ್ತು ಮನೆಗಳ ಸುತ್ತಮುತ್ತ ಸೊಳ್ಳೆಗಳು ಉತ್ಪತ್ತಿಯಾಗದಂತೆ ಸ್ವಚ್ಛತಾ ಕಾರ್ಯವನ್ನು ಕೈಗೊಳ್ಳಬೇಕು ಎಂದರು.

ಗ್ರಾ.ಪಂ ಅಧ್ಯಕ್ಷೆ ಕಲ್ಪನಾ ಕೆ.ಜೆ. ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಟಿ.ಎನ್.ಪಾಲಾಕ್ಷ, ತಾಲೂಕು ಪಿಹೆಚ್‌ಸಿ ದೇಚಮ್ಮ, ಕರಿಕೆ ಆರೋಗ್ಯಾಧಿಕಾರಿ ಡಾ.ಪುಂಡಲೀಕ ಲಮಾಣಿ, ಪಂಚಾಯತ್ ಸದಸ್ಯರು, ಆಶಾ ಕಾರ್ಯಕರ್ತೆಯರು, ಅಂಗನವಾಡಿ ಕಾರ್ಯಕರ್ತೆಯರು, ಆರೋಗ್ಯ ಸಹಾಯಕಿಯರು ಹಾಗೂ ಸಿಬ್ಬಂದಿಗಳು ಉಪಸ್ಥಿತರಿದ್ದರು. ಕರಿಕೆ ವಿವಿಧ ಸ್ಥಳಗಳಲ್ಲಿ ಪಂಚಾಯಿತಿ ವತಿಯಿಂದ 3 ದಿನಗಳ ಕಾಲ ಸ್ವಚ್ಛತಾ ಕಾರ್ಯ ಕೈಗೊಳ್ಳಲು ಸಭೆ ನಿರ್ಧರಿಸಿತು.

ಧಾರ್ಮಿಕ ಆಚರಣೆಗಳಿಂದ ಮಾನಸಿಕ ನೆಮ್ಮದಿ



ಸೋಮವಾರಪೇಟೆ, ಜೂ.3– ಧಾರ್ಮಿಕ ಆಚರಣೆಗಳಿಂದ ಮಾನಸಿಕ ನೆಮ್ಮದಿ ಕಾಣಲು ಸಾಧ್ಯ ಎಂದು ಕಿರಿಕೊಡ್ಲಿ ಮಠಾಧೀಶರಾದ ಶ್ರೀ ಸದಾಶಿವ ಸ್ವಾಮೀಜಿ ಹೇಳಿದರು.

ಯಲಕನೂರು ಗ್ರಾಮದ ಮಹಾಲಿಂಗೇಶ್ವರ ದೇವಾಲಯದ ಆವರಣದಲ್ಲಿ ಶುಕ್ರವಾರ ಏರ್ಪಡಿಸಲಾಗಿದ್ದ ಧಾರ್ಮಿಕ ಸಮಾರಂಭದ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

ಗ್ರಾಮದಲ್ಲಿ ಒಂದು ದೇವಾಲಯವಿದ್ದರೆ ಸಮೃದ್ಧಿಯ ಸಂಕೇತ ಮತ್ತು ಒಗ್ಗಟ್ಟಿನ ಬದುಕು ಇರುತ್ತದೆ ಎಂದು ಶ್ರೀಗಳು ಅಭಿಪ್ರಾಯಿಸಿದರು. ಸಮಾರಂಭದಲ್ಲಿ ಪಾಲ್ಗೊಂಡಿದ್ದ ತಹಸೀಲ್ದಾರ್ ಗೋವಿಂದರಾಜು ಮಾತನಾಡಿ, ಇಂದು ಜನಸಾಮಾನ್ಯರು ತಮ್ಮ ದಿನ ನಿತ್ಯದ ಜಂಜಾಟದಿಂದ ಒಂದಷ್ಟು ನೆಮ್ಮದಿ ದೇವಾಲಯಗಳಲ್ಲಿ ಕಾಣುತ್ತಿದ್ದಾರೆ. ದೇವರ ಮೊರೆಹೋಗುತ್ತಿದ್ದಾರೆ. ಪ್ರತಿಯೊಬ್ಬರಿಗೂ ಸಂಸ್ಕಾರ ಮುಖ್ಯ. ಅದರಲ್ಲೂ ಮಕ್ಕಳಲ್ಲಿ ಸಂಸ್ಕಾರ ಬೆಳೆಸಬೇಕಾದ ಅನಿವಾರ್ಯತೆ ಇದೆ ಎಂದರು. ಸಮಾರಂಭದಲ್ಲಿ ಮನೆಹಳ್ಳಿ ಮಠಾಧೀಶರಾದ ಶ್ರೀ ಮಹಾಂತಶಿವಲಿಂಗ ಸ್ವಾಮೀಜಿ, ದೇವಾಲಯ ಸಮಿತಿ ಅಧ್ಯಕ್ಷ ಶಿವಾನಂದ, ಉಪಾಧ್ಯಕ್ಷ ದಿನೇಶ್, ಕಾರ್ಯದರ್ಶಿ ಪ್ರಸನ್ನ, ದೇವಾಲಯ ಸಮಿತಿಯ ಬಿ.ಎಸ್. ದಿಲೀಪ್, ರವಿಶಂಕರ್, ನಟರಾಜ್, ಸತೀಶ್, ಆನಂದ್, ಹರೀಶ್ ಇದ್ದರು.

ಒಂದನೇ ಪುಟದಿಂದ

ಅಂದಗೊಳ್ಳುತ್ತಿದೆ ಅರಮನೆ ಆವರಣ

ಎರಡು ದಿನ ಮುನ್ನ ಬಗೆ ಬಗೆಯ ಬಣ್ಣದ ಗುಲಾಬಿಗಳಿಂದ ಅಲಂಕಾರ, ಯೋಗದ ವಿವಿಧ ಭಂಗಿ ಬಿಂಬಿಸುವ ಆಕೃತಿ ಪ್ರತಿಷ್ಠಾಪಿಸಲಾಗುತ್ತದೆ.

ಹುಲ್ಲಿನ ಹಾಸು: ಅರಮನೆ ಮುಂಭಾಗ ಪ್ರಧಾನಿ ನರೇಂದ್ರ ಮೋದಿ ಅವರು ಮುಖ್ಯ ವೇದಿಕೆಯಲ್ಲಿ ಯೋಗ ಮಾಡಲಿದ್ದಾರೆ. ಪ್ರೋಟೋಕಾಲ್‌ನಂತೆ ಪ್ರಧಾನಿ ಇರುವ ವೇದಿಕೆಯಿಂದ ಅನತಿ ದೂರದಲ್ಲಿ ಗಣ್ಯರು ಯೋಗ ಮಾಡಲು ಅವಕಾಶ ಕಲ್ಪಿಸಲಾಗುತ್ತದೆ. ಸಾರ್ವಜನಿಕರು, ಶಾಲಾ-ಕಾಲೇಜು ವಿದ್ಯಾರ್ಥಿಗಳು ಯೋಗ ಮಾಡಲು ವರಾಹಸ್ವಾಮಿ ದೇವಾಲಯದ ಪಕ್ಕದ ಉದ್ಯಾನ, ಶ್ರೀಶ್ವೇತ ವರಾಹಸ್ವಾಮಿ ದೇವಾಲಯದ ಪಕ್ಕದಲ್ಲಿರುವ ಖಾಲಿ ಜಾಗ, ಭುವನೇಶ್ವರಿ ದೇವಾಲಯದ ಪಕ್ಕದ ಎಡ ಬದಿಯಲ್ಲಿರುವ ಉದ್ಯಾನ, ಖಾಲಿ ಜಾಗ ಮತ್ತು ದೇವಾಲಯದ ಎದುರು ಇರುವ ಉದ್ಯಾನದಲ್ಲಿ ಯೋಗ ಪ್ರದರ್ಶನಕ್ಕೆ ಅವಕಾಶ ನೀಡಲಾಗುತ್ತದೆ. ಈಗಾಗಲೇ ಈ ಸ್ಥಳದಲ್ಲಿ ಹುಲ್ಲು ಎತ್ತರಕ್ಕೆ ಬೆಳೆದುಕೊಂಡಿತ್ತು. ಯೋಗ ಮ್ಯಾಟ್ ಹಾಸಲು ಸಹಕಾರಿಯಾಗುವಂತೆ ಲೆವೆಲ್ ಟ್ರಿಮ್ಮರ್ ಸಾಧನದ ಮೂಲಕ ಹುಲ್ಲನ್ನು ಸಮತಟ್ಟು ಮಾಡಿ, ಹುಲ್ಲಿನ ಹಾಸಿಗೆ ನಿರ್ಮಿಸಲಾಗುತ್ತಿದೆ.

ಪಾರ್ಕ್‌ಗಳಲ್ಲಿ ವಿದ್ಯುತ್ ದೀಪ ಅಳವಡಿಕೆ: ನವರಾತ್ರಿ ವೇಳೆ ಅರಮನೆಯ ದೀಪಾಲಂಕಾರ ಹಾಗೂ ಆವರಣದಲ್ಲಿರುವ ಪಾರ್ಕ್‌ನಲ್ಲಿನ ವಿದ್ಯುತ್ ದೀಪದ ಕಂಬಗಳಲ್ಲಿ ಕೆಟ್ಟಿದ್ದ ಬಲ್ಬ್‌ಗಳನ್ನು ಬದಲಾಯಿಸಲಾಗುತ್ತಿತ್ತು. ಆದರೆ, ಮೋದಿ ಆಗಮನದ ಹಿನ್ನೆಲೆಯಲ್ಲಿ ಈಗ ಅರಮನೆ ಆವರಣ ಹಾಗೂ ಪಾರ್ಕ್ ಉದ್ಯಾನವನದ ವಿದ್ಯುತ್ ಬಲ್ಬ್‌ಗಳನ್ನು ಬದಲಿಸಲಾಗುತ್ತಿದೆ. ಜೂ.21 ರಂದು ಪ್ರಧಾನಿ ನರೇಂದ್ರ ಮೋದಿ ಅವರ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಆಯ್ಕೆಯಾಗುವ ಯೋಗ ಪಟುಗಳನ್ನು ಅಂದು ಮುಂಜಾನೆ 4 ಗಂಟೆಯೊಳಗೆ ನಿಗದಿತ ಬ್ಲಾಕ್‌ನಲ್ಲಿ ಆಸೀನರಾಗಲು ಸೂಚಿಸುವುದರಿಂದ ಹಿಂದಿನ ದಿನವೇ ಎಸ್‌ಪಿಜಿ ಹಾಗೂ ಭದ್ರತಾ ಸಿಬ್ಬಂದಿ ಅರಮನೆ ಆವರಣವನ್ನು ತಮ್ಮ ವಶಕ್ಕೆ ತೆಗೆದುಕೊಳ್ಳಲಿದ್ದಾರೆ. ಪಾರ್ಕ್‌ನಲ್ಲಿ ಬೆಳಕಿನ ವ್ಯವಸ್ಥೆಗಾಗಿ ವಿದ್ಯುತ್ ದೀಪ ದುರಸ್ತಿ ಕಾರ್ಯ ನಡೆಸಲಾಗುತ್ತಿದೆ.

ಅಂತರರಾಷ್ಟ್ರೀಯ ಯೋಗ ದಿನದ ಕಾರ್ಯಕ್ರಮಕ್ಕೆ ಇನ್ನು 18 ದಿನ ಮಾತ್ರ ಬಾಕಿ ಇರುವುದರಿಂದ ಅರಮನೆ ಆವರಣದಲ್ಲಿ ಸಿದ್ಧತಾ ಕಾರ್ಯ ಭರದಿಂದ ಸಾಗುತ್ತಿದೆ. ಇನ್ನು ಒಂದು ವಾರದೊಳಗೆ ಅರಮನೆ ಆವರಣ ಕಂಗೊಳಿಸಲಿದೆ.

ಪೊಲೀಸರ ಸರ್ಪಗಾವಲು

ಪಥ ಸಂಚಲನ ನಡೆಸಲಾಯಿತು. ಜಾಮಿಯಾ ಮಸೀದಿ ಸುತ್ತಲೂ ಬ್ಯಾರಿಕೇಡ್ ಅಳವಡಿಸಿ ಭದ್ರತೆಗಾಗಿ ಪೊಲೀಸರನ್ನು ನಿಯೋಜಿಸಲಾಗಿದೆ.

ಮದ್ಯ ಮಾರಾಟ ನಿಷೇಧ: ಮೂಲಮಂದಿರ ಚಲೋ ಕಾರ್ಯಕ್ರಮ ಹಮ್ಮಿಕೊಂಡಿರುವ ಹಿನ್ನೆಲೆಯಲ್ಲಿ ಜೂ.3ರಿಂದ ಸಂಜೆ 6ರಿಂದ ಜೂ.5ರ ಬೆಳಗ್ಗೆ 6 ಗಂಟೆವರೆಗೆ ಶ್ರೀರಂಗಪಟ್ಟಣ ಪುರಸಭಾ ವ್ಯಾಪ್ತಿಯ 5 ಕಿಮೀ ಸುತ್ತಳತೆ ವ್ಯಾಪ್ತಿಯಲ್ಲಿ ಇರುವ ಮದ್ಯದ ಅಂಗಡಿ, ಬಾರ್ ಮತ್ತು ರೆಸ್ಟೋರೆಂಟ್‌ಗಳನ್ನು ಮುಚ್ಚುವಂತೆ ಹಾಗೂ ಮದ್ಯ ಮಾರಾಟ, ಸಂಗ್ರಹಣೆ, ಸಾಗಾಣಿಕೆ ಮತ್ತು ಶೇಖರಣೆ ಮಾಡುವುದನ್ನು ನಿಷೇಧಿಸಿ ಜಿಲ್ಲಾಧಿಕಾರಿ ಎಸ್.ಅಶ್ವತಿ ಆದೇಶ ಹೊರಡಿಸಿದ್ದಾರೆ.

ಸಂತೆ ಮುಂದೂಡಿಕೆ: ವಿಶ್ವ ಹಿಂದೂ ಪರಿಷತ್‌ನಿಂದ ಶ್ರೀರಂಗಪಟ್ಟಣದ ಕುವೆಂಪು ವೃತ್ತದಿಂದ ಶ್ರೀಮೂಡಲ ಬಾಗಿಲು ಆಂಜನೇಯಸ್ವಾಮಿ ಮೂಲ ಮಂದಿರಕ್ಕೆ ಚಲೋ ಕಾರ್ಯಕ್ರಮ ಹಮ್ಮಿಕೊಂಡಿರುವ ಹಿನ್ನೆಲೆಯಲ್ಲಿ ಪಟ್ಟಣದಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡುವ ಸಂಬಂಧ ಹಾಗೂ ಸಾರ್ವಜನಿಕ ಹಿತದೃಷ್ಟಿಯಿಂದ ಜೂ.4ರಂದು ನಡೆಯಬೇಕಿರುವ ಸಂತೆಯನ್ನು ಜೂ.5ಕ್ಕೆ ಮುಂದೂಡಲಾಗಿದೆ ಎಂದು ಶ್ರೀರಂಗಪಟ್ಟಣ ಪುರಸಭೆ ಮುಖ್ಯಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶ್ರೀರಂಗಪಟ್ಟಣದಲ್ಲಿ ಮೂಲ ಮಂದಿರ ಚಲೋ ಕಾರ್ಯಕ್ರಮವನ್ನು ತಡೆಯುವ ನಿಟ್ಟಿನಲ್ಲಿ ಪೊಲೀಸರು ನಿಷೇಧಾಜ್ಞೆ ಹೇರಿದ್ದಾರೆ ಎಂದು ವಿಶ್ವ ಹಿಂದೂ ಪರಿಷತ್ ಕಾರ್ಯದರ್ಶಿ ಬೆಳಗೊಳ ಸುನೀಲ್ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಮೈಸೂರು ಮಿತ್ರ ಜೊತೆ ಮಾತನಾಡಿದ ಅವರು, ಹಾಲಿ ಜಾಮಿಯಾ ಮಸೀದಿ ಎಂದು ಕರೆಯಲ್ಪಡುತ್ತಿರುವುದು ಈ ಹಿಂದೆ ಮೂಡಲ ಬಾಗಿಲು ಆಂಜನೇಯಸ್ವಾಮಿ ದೇವಸ್ಥಾನವಾಗಿತ್ತು ಅದನ್ನು ಟಿಪ್ಪು ಕಾಲದಲ್ಲಿ ಅತಿಕ್ರಮಣ ಮಾಡಿ ಮಸೀದಿ ನಿರ್ಮಿಸಲಾಗಿದೆ. ಈಗಲೂ ಕೂಡ ಮಸೀದಿಯೊಳಗೆ ಹಿಂದೂ ದೇವರ ವಿಗ್ರಹಗಳಿವೆ. ಕಲ್ಯಾಣಿಯೂ ಇದೆ. ಇದು ಪುರಾತತ್ವ ಇಲಾಖೆಗೆ ಸೇರಿದ್ದಾಗಿದ್ದು, ಅಲ್ಲಿ ಯಾರೂ ವಾಸ ಮಾಡುವ ಹಾಗಿಲ್ಲ. ಆದರೆ ಮಸೀದಿಯೊಳಗಿರುವ ಹಿಂದೂ ದೇವರ ವಿಗ್ರಹಗಳನ್ನು ಹಾಳುಗೆಡವಲಾಗುತ್ತಿದೆ. ಅಲ್ಲದೇ ಮಸೀದಿಯೊಳಗೆ ಕೆಲವರು ವಾಸಮಾಡುತ್ತಿದ್ದಾರೆ. ಇದು ಪುರಾತತ್ವ ಇಲಾಖೆ ಕಾಯ್ದೆಗೆ ವಿರುದ್ಧವಾಗಿದ್ದು, ಅಲ್ಲಿ ವಾಸವಿರುವವರನ್ನು ಹೊರ ಹಾಕಬೇಕು ಹಾಗೂ ಅವರ ವಿರುದ್ಧ ಎಫ್‌ಐಆರ್ ದಾಖಲಿಸಬೇಕೆಂದು ನಮ್ಮ ಆಗ್ರಹವಾಗಿದ್ದು, ಈ ಸಂಬಂಧ ಈಗಾಗಲೇ ಜಿಲ್ಲಾಧಿಕಾರಿಗಳು, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಹಾಗೂ ಪುರಾತತ್ವ ಇಲಾಖೆಗೆ ಮನವಿ ಮಾಡಲಾಗಿದೆ. ನಾಳೆ (ಜೂ.4) ಬೆಳಗ್ಗೆ 10.30ಕ್ಕೆ ಶ್ರೀರಂಗಪಟ್ಟಣದ ಕುವೆಂಪು ವೃತ್ತದಿಂದ 'ಮೂಲ ಮಂದಿರ ಚಲೋ' ಹೆಸರಿನಲ್ಲಿ ಈಗ ಜಾಮಿಯಾ ಮಸೀದಿ ಎಂದು ಕರೆಯಲ್ಪಡುತ್ತಿರುವ ಮೂಲತಃ ಮೂಡಲಬಾಗಿಲು ಆಂಜನೇಯಸ್ವಾಮಿ ದೇವಾಲಯದವರೆಗೆ ಜಾಥಾ ನಡೆಸಿ, ಅಲ್ಲಿ ಹನುಮಾನ್ ಚಾಲಿಸ್ ಪಠಿಸಲು ಉದ್ದೇಶಿಸಲಾಗಿತ್ತು. ಆದರೆ ನಿಷೇಧಾಜ್ಞೆ ಜಾರಿಯಲ್ಲಿರುವುದರಿಂದ ಕಾನೂನಿಗೆ ಗೌರವ ನೀಡಿ ಜಾಥಾ ನಡೆಸುವುದನ್ನು ಕೈಬಿಡಲಾಗಿದೆ. ಆದರೆ ಕಾನೂನಿಗೆ ಯಾವುದೇ ಧಕ್ಕೆ ಬಾರದ ರೀತಿಯಲ್ಲಿ ಜಾಮಿಯಾ ಮಸೀದಿ ಬಳಿ ಜಮಾಯಿಸಿ ಹನುಮಾನ ಚಾಲಿಸ್ ಪಠಿಸುತ್ತೇವೆ ಎಂದು ಅವರು ಹೇಳಿದರು.

ಪರಿಷ್ಕರಣಾ ಸಮಿತಿ ವಿಸರ್ಜನೆ

ಜಾರಿಯಲ್ಲಿದ್ದ ಕೆಲವು ಪಠ್ಯಪುಸ್ತಕಗಳಲ್ಲಿ ಹಲವು ಆಕ್ಷೇಪಾರ್ಹ ಅಂಶಗಳು ಇದ್ದ ಕಾರಣ ಸಮಾಜ ವಿಜ್ಞಾನ ಹಾಗೂ ಕನ್ನಡ ಭಾಷಾ ವಿಷಯಗಳಿಗೆ ಸಂಬಂಧಿಸಿದಂತೆ ಪಠ್ಯ ಪುಸ್ತಕಗಳ ಅಲ್ಪ ಪರಿಷ್ಕರಣೆಯನ್ನು ಮಾಡಲಾಗಿದೆ ಎಂದು ತಿಳಿಸಿದ್ದಾರೆ.

ಶ್ರೀ ಪಂಡಿತಾರಾಧ್ಯ ಸ್ವಾಮೀಜಿಗಳು ಹಾಗೂ ನಾಡಿನ ಇತರ ಸ್ವಾಮೀಜಿಗಳು ಪ್ರಸ್ತುತ ಪಠ್ಯ ಪುಸ್ತಕದಲ್ಲಿರುವ ಬಸವಣ್ಣನವರ ವಿಷಯಾಂಶಕ್ಕೆ ಸಂಬಂಧಿಸಿದಂತೆ ಕೆಲವು ಆಕ್ಷೇಪಣೆಗಳನ್ನು ಮಾಡಿದ್ದಾರೆ. ಬಸವಣ್ಣನವರ ಇದೇ ವಿಷಯಾಂಶಕ್ಕೆ ಸಂಬಂಧಿಸಿದಂತೆ ಈ ಹಿಂದೆ ಜಾರಿಯಲ್ಲಿದ್ದ ಬರಗೂರು ರಾಮಚಂದ್ರಪ್ಪ ಇವರ ಸಮಿತಿಯಿಂದ ರಚಿತವಾದ ಪಠ್ಯಪುಸ್ತಕ ಹಾಗೂ ಪ್ರಸ್ತುತ ಪರಿಷ್ಕರಿಸಿರುವ ಪಠ್ಯಪುಸ್ತಕದಲ್ಲಿ ಸಾಮಾನ್ಯವಾದ ಅಂಶಗಳಿವೆ. ಪ್ರಸ್ತುತ ಪಠ್ಯಪುಸ್ತಕದಲ್ಲಿರುವ ಬಸವಣ್ಣನವರ ವಿಷಯಾಂಶವನ್ನು ಯಾರ ಭಾವನೆಗೂ ಧಕ್ಕೆ ಆಗದಂತೆ ಪರಿಷ್ಕರಿಸಲಾಗುವುದು ಎಂದು ಸಿಎಂ ಹೇಳಿದ್ದಾರೆ.

ಆದಿಚುಂಚನಗಿರಿ ಪೀಠದ ಶ್ರೀ ನಿರ್ಮಲಾನಂದ ಸ್ವಾಮೀಜಿಯವರು ಹಾಗೂ ಇತರರ ಆಶಯದಂತೆ ರಾಷ್ಟ್ರಕವಿ ಕುವೆಂಪು ವಿರಚಿತ ನಾಡಗೀತೆಯನ್ನು ವಿಕೃತಗೊಳಿಸುವ ರೀತಿಯಲ್ಲಿ ನಾಡಗೀತೆಯ ಧಾಟಿಯಲ್ಲಿ ಮೂಲ ಕವನವನ್ನು ಬರೆದ ವ್ಯಕ್ತಿಗಳ ವಿರುದ್ಧ ಕಾನೂನು ಕ್ರಮ ತೆಗೆದುಕೊಳ್ಳಲು ಸೈಬರ್ ಕ್ರೈಮ್‌ನವರ ತನಿಖೆ ನಡೆಸುವಂತೆ ಸಿಎಂ ಸೂಚಿಸಿದ್ದಾರೆ.

ಪಠ್ಯಪುಸ್ತಕ ಪರಿಷ್ಕರಣೆಗೆ ಸಂಬಂಧಿಸಿದಂತೆ ಬಂದಿರುವ ಆರೋಪ, ಆಕ್ಷೇಪಣೆಗಳಿಗೆ ಸ್ಪಷ್ಟೀಕರಣಗಳನ್ನು ಒಳಗೊಂಡ ಟಿಪ್ಪಣಿ ಲಗತ್ತಿಸಿದೆ. ಹಲವಾರು ಅಂಶಗಳಿಗೆ ವಾಸ್ತವ ಅಂಶಗಳ ಸ್ಪಷ್ಟೀಕರಣವನ್ನು ಕೊಡಲಾಗಿದೆ. ಪ್ರಸ್ತುತ ಆಕ್ಷೇಪ ಮಾಡಿರುವಂತೆ ಮಹಾನ್ ವ್ಯಕ್ತಿಗಳ ಯಾವುದೇ ಪಾಠವನ್ನು ಕೈಬಿಡಲಾಗಿಲ್ಲ ಎಂದು ಸಿಎಂ ಸ್ಪಷ್ಟಪಡಿಸಿದ್ದಾರೆ.

ನಂಬರ್ ಗೇಮ್ ಸ್ಟಾರ್ಟ್

ರೂಪಿಸಿವೆ ಎಂದು ಹೇಳಲಾಗಿದೆ. ಕಾಂಗ್ರೆಸ್ ಮತ್ತು ಬಿಜೆಪಿಯಲ್ಲಿರುವ ಹಾಲಿ ಶಾಸಕರಲ್ಲಿ ಕೆಲವರು ತಮ್ಮ ಅವಧಿ ಮುಗಿಯುತ್ತಿದ್ದಂತೆ ಪಕ್ಷ ತೊರೆಯಲು ನಿರ್ಧರಿಸಿದ್ದು, ಈಗಾಗಲೇ ಮಾತುಕತೆ ನಡೆಸುತ್ತಿದ್ದಾರೆ ಎಂಬುದು ರಾಜಕೀಯ ವಲಯದಲ್ಲಿ ಕೇಳಿಬರುತ್ತಿರುವ ಮಾತು. ಹೀಗಾಗಿ ಜೆಡಿಎಸ್‌ನ ಕೆಲ ಶಾಸಕರ ಜೊತೆ ಭವಿಷ್ಯದಲ್ಲಿ ಬಿಜೆಪಿಯಿಂದ ಕಾಂಗ್ರೆಸ್ ಸೇರಲಿರುವ ಶಾಸಕರು ತಮ್ಮ ಅಭ್ಯರ್ಥಿಗೆ ಮತ ಚಲಾಯಿಸುವಂತೆ ಮಾಡುವುದು ಕಾಂಗ್ರೆಸ್‌ನ ಕಾರ್ಯತಂತ್ರವಾಗಿದೆ. ಇದೇ ರೀತಿಯ ಕಾರ್ಯತಂತ್ರವನ್ನು ಬಿಜೆಪಿ ಕೂಡ ರೂಪಿಸಿದೆ. ಒಂದು ವೇಳೆ ಕಾಂಗ್ರೆಸ್ ಹಾಗೂ ಜೆಡಿಎಸ್ ಶಾಸಕರನ್ನು ಸೆಳೆಯಲು ಸಾಧ್ಯವಾಗದಿದ್ದರೂ 2ನೇ ಪ್ರಾಶಸ್ತ್ಯ ಮತಗಳಿಂದ ತಮ್ಮ ಅಭ್ಯರ್ಥಿ ಗೆಲುವು ಸಾಧಿಸುತ್ತಾರೆ ಎಂಬುದು ಬಿಜೆಪಿಯ ವಿಶ್ವಾಸ. ಸಂಖ್ಯಾ ಬಲವಿಲ್ಲದಿದ್ದರೂ ತಮ್ಮ ಪಕ್ಷದಿಂದ 2ನೇ ಅಭ್ಯರ್ಥಿ ಕಣಕ್ಕಿಳಿಸಿರುವ ಬಗ್ಗೆ ಸುದ್ದಿಗಾರರು ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿದ ವಿಪಕ್ಷ ನಾಯಕ ಸಿದ್ದರಾಮಯ್ಯ, ಬಿಜೆಪಿ ಮತ್ತು ಜೆಡಿಎಸ್‌ಗೆ ಮಾತ್ರ ಸಂಖ್ಯಾ ಬಲವಿದೆ ಎಂದು ಪ್ರಶ್ನಿಸಿದ್ದಾರೆ, ನಮ್ಮ ಅಭ್ಯರ್ಥಿ ಗೆಲ್ಲುತ್ತಾರೆಂಬ ವಿಶ್ವಾಸದಿಂದಲೇ ಕಣಕ್ಕಿಳಿಸಿದ್ದೇವೆ. ಆತ್ಮಸಾಕ್ಷಿಯಿಂದ ಮತ ಚಲಾಯಿಸುವ ಶಾಸಕರು ನಮ್ಮ ಅಭ್ಯರ್ಥಿಗೆ ಮತ ಚಲಾಯಿಸುತ್ತಾರೆ ಎಂದು ಹೇಳುವ ಮೂಲಕ ಜೆಡಿಎಸ್ ಮತ್ತು ಬಿಜೆಪಿ ಬುಟ್ಟಿಗೆ ಕಾಂಗ್ರೆಸ್ ಕೈ ಹಾಕಿದೆ ಎಂಬುದನ್ನು ಪರೋಕ್ಷವಾಗಿ ಹೇಳಿದರು. ನಾಮಪತ್ರ ಹಿಂಪಡೆಯಲು ಕೊನೆಯ ದಿನವಾದ ಇಂದು ಯಾವುದೇ ಅಭ್ಯರ್ಥಿ ನಾಮಪತ್ರ ಹಿಂಪಡೆಯದ ಕಾರಣ ಬಿಜೆಪಿಯ ನಿರ್ಮಲಾ ಸೀತಾರಾಮನ್, ಜಗ್ಗೇಶ್, ಲೆಹರ್‌ಸಿಂಗ್, ಕಾಂಗ್ರೆಸ್‌ನ ಜೈರಾಂ ರಮೇಶ್, ಮನ್ಸೂರ್ ಅಲಿಖಾನ್, ಜೆಡಿಎಸ್‌ನ ಕುಪೇಂದ್ರ ರೆಡ್ಡಿ ಅಂತಿಮ ಕಣದಲ್ಲಿದ್ದಾರೆ.

ಕಂಪನಿಯಿಂದ 1.5 ಕೋಟಿ ವಂಚನೆ

ದೂರಿನಲ್ಲಿ ತಿಳಿಸಲಾಗಿದೆ. ನಂತರ ವೈದ್ಯಕೀಯ ಉಪಕರಣಗಳು ಸಿದ್ಧವಾಗಿದ್ದು, ಮಂಡ್ಯಕ್ಕೆ ಕಳುಹಿಸಿಕೊಡುತ್ತಿದ್ದೇವೆ ಎಂದು ತಿಳಿಸಿದ ಪಶ್ಚಿಮ ಬಂಗಾಳ ಕಂಪನಿಯವರು ಕರಾರಿನಂತೆ 1 ಕೋಟಿ ರೂ. ತಕ್ಷಣ ಪಾವತಿಸಬೇಕೆಂದು ಕೇಳಿದ ಮೇರೆಗೆ ಉನ್ನತಿ ಗ್ಲೋಬಲ್ ಹೆಲ್ತ್‌ಕೇರ್ 1 ಕೋಟಿ ರೂ.ಗಳನ್ನು ವರ್ಗಾವಣೆ ಮಾಡಿದೆ.

ಉಳಿಕೆ ಹಣವನ್ನು ನೀಡಲು ತಾವು ಸಿದ್ಧವಿದ್ದರೂ, ಪಶ್ಚಿಮ ಬಂಗಾಳ ಕಂಪನಿ ವೈದ್ಯಕೀಯ ಉಪಕರಣಗಳನ್ನು ತಾವು ಕಳುಹಿಸಿಲ್ಲ. ತಮಗೆ ಈ ಉಪಕರಣಗಳನ್ನು ಸರಬರಾಜು ಮಾಡುವ ಚೈತನ್ಯವಿಲ್ಲ ಎಂದು ಒಪ್ಪಿಕೊಂಡ ಕಂಪನಿಯು ಕರಾರು ಪತ್ರದಲ್ಲಿರುವಂತೆ ಬಡ್ಡಿ ಸಮೇತ 1.5 ಕೋಟಿ ರೂ. ನೀಡುವುದಾಗಿ ತಿಳಿಸಿತ್ತು. ಆ ಕಂಪನಿಯು ನೀಡಿದ 3 ಚೆಕ್‌ಗಳು ಬೌನ್ಸ್ ಆಗಿವೆ. ನಮಗೆ ವೈದ್ಯಕೀಯ ಉಪಕರಣ ಸರಬರಾಜು ಮಾಡುವುದಾಗಿ ನಂಬಿಸಿ ಎಲೆಕ್ಟ್ರಾನಿಕ್ ಕಂಪನಿಯ ಛೇರ್ಮನ್ ಕೌಶಿಕ್ ಗಂಗೂಲಿ, ನಿರ್ದೇಶಕರಾದ ಅಂಜನಾ ಗಂಗೂಲಿ, ಸುಮನ್ ದಾಸ್, ಸುಧೀರ್ ಕುಮಾರ್ ವಂಚಿಸಿದ್ದಾರೆ ಎಂದು ಸುಹಾಸ್ ನೀಡಿದ ದೂರಿನನ್ವಯ ಪಶ್ಚಿಮ ಬಂಗಾಳ ಕಂಪನಿಯ ಛೇರ್ಮನ್ ಸೇರಿದಂತೆ ಐವರು ನಿರ್ದೇಶಕರ ವಿರುದ್ಧ ಭಾರತೀಯ ದಂಡ ಸಂಹಿತೆ 406, 422 ಪ್ರಕಾರ ದಾಖಲಿಸಿ ಕೊಂಡಿರುವ ಮಂಡ್ಯ ಪಶ್ಚಿಮ ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ದಕ್ಷಿಣ ಪದವೀಧರ ಕ್ಷೇತ್ರದಿಂದ ಪರಿಷತ್ ಚುನಾವಣೆ

ಬಿಜೆಪಿ, ಜೆಡಿಎಸ್, ಕಾಂಗ್ರೆಸ್, ಪಕ್ಷೇತರರಿಂದಲೂ ಬಿರುಸಿನ ಮತಬೇಟೆ

ಮೈಸೂರು, ಜೂ.3(ಎಸ್‌ಬಿಡಿ)– ದಕ್ಷಿಣ ಪದವೀಧರ ಕ್ಷೇತ್ರದಿಂದ ವಿಧಾನ ಪರಿಷತ್‌ಗೆ ಚುನಾವಣೆ ಸಮೀಪಿಸುತ್ತಿರುವ ಹಿನ್ನೆಲೆಯಲ್ಲಿ ಅಭ್ಯರ್ಥಿಗಳು, ರಾಜಕೀಯ ಪಕ್ಷಗಳ ಮುಖಂಡರು ಹಾಗೂ ಬೆಂಬಲಿಗರ ಪ್ರಚಾರ ವೇಗ ಪಡೆದಿದೆ.

ಜೆಡಿಎಸ್ ಅಭ್ಯರ್ಥಿ ಹೆಚ್.ಕೆ.ರಾಮು, ಬಿಜೆಪಿ ಅಭ್ಯರ್ಥಿ ಎಂ.ವಿ.ರವಿಶಂಕರ್, ಕಾಂಗ್ರೆಸ್ ಅಭ್ಯರ್ಥಿ ಮಧು ಎಂ.ಮಾದೇಗೌಡ, ಪಕ್ಷೇತರ ಅಭ್ಯರ್ಥಿ ಎನ್.ಎಸ್.ವಿನಯ್ ಸೇರಿದಂತೆ ಎಲ್ಲಾ ಅಭ್ಯರ್ಥಿಗಳೂ ಮತದಾರರನ್ನು ಭೇಟಿಯಾಗಿ ಮತಯಾಚನೆ ಮಾಡುತ್ತಿದ್ದಾರೆ. ಕೆಲವೆಡೆ ಮತದಾರರನ್ನು ಒಂದು ಸ್ಥಳದಲ್ಲಿ ಒಗ್ಗೂಡಿಸಿ, ಬೆಂಬಲ ಕೋರುತ್ತಿದ್ದಾರೆ. ಎಲ್ಲಾ ಪಕ್ಷಗಳ ನಾಯಕರು, ಮುಖಂಡರು ಪ್ರತ್ಯೇಕವಾಗಿಯೂ ತಮ್ಮ ಅಭ್ಯರ್ಥಿ ಪರವಾಗಿ ಮತಬೇಟೆ ನಡೆಸುತ್ತಿದ್ದಾರೆ.

ಜಿಟಿಡಿ ಬೆಂಬಲ ಕೋರಿದ ರಾಮು: ಮೈಸೂರು ನ್ಯಾಯಾಲಯ ಆವರಣದಲ್ಲಿ ವಕೀಲರನ್ನು ಭೇಟಿ ಮಾಡಿ, ಮತಯಾಚಿಸಿದ ಜೆಡಿಎಸ್ ಅಭ್ಯರ್ಥಿ ಹೆಚ್.ಕೆ.ರಾಮು, ಆಕಸ್ಮಿಕವಾಗಿ ಸಿಕ್ಕ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರ ಬೆಂಬಲ ಕೋರಿದರು. ಆರ್‌ಟಿಓ ಬಳಿ ಇರುವ ವಕೀಲ ಪಾಲಾಕ್ಷ ಅವರ ಮನೆಗೆ ಜಿಟಿಡಿ ಭೇಟಿ ನೀಡಿದ್ದರು. ಅದೇ ವೇಳೆ ಮತಯಾಚನೆಗೆ ಆಗಮಿಸಿದ ಹೆಚ್.ಕೆ.ರಾಮು, ಬೆಂಬಲ ನೀಡಿ ಗೆಲುವಿಗೆ ಸಹಕರಿಸುವಂತೆ ಜಿಟಿಡಿ ಅವರಲ್ಲಿ ಮನವಿ ಮಾಡಿದರು.

ಇದಕ್ಕೂ ಮುನ್ನ ಹೆಚ್.ಕೆ.ರಾಮು, ಪೊಲೀಸ್ ಕವಾಯತು ಮೈದಾನ, ಕರ್ನಾಟಕ ಪೊಲೀಸ್ ಅಕಾಡೆಮಿಗೆ ಭೇಟಿ ನೀಡಿ, ಪೊಲೀಸ್ ಸಿಬ್ಬಂದಿಯ ಮತ ಯಾಚಿಸಿದರು. ಚಾಮರಾಜನಗರದಲ್ಲಿ ವಿಧಾನಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ, ತಿ.ನರಸೀಪುರದಲ್ಲಿ ಶಾಸಕ ಅಶ್ವಿನ್‌ಕುಮಾರ್, ಪಿರಿಯಾಪಟ್ಟಣದಲ್ಲಿ ಶಾಸಕ ಕೆ.ಮಹದೇವ್ ಹೆಚ್.ಕೆ.ರಾಮು ಪರವಾಗಿ ಪ್ರಚಾರ ನಡೆಸಿದರು.

ಬಿಜೆಪಿ ಬಿರುಸಿನ ಪ್ರಚಾರ: ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್, ಸಂಸದ ಪ್ರತಾಪ್ ಸಿಂಹ, ಶಾಸಕರಾದ ಎಸ್.ಎ. ರಾಮದಾಸ್, ಎಲ್.ನಾಗೇಂದ್ರ ಸೇರಿದಂತೆ ಎಲ್ಲಾ ಮುಖಂಡರೂ ತಮ್ಮ ಕಾರ್ಯ ವ್ಯಾಪ್ತಿಯಲ್ಲಿ ತಮ್ಮ ಅಭ್ಯರ್ಥಿ ಎಂ.ವಿ.ರವಿಶಂಕರ್ ಪರವಾಗಿ ಭಾರೀ ಪ್ರಚಾರದಲ್ಲಿ ತೊಡಗಿದ್ದು, ಮತ್ತೊಂದೆಡೆ ಅಭ್ಯರ್ಥಿಯೂ ಮತಯಾಚನೆ ನಡೆಸುತ್ತಿದ್ದಾರೆ.

ಮೈಸೂರಿನ ಕುವೆಂಪುನಗರದಲ್ಲಿ ಸುಮಾರು 6 ಸಾವಿರ ಪದವೀಧರ ಮತದಾರರಿದ್ದು, ಬಿಜೆಪಿ ಪ್ರಮುಖರು ಹಾಗೂ ಕಾರ್ಯಕರ್ತರು ಮನೆ ಮನೆಗೆ ಭೇಟಿ ನೀಡಿ ಬೆಂಬಲ ಕೋರಿದ್ದಾರೆ. ಇಂದು ರಾತ್ರಿ ಕುವೆಂಪುನಗರದ ಹೋಟೆಲ್ ಸಭಾಂಗಣದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್, ಸಂಸದ ಪ್ರತಾಪ್ ಸಿಂಹ ಹಾಗೂ ಅಭ್ಯರ್ಥಿ ಎಂ.ವಿ.ರವಿಶಂಕರ್, ಮತದಾರರ ಸಭೆ ನಡೆಸಿ, ಮತಯಾಚನೆ ಮಾಡಿದರು.

ಅಲ್ಲದೆ ಜೆಎಸ್‌ಎಸ್ ವೈದ್ಯಕೀಯ ಕಾಲೇಜು, ನರ್ಸಿಂಗ್ ಕಾಲೇಜು, ವಾಕ್ ಮತ್ತು ಶ್ರವಣ ಸಂಸ್ಥೆ, ಮಹಾರಾಣಿ ಕಾಲೇಜು, ಸಂತ ಫಿಲೋಮಿನಾ ಕಾಲೇಜು, ಸದ್ವಿದ್ಯಾ ಸೆಮಿ ರೆಸಿಡೆನ್ಷಿಯಲ್ ಕಾಲೇಜು ಸೇರಿದಂತೆ ವಿವಿಧ ಶಿಕ್ಷಣ ಸಂಸ್ಥೆಗಳಿಗೆ ಎಂ.ವಿ. ರವಿಶಂಕರ್ ಭೇಟಿ ನೀಡಿ, ಮತದಾರರನ್ನು ಭೇಟಿ ಮಾಡಿ ಮತ ನೀಡುವಂತೆ ಮನವಿ ಮಾಡಿದರು. ಪಿರಿಯಾಪಟ್ಟಣದ ಡಾ.ಅಂಬೇಡ್ಕರ್ ವಸತಿ ಶಾಲೆ, ಆದಿಚುಂಚನಗಿರಿ ಶಾಲೆ, ಬಾಲಕಿಯರ ಪ್ರೌಢಶಾಲೆ, ಜಿಜೆಸಿಪಿ ಬಾಲಕರ ಶಾಲೆ, ಪುಷ್ಪ ಶಾಲೆ, ಸರ್ಕಾರಿ ಪದವಿಪೂರ್ವ ಕಾಲೇಜು ಹಾಗೂ ತಾಲೂಕು ವಕೀಲರ ಸಂಘದಲ್ಲಿ ಸಂಸದ ಪ್ರತಾಪ್ ಸಿಂಹ, ಎಂ.ವಿ. ರವಿಶಂಕರ್ ಪರ ಮತಯಾಚನೆ ಮಾಡಿದರು.

ಕೈ ಹಿಡಿಯುವಂತೆ ಮನವಿ: ಕಾಂಗ್ರೆಸ್ ಅಭ್ಯರ್ಥಿ ಮಧು ಜಿ.ಮಾದೇಗೌಡ, ಮೈಸೂರಿನ ಎಂಐಟಿ ಪ್ರಥಮ ದರ್ಜೆ ಕಾಲೇಜು, ವಿದ್ಯಾವರ್ಧಕ ಕಾಲೇಜು, ಸರ್ಕಾರಿ ಪದವಿ ಕಾಲೇಜು ಸೇರಿದಂತೆ ಹಲವು ಶಿಕ್ಷಣ ಸಂಸ್ಥೆಗಳಿಗೆ ಭೇಟಿ ನೀಡಿ ಚುನಾವಣೆಯಲ್ಲಿ ಕೈ ಹಿಡಿದು, ವಿಧಾನಪರಿಷತ್‌ನಲ್ಲಿ ತಮ್ಮ ಪರವಾಗಿ ಕಾರ್ಯ ನಿರ್ವಹಿಸಲು ಅವಕಾಶ ನೀಡುವಂತೆ ವಿನಮ್ರವಾಗಿ ಕೇಳಿಕೊಂಡರು.

ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಸೇರಿದಂತೆ ಕಾಂಗ್ರೆಸ್‌ನ ಹಲವು ಮುಖಂಡರು ಹಲವೆಡೆ ಮಧು ಜಿ.ಮಾದೇಗೌಡರ ಪರವಾಗಿ ಮತಯಾಚನೆ ಮಾಡಿದರು. ಅಲ್ಲದೆ ಮೈಸೂರಿನ ಆಶೀರ್ವಾದ ನಗರ, ಕುವೆಂಪುನಗರ, ವಿದ್ಯಾರಣ್ಯಪುರಂ, ಆಶ್ರಯ ಲೇಔಟ್, ವಿಜಯನಗರ ಮತ್ತು ಆನಂದನಗರ ಸೇರಿದಂತೆ ವಿವಿಧ ಬಡಾವಣೆಗಳು, ತಿ.ನರಸೀಪುರ, ಹುಣಸೂರು, ಕೆಆರ್.ನಗರ, ಪಿರಿಯಾಪಟ್ಟಣ, ಹೆಚ್.ಡಿ.ಕೋಟೆ ತಾಲೂಕಿನಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಹಾಗೂ ಅಭ್ಯರ್ಥಿಯ ಬೆಂಬಲಿಗರು ಬಿರುಸಿನ ಪ್ರಚಾರ ನಡೆಸಿದರು.

ಮತದಾರರ ಭೇಟಿ ಮಾಡಿದ ವಿನಯ್ : ಚುನಾವಣೆಯಲ್ಲಿ ಗೆಲ್ಲುವ ವಿಶ್ವಾಸದೊಂದಿಗೆ ಹಲವು ತಿಂಗಳಿಂದಲೇ ತಯಾರಿ ನಡೆಸುತ್ತಿದ್ದ ಪಕ್ಷೇತರ ಅಭ್ಯರ್ಥಿ ಎನ್.ಎಸ್. ವಿನಯ್, ಮೈಸೂರಿನಲ್ಲಿ ಕಚೇರಿ ತೆರೆದು ಭಾರೀ ಪ್ರಚಾರದಲ್ಲಿ ತೊಡಗಿದ್ದಾರೆ. ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನ, ಮಾನಸ ಗಂಗೋತ್ರಿ, ಕರ್ನಾಟಕ ರಾಜ್ಯ ಮುಕ್ತ ವಿವಿ ಕಾರ್ಯಾಲಯ, ಮುಕ್ತ ಗಂಗೋತ್ರಿ ಕ್ಯಾಂಪಸ್‌ನ ಎಲ್ಲಾ ವಿಭಾಗಗಳಿಗೆ ಸೋಮಶೇಖರ್ ಇನ್ನಿತರ ಬೆಂಬಲಿಗರೊಂದಿಗೆ ಭೇಟಿ ನೀಡಿದ ವಿನಯ್, ವಿಧಾನ ಪರಿಷತ್‌ನಲ್ಲಿ ಧ್ವನಿ ಎತ್ತಲು ಅವಕಾಶ ಮಾಡಿಕೊಡುವಂತೆ ಮನವಿ ಮಾಡಿಕೊಂಡರು.



ಜೆಡಿಎಸ್ ಅಭ್ಯರ್ಥಿ ಹೆಚ್.ಕೆ.ರಾಮು, ವಕೀಲರೊಬ್ಬರ ಮನೆಯಲ್ಲಿ ಶಾಸಕ ಜಿ.ಟಿ.ದೇವೇಗೌಡರನ್ನು ಭೇಟಿಯಾಗಿ ಬೆಂಬಲ ಕೋರಿದರು.



ಬಿಜೆಪಿ ಅಭ್ಯರ್ಥಿ ಎಂ.ವಿ.ರವಿಶಂಕರ್ ಪರ ಪಿರಿಯಾಪಟ್ಟಣದಲ್ಲಿ ಸಂಸದ ಪ್ರತಾಪ್ ಸಿಂಹ ಮತಯಾಚಿಸಿದರು.



ಮೈಸೂರಿನ ವಿವಿಧ ಶಿಕ್ಷಣ ಸಂಸ್ಥೆಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿ ಮಧು ಜಿ.ಮಾದೇಗೌಡ ಬೆಂಬಲ ಕೋರಿದರು.



ಮಾನಸ ಗಂಗೋತ್ರಿಯಲ್ಲಿ ಪಕ್ಷೇತರ ಅಭ್ಯರ್ಥಿ ಎನ್.ಎಸ್.ವಿನಯ್ ಮತಯಾಚಿಸಿದರು.

ಬೈಸಿಕಲ್ ಬಳಸಿ– ಪರಿಸರ ಉಳಿಸಿ ಸಂದೇಶ ಸಾರಿದ ಬೈಸಿಕಲ್ ರ್‍ಯಾಲಿ

ವಿಶ್ವ ಬೈಸಿಕಲ್ ದಿನಾಚರಣೆಯಲ್ಲಿ ನೂರಕ್ಕೂ ಹೆಚ್ಚು ಸೈಕಲ್ ಸವಾರರು ಭಾಗಿ



ಮೈಸೂರು, ಜೂನ್ 3 (ಆರ್‌ಕೆಬಿ)– 'ಬೈಸಿಕಲ್ ಬಳಸಿ– ಪರಿಸರ ಉಳಿಸಿ' ಎಂಬ ಸಂದೇಶದೊಂದಿಗೆ ಶುಕ್ರವಾರ ನೂರಕ್ಕೂ ಹೆಚ್ಚು ಸೈಕಲ್ ಸವಾರರು ಬೈಸಿಕಲ್ ರ್‍ಯಾಲಿ ಮೂಲಕ ಮೈಸೂರಿನ ಪ್ರಮುಖ ರಸ್ತೆ, ವೃತ್ತಗಳಲ್ಲಿ ಸಾಗಿ 'ವಿಶ್ವ ಬೈಸಿಕಲ್ ದಿನ'ವನ್ನು ಆಚರಿಸಿದರು.

ಸ್ವಾತಂತ್ರ್ಯದ ಅಮೃತ ಮಹೋತ್ಸವದ ಅಂಗವಾಗಿ ಮೈಸೂರಿನ ನೆಹರು ಯುವ ಕೇಂದ್ರ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಮೈಸೂರು ವಿವಿ ರಾಷ್ಟ್ರೀಯ ಸೇವಾ ಯೋಜನೆ, ಸೈಕ್ಲಿಂಗ್ ಮೈ-ಸೂರು ತರಬೇತಿ ಅಕಾಡೆಮಿ ಜಂಟಿಯಾಗಿ ಈ ಕಾರ್ಯಕ್ರಮ ಆಯೋಜಿಸಿತ್ತು.

15ರಿಂದ 60 ವರ್ಷದೊಳಗಿನ ಸೈಕಲ್ ಸವಾರರು 7.5 ಕಿ.ಮೀ ದೂರವನ್ನು ಕ್ರಮಿಸಿ, ವಿಶ್ವ ಬೈಸಿಕಲ್ ದಿನಾಚರಣೆಯ ಮಹತ್ವ ಸಾರಿದರು. ಕೋಟೆ ಆಂಜನೇಯಸ್ವಾಮಿ ದೇವಸ್ಥಾನದಿಂದ ಹೊರಟ ರ್‍ಯಾಲಿ ಹಾರ್ಡಿಂಜ್ ವೃತ್ತ, ಗನ್ ಹೌಸ್, ಸಂಸ್ಕೃತ ಪಾಠಶಾಲೆ, ರಾಮಸ್ವಾಮಿ ವೃತ್ತ, ಜಿಲ್ಲಾಧಿಕಾರಿ ಕಚೇರಿ ಹಿಂಭಾಗದ ರಸ್ತೆ, ಹುಣಸೂರು ರಸ್ತೆ ಫೀಲ್ಡ್ ಮಾರ್ಷಲ್ ಕೆ.ಎಂ.ಕಾರಿಯಪ್ಪ ವೃತ್ತ, ರೈಲ್ವೆ ನಿಲ್ದಾಣ ವೃತ್ತ, ಕೆ.ಆರ್.ಆಸ್ಪತ್ರೆ ರಸ್ತೆ, ಹೆಡ್ ಪೋಸ್ಟ್ ಆಫೀಸ್ ವೃತ್ತ ಅಶೋಕ ರಸ್ತೆ ಮೂಲಕ ಸಾಗಿ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಬಳಿ ಆಗಮಿಸಿ ಅಂತ್ಯಗೊಂಡಿತು. ಆರಂಭ ಸ್ಥಳದಲ್ಲಿ ಅಂತ್ಯಗೊಂಡಿತು.

ಇದಕ್ಕೂ ಮುನ್ನ ಡಿಎಚ್‌ಓ ಡಾ.ಕೆ.ಹೆಚ್. ಪ್ರಸಾದ್ ಅವರು ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಬಳಿ ರ್‍ಯಾಲಿಗೆ ಚಾಲನೆ ನೀಡಿದರು. ಡಿಎಚ್‌ಓ ಡಾ.ಪ್ರಸಾದ್ ಮತ್ತು ಯುವಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕ ಕೆ.ಸುರೇಶ್ ಅವರು ಎಲ್ಲಾ ಸೈಕಲ್ ಸವಾರರಿಗೆ ಪ್ರಮಾಣ ವಚನ ಬೋಧಿಸಿದರು.

ನಾನು ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ ಏರ್ಪಡಿಸಿರುವ ಅಂತರ ರಾಷ್ಟ್ರೀಯ ಬೈಸಿಕಲ್ ದಿನದ ಕಾರ್ಯಕ್ರಮದಲ್ಲಿ ಸ್ವಯಂ ಸ್ಫೂರ್ತಿಯಿಂದ ಪಾಲ್ಗೊಂಡಿದ್ದೇನೆ. ನಾನು ಈ ದಿನದಿಂದ ಸಾಧ್ಯವಾದಷ್ಟು ಸೈಕಲ್ ಅನ್ನು ಬಳಸುವ ಶಪಥ ಮಾಡುತ್ತೇನೆ. ಕಾರಣವೇನೆಂದರೆ ಸೈಕಲ್ ಬಳಸುವುದರಿಂದ ದೈಹಿಕ, ಮಾನಸಿಕ ಆರೋಗ್ಯ ವೃದ್ಧಿಯಾಗುತ್ತದೆ. ಇದು ಪರಿಸರ ಸ್ನೇಹಿಯಾಗಿದೆ. ಕಡಿಮೆ ಖರ್ಚಿನದಾಗಿದೆ. ಹಾಗಾಗಿ ನನ್ನ ದಿನ ನಿತ್ಯದ ಚಟುವಟಿಕೆಗಳಲ್ಲಿ ಸೈಕಲ್ ಉಪಯೋಗವನ್ನು ಹೆಚ್ಚಿಸುತ್ತೇನೆ, ಸೈಕಲ್ ಉಪಯೋಗಿಸುವಂತೆ ಇತರರನ್ನು ಉತ್ತೇಜಿಸುತ್ತೇನೆ ಎಂದು ಸೈಕಲ್ ಸವಾರರು ಪ್ರತಿಜ್ಞೆ ಮಾಡಿದರು.

ಬಳಿಕ ರ್‍ಯಾಲಿಯಲ್ಲಿ ಭಾಗವಹಿಸಿದ್ದ ಎಲ್ಲಾ ಸೈಕಲ್ ಸವಾರರಿಗೂ ಪ್ರಮಾಣಪತ್ರಗಳನ್ನು ವಿತರಿಸಲಾಯಿತು. ಮೈಸೂರು ವಿವಿ ಎನ್‌ಎಸ್‌ಎಸ್ ಸಂಯೋಜಕ ಡಾ..ಎಂ.ಬಿ. ಸುರೇಶ್, ಅರ್ಜುನ ಪ್ರಶಸ್ತಿ ಪುರಸ್ಕೃತ ಹಾಗೂ ಅಂತಾರಾಷ್ಟ್ರೀಯ ಕ್ರೀಡಾ ತರಬೇತುದಾರ ಅರುಣಕುಮಾರ್ ಎಚ್.ಪಾಟೀಲ್, ನೆಹರು ಯುವ ಕೇಂದ್ರ ಮೈಸೂರು ಜಿಲ್ಲಾ ಯುವಜನ ಅಧಿಕಾರಿ ವಿನಯ್‌ಕುಮಾರ್, ಸೈಕ್ಲಿಂಗ್ ಮೈ-ಸೂರು ತರಬೇತಿ ಅಕಾಡೆಮಿಯ ತರಬೇತುದಾರ ಟಿ.ವಿ.ನಾಗರಾಜ್, ಕಾರ್ಯಕ್ರಮ ಮೇಲ್ವಿಚಾರಕ ಚಿನ್ನಗಿರಿಗೌಡ, ಕನಕ ಮಹಿಳಾ ಮಂಡಳಿ ಅಧ್ಯಕ್ಷೆ ಕಮಲಾ, ಚಾಮುಂಡೇಶ್ವರಿ ಮಹಿಳಾ ಸಂಘದ ಅಧ್ಯಕ್ಷೆ ಸೀಮಾ, ಕಾರ್ಯದರ್ಶಿ ಅಂಬಿಕಾ, ನನ್ನವ್ವೆ ಮಹದೇವ ಇನ್ನಿತರರು ಉಪಸ್ಥಿತರಿದ್ದರು.

ಆಯ್ಕೆಯಾದರೆ ಪಿಂಚಣಿ ಲೋಪದೋಷ ಸರಿಪಡಿಸಲು ಹೋರಾಡುವೆ

ಜೆಡಿಎಸ್ ಅಭ್ಯರ್ಥಿ ಹೆಚ್.ಕೆ.ರಾಮು ಭರವಸೆ



ಮೈಸೂರು, ಜೂ.3(ಆರ್‌ಕೆಬಿ)– ದಕ್ಷಿಣ ಪದವೀಧರ ಕ್ಷೇತ್ರದಿಂದ ವಿಧಾನ ಪರಿಷತ್ ಚುನಾವಣೆಯಲ್ಲಿ ಜೆಡಿಎಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿರುವ ತಮ್ಮನ್ನು ಮತದಾರರು ಚುನಾಯಿಸಿದರೆ ಈಗಿನ ಲೋಪಯುಕ್ತ ಪಿಂಚಣಿ ವ್ಯವಸ್ಥೆ ವಿರುದ್ಧ ಹೋರಾಟ ನಡೆಸುವುದಾಗಿ ಹೆಚ್.ಕೆ.ರಾಮು ಭರವಸೆ ನೀಡಿದರು.

ಮೈಸೂರು ಪತ್ರಕರ್ತರ ಭವನದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈಗಿನ ಎನ್‌ಪಿಎಸ್ ಪದ್ಧತಿಯಿಂದ ನಿವೃತ್ತರಿಗೆ ಸಾಕಷ್ಟು ಪಿಂಚಣಿ ದೊರೆಯುತ್ತಿಲ್ಲ. ಹೀಗಾಗಿ ಅದನ್ನು ರದ್ದು ಪಡಿಸಿ ಹಿಂದಿನ ಪಿಂಚಣಿ ವ್ಯವಸ್ಥೆ ಜಾರಿಗೊಳಿಸಬೇಕೆಂಬ ವಿಷಯ ನನೆಗುದಿಗೆ ಬಿದ್ದಿದೆ ವಕೀಲರು, ನಿರುದ್ಯೋಗಿ ಪದವೀಧರು ಸಮಸ್ಯೆಯಲ್ಲಿದ್ದಾರೆ ಹೀಗಾಗಿ ತಮಗೆ ಈ ಸಮಸ್ಯೆಯ ಅರಿವಿದ್ದು ಚುನಾಯಿತರಾದಲ್ಲಿ ಹೋರಾಟ ನಡೆಸುವುದಾಗಿ ತಿಳಿಸಿದರು. ತಮ್ಮನ್ನು ಅಭ್ಯರ್ಥಿಯನ್ನಾಗಿ ಆಯ್ಕೆ ಮಾಡಿರುವುದರಿಂದಾಗಿ ಬೇಸರಗೊಂಡಿರುವ ಮರಿತಿಬ್ಬೇಗೌಡ ಅವರೊಡನೆ ಮಾತನಾಡಿ ಭಿನ್ನಾಭಿಪ್ರಾಯ ಸರಿಪಡಿಸಲಾಗುವುದು ಎಂದರು.

ಬೆಂಗಳೂರು ವಕೀಲರ ಸಂಘದ ಅಧ್ಯಕ್ಷ ಎ.ಪಿ.ರಂಗನಾಥ್ ಮಾತನಾಡಿ, ರಾಜ್ಯದಲ್ಲಿ ವಕೀಲರ ಮೇಲೆ ನಡೆಯುವ ಹಲ್ಲೆ ತಪ್ಪಿಸುವ ಉದ್ದೇಶದ ವಕೀಲರ ರಕ್ಷಣಾ ಕಾಯ್ದೆ ಜಾರಿಗೊಳಿಸಬೇಕೆಂಬ ಬೇಡಿಕೆ ಹಾಗೇ ಉಳಿದಿದೆ. ಈಗಿನ ಬಿಜೆಪಿ ಸರ್ಕಾರಕ್ಕೆ ಈ ಬಗ್ಗೆ ಆಸಕ್ತಿಯಿಲ್ಲ. ಜೊತೆಗೆ, ಪಿಎಸ್‌ಐ ನೇಮಕಾತಿ ಪರೀಕ್ಷೆ ಹಗರಣದಂತಹ ಅನೇಕ ಹಗರಣಗಳು ರಾಜ್ಯದಲ್ಲಿ ಬಿಜೆಪಿ ಸರ್ಕಾರದ ಅವಧಿ ವೇಳೆ ನಡೆದಿವೆ ಅಲ್ಲದೆ ಬಸವಣ್ಣ ಅಂಬೇಡ್ಕರ್, ಕುವೆಂಪು ಅವರನ್ನು ಅವಹೇಳನ ಮಾಡಲಾಗುತ್ತಿದೆ ಹೀಗಾಗಿ ಮತದಾರರು ಬಿಜೆಪಿ ಅಭ್ಯರ್ಥಿಯನ್ನು ಚುನಾಯಿಸದೇ ಎಚ್.ಕೆ. ರಾಮು ಅವರಿಗೆ ಮತ ನೀಡಬೇಕೆಂದು ಮನವಿ ಮಾಡಿದರು. ಸುದ್ದಿಗೋಷ್ಠಿಯಲ್ಲಿ ರಂಗನಾಥ್, ಗಂಗಾಧರ್, ನಾಗರಾಜ್, ಇನ್ನಿತರರು ಉಪಸ್ಥಿತರಿದ್ದರು.

ಕಮಲಾಪುರ ಬಳಿ ಬಸ್ಸು ಅಪಘಾತ; ಏಳು ಪ್ರಯಾಣಿಕರು ಸಜೀವ ದಹನ

ಕಲಬುರಗಿ/ಬೆಂಗಳೂರು, ಜೂ.3– ಕಲಬುರಗಿಯಿಂದ ಸುಮಾರು 35 ಕಿ.ಮೀ ದೂರದಲ್ಲಿರುವ ಕಮಲಾಪುರ ಪಟ್ಟಣದ ಬಳಿ ಶುಕ್ರವಾರ ಬೆಳಗ್ಗೆ ಹೈದರಾಬಾದ್‌ಗೆ ತೆರಳುತ್ತಿದ್ದ ಗೋವಾ ಬಸ್ಸೊಂದು ಸರಕು ಸಾಗಣೆ ವಾಹನಕ್ಕೆ ಮುಖಾಮುಖಿ ಡಿಕ್ಕಿ ಹೊಡೆದು ನಂತರ ರಸ್ತೆ ಬದಿಯ ಸೇತುವೆಗೆ ಅಪ್ಪಳಿಸಿ ಉರುಳಿಬಿದ್ದ ಪರಿಣಾಮ ಕನಿಷ್ಠ 7 ಜನರು ಸಾವನ್ನಪ್ಪಿದ್ದಾರೆ ಮತ್ತು ಅನೇಕ ಮಂದಿ ಗಾಯಗೊಂಡಿದ್ದಾರೆ. ಮೃತರಲ್ಲಿ ಇಬ್ಬರು ಮಕ್ಕಳು ಸೇರಿದ್ದಾರೆ ಎಂದು ತಿಳಿದುಬಂದಿದೆ.

ಬಸ್ ಸೇತುವೆಗೆ ಅಪ್ಪಳಿಸಿದ ನಂತರ ಅದರ ಡೀಸೆಲ್ ಟ್ಯಾಂಕ್ ಹಾನಿಗೊಂಡಿದೆ ಮತ್ತು ಇದ್ದಕ್ಕಿದ್ದಂತೆ ಬಸ್‌ಗೆ ಬೆಂಕಿ ಹೊತ್ತಿಕೊಂಡಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ. ಬಸ್‌ನಲ್ಲಿ ಒಟ್ಟು 35 ಜನರಿದ್ದು, ಎಲ್ಲರೂ ತೆಲಂಗಾಣ ಮೂಲದವರು. ಒಂದೇ ಕುಟುಂಬದ 20 ಮಂದಿ ಸೀಟುಗಳನ್ನು ಬುಕ್ ಮಾಡಿದ್ದು, ಮತ್ತೊಬ್ಬರು 6 ಸೀಟುಗಳನ್ನು ಬುಕ್ ಮಾಡಿದ್ದರು ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಮೈಸೂರು ಬಸ್ ನಿಲ್ದಾಣಕ್ಕೆ ಬಂದವರಿಗೆ ಸ್ವಾಗತ ಕೋರುತ್ತಿವೆ ದುರ್ನಾತ ಬೀರುತ್ತಿರುವ ಗುಂಡಿಗಳು

ಮೂಗು ಮುಚ್ಚಿಕೊಂಡು, ಜೀವ ಬಿಗಿ ಹಿಡಿದು ಓಡಾಡುವ ಪರಿಸ್ಥಿತಿ ಇದ್ದರೂ ಇದಾವುದೂ ಕಾರ್ಪೊರೇಟರ್, ಕಾರ್ಪೊರೇಷನ್ ಅಧಿಕಾರಿಗಳ ಕಣ್ಣಿಗೆ ಬಿದ್ದಿಲ್ಲ!?





ಮೈಸೂರು, ಜೂ.3(ಜಿಎ)– ಮೈಸೂರಿನ ಗ್ರಾಮಾಂತರ ಬಸ್ ನಿಲ್ದಾಣದ ಮುಂಭಾಗವಿರುವ ಬೆಂಗಳೂರು–ಮೈಸೂರು ನೀಲಗಿರಿ ರಸ್ತೆಯಲ್ಲಿ ಸಾರ್ವಜನಿಕರು ಮೂಗು ಮುಚ್ಚಿಕೊಂಡು ಓಡಾಡುವ ಸ್ಥಿತಿಯಿದ್ದು, ಮತ್ತೊಂದೆಡೆ ಭಾರೀ ಗುಂಡಿಗಳು ಅಪಾಯಕ್ಕೆ ಆಹ್ವಾನ ನೀಡಲು ಕಾದಿವೆ.

ಮೈಸೂರು ನಗರದ ಹೃದಯ ಭಾಗವಾಗಿರುವ ಗ್ರಾಮಾಂತರ ಬಸ್ ನಿಲ್ದಾಣದಿಂದ ಹೊರ ಜಿಲ್ಲೆ, ರಾಜ್ಯಗಳಿಗೆ ಪ್ರತಿನಿತ್ಯ ನೂರಾರು ಬಸುಗಳು ಸಂಚರಿಸುತ್ತವೆ. ಅದರಂತೆ ಇಲ್ಲಿಗೆ ಸಾವಿರಾರು ಮಂದಿ ಗ್ರಾಮಾಂತರ ಬಸ್ ನಿಲ್ದಾಣಕ್ಕೆ ಬರುತ್ತಾರೆ. ಇಂತಹ ಬಸ್ ನಿಲ್ದಾಣದ ಮುಂಭಾಗ ಎತ್ತ ನೋಡಿದರು ಕೊಳಚೆ ನೀರು ಗಬ್ಬು ವಾಸನೆ ಬೀರುತ್ತಿದೆ ರಸ್ತೆಯ ಸ್ಥಿತಿಯಂತು ಕೇಳುವ ಹಾಗೇ ಇಲ್ಲ. ದೊಡ್ಡ ಮಟ್ಟದ ಗುಂಡಿಗಳು ಯಾರನ್ನಾದರೂ ಬಲಿ ಪಡೆಯಲು ಕಾದಿರುವ ರಾಕ್ಷಸನಂತೆ ಬಾಯಿ ತೆರೆದು ನಿಂತಿವೆ.

ನಗರದ ಗ್ರಾಮಾಂತರ ಬಸ್ ನಿಲ್ದಾಣಕ್ಕೆ ಹೊರಗಿನಿಂದ ಬರುವ ಜನರು ಹಾಗೂ ಈ ರಸ್ತೆಯಲ್ಲಿ ಓಡಾಡುವ ವಾಹನ ಸವಾರರು ನೀಲಗಿರಿ ರಸ್ತೆ ಬಳಿ ಬಂದ ತಕ್ಷಣ ಮೊದಲು ಮಾಸ್ಕ್ ಮೂಲಕ ಮೂಗು ಮುಚ್ಚಿಕೊಳ್ಳುತ್ತಾರೆ. ಅದು ಕೊರೊನಾಗೆ ಹೆದರಲ್ಲ. ನಿಲ್ದಾಣದ ಸುತ್ತ ಮುತ್ತ ಗಬ್ಬು ನಾರುತ್ತಿರುವ ವಾಸನೆಗೆ ಮೂಗು ಮುಚ್ಚಿಕೊಳ್ಳುವ ಸ್ಥಿತಿ ಇದೆ.

ಪ್ರಯಾಣಿಕರನ್ನು ತುಂಬಿಸಿಕೊಂಡ ನಂತರ ಗ್ರಾಮಾಂತರ ಬಸ್ ನಿಲ್ದಾಣದಿಂದ ಹೊರಡುವ ಮುಂಭಾಗವೇ ಕೊಳಚೆ ನೀರಿನ ಗುಂಡಿ ಬಾಯಿ ತೆರೆದುಕೊಂಡಿದ್ದು, ಅದರ ಪಕ್ಕದಲ್ಲಿ ಒಂದು ಸ್ಲ್ಯಾಬ್ ಹಾಗೂ ಅದಕ್ಕೆ ಅಡ್ಡಲಾಗಿ ಒಂದು ಬ್ಯಾರಿಕೇಡ್ ನಿಲ್ಲಿಸಿದ್ದಾರೆ ಅದು ಏನು ಪ್ರಯೋಜವಿಲ್ಲದಂತಿದೆ. ಸ್ಲ್ಯಾಬ್ ಬಳಿಯೇ ಕೊಳಚೆ ನೀರು ತುಂಬಿರುವ ಗುಂಡಿಯಿದ್ದು, ಅದು ಮೂರು ತಿಂಗಳಿನಿಂದಲೂ ಅದೇ ರೀತಿ ಇದೆ. ಯಾರಿಗೆ ಹೇಳಿದರೂ ಏನು ಪ್ರಯೋಜನವಾಗಿಲ್ಲ. ಸಣ್ಣ ಪುಟ್ಟ ಮಕ್ಕಳು ನೋಡದೆ ಕಾಲಿಟ್ಟರೆ ಏನಾದರೂ ಅನಾಹುತವಾಗುತ್ತದೆ ಎಂದು ಸ್ಥಳೀಯ ವ್ಯಾಪಾರಿಗಳು ಆತಂಕ ವ್ಯಕ್ತಪಡಿಸಿದರು.

ಯುಜಿಡಿ ನೀರಿನ ಗುಂಡಿ : ಇದು ಒಂದು ಭಾಗವಾದರೆ ಮತ್ತೊಂದೆಡೆ ರಸ್ತೆ ವಿಭಜಕಗಳ ನಡುವೆ ಇರುವ ಬೃಹತ್ ಮರಗಳ ಕೆಳಗೆ ಯುಜಿಡಿ ನೀರಿನ ಗುಂಡಿಯೇ ನಿರ್ಮಾಣವಾಗಿದೆ. ಈ ಒಳಚರಂಡಿ ನೀರು ಎಲ್ಲಿಂದ ಬರುತ್ತಿದೆ ಎಂಬುದು ಯಾರಿಗೂ ಗೊತ್ತಿಲ್ಲ. ನಿರಂತರವಾಗಿ ಒಳಚರಂಡಿ ನೀರು ಬೃಹತ್ ಮರಗಳ ಕೆಳಗೆ ಹರಿದು ಯುಜಿಡಿ ನೀರಿನಿಂದ ಗುಂಡಿ ತುಂಬಿಕೊಂಡಿದೆ

ರಸ್ತೆಗುಂಡಿ ಮುಚ್ಚುವ ಸಂಚಾರ ಪೊಲೀಸರು: ರಸ್ತೆಯಲ್ಲಿ ಪ್ರತಿನಿತ್ಯ ಸಾವಿರಾರು ವಾಹನಗಳು ಸಂಚರಿಸುತ್ತವೆ. ಅಂತಹ ರಸ್ತೆಯುದಕ್ಕೂ ದೊಡ್ಡ ದೊಡ್ಡ ಗುಂಡಿಗಳು ರಾಕ್ಷಸನಂತೆ ಬಾಯಿ ತೆರೆದುಕೊಂಡಿದ್ದು, ಕೆಲವೊಮ್ಮೆ ವಾಹನ ಸವಾರರು ಬಿದ್ದು ಗಾಯಗೊಂಡಿರುವ ಘಟನೆಗಳು ನಡೆದಿದೆ. ಮಳೆ ಸುರಿಯುವ ಸಂದರ್ಭದಲ್ಲಂತೂ ಈ ರಸ್ತೆಯಲ್ಲಿ ಸಂಚರಿಸುವುದೇ ಕಷ್ಟಕರವಾಗಿದೆ. ಇದನ್ನು ಗಮನಿಸಿದ ಸಂಚಾರ ಪೊಲೀಸರೇ ಸ್ವಯಂ ಪ್ರೇರಿತವಾಗಿ ದೊಡ್ಡ ಗುಂಡಿಗಳಿಗೆ ಕಟ್ಟಡದ ತ್ಯಾಜ್ಯಗಳನ್ನು ಹಾಕಿಸಿ ತಕ್ಕ ಮಟ್ಟಿಗೆ ಗುಂಡಿಯನ್ನು ಮುಚ್ಚಿದ್ದಾರೆ. ಮೈಸೂರು ನಗರದ ಬಸ್ ನಿಲ್ದಾಣದ ಸುತ್ತಮುತ್ತಲಿರುವ ಈ ಸಮಸ್ಯೆಗಳನ್ನು ಸಂಬಂಧಪಟ್ಟ ಅಧಿಕಾರಿಗಳು ಗಮನಿಸಿ ಸರಿಪಡಿಸದಿದ್ದರೆ, ಮತ್ತೆ ಮಳೆ ಆರಂಭವಾದರೆ ಅನಾಹುತಗಳು ಸಂಭವಿಸುವುದಂತೂ ಖಚಿತ ಎಂದು ಸಾರ್ವಜನಿಕರು ಆತಂಕ ವ್ಯಕ್ತಪಡಿಸಿದ್ದಾರೆ.

ಲಕ್ಷಾಂತರ ರೂ. ದುರುಪಯೋಗ: ಸಹಶಿಕ್ಷಕಿ ಅಮಾನತು



ಹುಣಸೂರು, ಜೂ.3– ಅಕ್ಷರ ದಾಸೋಹ ಯೋಜನೆಯ ಲಕ್ಷಾಂತರ ರೂ. ದುರುಪಯೋಗ ಮಾಡಿಕೊಂಡ ಹಿನ್ನೆಲೆಯಲ್ಲಿ ತಾಲೂಕಿನ ಹನಗೋಡು ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರೌಢ ಶಾಲೆ ಸಹ ಶಿಕ್ಷಕಿ ಎಸ್. ಅಂಜಲಿ ಮಾರಿಸ್ ಅವರನ್ನು ಡಿಡಿಪಿಐ ರಾಮಚಂದ್ರರಾಜೇ ಅರಸ್ ಅಮಾನತು ಗೊಳಿಸಿ ಆದೇಶ ಹೊರಡಿಸಿದ್ದಾರೆ.

ಎಸ್.ಅಂಜಲಿ ಮಾರಿಸ್ ಅವರು ಈ ಹಿಂದೆ ಹನಗೋಡು ಶಾಲೆಯಲ್ಲಿ ಪ್ರಭಾರಿ ಮುಖ್ಯ ಶಿಕ್ಷಕರಾಗಿದ್ದ ವೇಳೆ ಮಕ್ಕಳ ಅಕ್ಷರ ದಾಸೋಹ–ಬಿಸಿಯೂಟ ಯೋಜನೆಯಡಿ ಹಂತಹಂತವಾಗಿ 4,42,483 ರೂ.ಗಳನ್ನು ದುರುಪಯೋಗಪಡಿಸಿಕೊಂಡಿರುವುದು ಅಕ್ಷರ ದಾಸೋಹದ ಶಿಕ್ಷಣಾಧಿಕಾರಿಗಳ ತನಿಖೆಯಿಂದ ಬೆಳಕಿಗೆ ಬಂದಿದ್ದು, ವರದಿ ಆಧಾರದ ಮೇಲೆ ಶಿಕ್ಷಣ ಇಲಾಖೆ ಕಾರಣ ಕೇಳಿ ನೀಡಿದ್ದ ನೋಟಿಸ್‌ಗೆ ಶಿಕ್ಷಕಿ ಅಂಜಲಿ ದುರುಪಯೋಗಪಡಿಸಿಕೊಂಡಿರುವ ಹಣವನ್ನು ಶಾಲೆಯ ಅಕ್ಷರ ದಾಸೋಹ ಖಾತೆಗೆ ಜಮೆ ಮಾಡಲು ಒಪ್ಪಿಕೊಂಡು ತಪ್ಪೊಪ್ಪಿಗೆ ಪತ್ರ ಸಲ್ಲಿಸಿದ್ದಾರೆ.

ಅಂಜಲಿ ಪ್ರಭಾರ ವಹಿಸಿಕೊಂಡಿದ್ದ ಅವಧಿಯಲ್ಲಿ ಶಾಲೆಯ ಅವ್ಯವಹಾರಗಳ ಬಗ್ಗೆ ವಿಚಾರಣೆ ನಡೆಸಿ ಶಿಸ್ತು ಕ್ರಮ ವಹಿಸಲು ತೀರ್ಮಾನಿಸಿದೆ. ಬಿಸಿಯೂಟದ ಹಣ ದುರುಪಯೋಗವನ್ನು ಗಂಭೀರವಾಗಿ ಪರಿಗಣಿಸಿ, ಇಲಾಖಾ ವಿಚಾರಣೆಯನ್ನು ಕಾಯ್ದಿರಿಸಿ ಶಿಕ್ಷಕಿಯನ್ನು ಅಮಾನತು ಗೊಳಿಸಲಾಗಿದೆ ಎಂದು ಡಿಡಿಪಿಐ ತಿಳಿಸಿದ್ದಾರೆ.

ಟಿವಿಎಸ್ ಮೊಪೆಡ್‌ಗಳನ್ನೇ ಕಳವು ಮಾಡುತ್ತಿದ್ದವನ ಬಂಧನ

- ನಂಜನಗೂಡು ಪೊಲೀಸರ ಯಶಸ್ವಿ ಕಾರ್ಯಾಚರಣೆ
- ಬಂಧಿತನಿಂದ 6.25 ಲಕ್ಷ ರೂ. ಮೌಲ್ಯದ 27 ಮೊಪೆಡ್‌ಗಳ ವಶ

ನಂಜನಗೂಡು, ಜೂ. 3(ಸುದರ್ಶನ್)– ಟಿವಿಎಸ್ ಮೊಪೆಡ್‌ಗಳನ್ನೇ ಗುರಿಯಾಗಿಸಿಕೊಂಡು ಕಳ್ಳತನ ಮಾಡುತ್ತಿದ್ದ ಬೈಕ್ ಕಳ್ಳನನ್ನು ಬಂಧಿಸುವಲ್ಲಿ ನಂಜನಗೂಡು ಪೊಲೀಸರು ಯಶಸ್ವಿಯಾಗಿದ್ದು, ಆತನಿಂದ 6.25 ಲಕ್ಷ ಮೌಲ್ಯದ 27 ಟಿ.ವಿ.ಎಸ್. ಮೊಪೆಡ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ.

ತಾಲೂಕಿನ ಕಂದೇಗಾಲ ಗ್ರಾಮದ ಸಿದ್ದರಾಜು ಅಲಿಯಾಸ್ ಹೊರೆಯಾಲ ಸಿದ್ದ ಬಂಧಿತ ಆರೋಪಿ. ಜಮೀನಿಗೆ ತೆರಳುತ್ತಿದ್ದ ರೈತರ ಟಿ.ವಿ.ಎಸ್.ಮೊಪೆಡ್‌ಗಳನ್ನು ನಕಲಿ ಕೀಗಳನ್ನು ಬಳಸಿಕೊಂಡು ಕಳ್ಳತನ ಮಾಡಿ ಪುಡಿಗಾಸಿಗೆ ಮಾರಾಟ ಮಾಡುತ್ತಿದ್ದ ಎನ್ನಲಾಗಿದೆ.

ಹೆಚ್ಚಾಗುತ್ತಿದ್ದ ಮೊಪೆಡ್ ಕಳ್ಳತನ ಪ್ರಕರಣ ಭೇದಿಸಲು ಎಸ್ಪಿ ಚೇತನ್ ಅವರ ಆದೇಶದಂತೆ ವೃತ್ತ ನಿರೀಕ್ಷಕ ಲಕ್ಷ್ಮಿಕಾಂತ ತಳವಾರ್ ಮಾರ್ಗದರ್ಶನದಲ್ಲಿ ಅಪರಾಧ ವಿಭಾಗದ ಸಬ್‌ಇನ್ಸ್‌ಪೆಕ್ಟರ್ ಚೆಲುವಯ್ಯ ಹಾಗೂ ಸಬ್‌ಇನ್ಸ್‌ಪೆಕ್ಟರ್ ವಿಜಯರಾಜು ನೇತೃತದಲ್ಲಿ ತಂಡವನ್ನು



ರಚಿಸಲಾಗಿತ್ತು. ಜೂ 2 ರಂದು ನಗರದ ಬೈಪಾಸ್ ರಸ್ತೆಯ ಹೆಜ್ಜಿಗೆ ಸೇತುವೆ ಬಳಿ ವಾಹನ ತಪಾಸಣೆ ನಡೆಸುವಾಗ ಆರೋಪಿ ಸಿದ್ದರಾಜು ಪೊಲೀಸರಿಗೆ ಸಿಕ್ಕಿ ಬಿದ್ದಿದ್ದಾನೆ.

ಆರೋಪಿಯನ್ನು ಪೊಲೀಸ್ ಠಾಣೆಗೆ ಕರೆತಂದು ವಿಚಾರಣೆಗೊಳಪಡಿಸಿದಾಗ ನಂಜನಗೂಡು ಪಟ್ಟಣ ವ್ಯಾಪ್ತಿಯಲ್ಲಿ 2, ಚಾಮರಾಜನಗರ ಟೌನ್‌ನಲ್ಲಿ 2, ಗುಂಡ್ಲುಪೇಟೆ ಟೌನ್‌ನಲ್ಲಿ 23 ಟಿವಿಎಸ್ ಮೊಪಡ್‌ಗಳನ್ನು ಕಳ್ಳತನ ಮಾಡಿರುವುದಾಗಿ ಒಪ್ಪಿಕೊಂಡಿದ್ದಾನೆ.

ದ್ವಿಚಕ್ರ ವಾಹನ ಕಳ್ಳತನ ಪ್ರಕರಣ ಪತ್ತೆ ಹಚ್ಚಿದ ಪಿಎಸ್ಸೈ ಚೆಲುವರಾಜು ಮತ್ತು ತಂಡಕ್ಕೆ ಎಸ್ಪಿ ಚೇತನ್ 5 ಸಾವಿರ ಬಹುಮಾನ ಘೋಷಿಸಿ ಪ್ರಶಂಸೆ ವ್ಯಕ್ತಪಡಿಸಿದ್ದಾರೆ. ತಂಡದಲ್ಲಿ ಎಎಸ್‌ಐ ಹಫೀಜುಲ್ಲಾ ಷರೀಪ್, ಪೇದೆಗಳಾದ ಸುಶೀಲ್‌ಕುಮಾರ್, ನಾಗೇಂದ್ರ, ಚೇತನ್‌ಕುಮಾರ್ ಇದ್ದರು.

ದೊಡ್ಡಮ್ಮ–ಚಿಕ್ಕಮ್ಮ ರಥೋತ್ಸವ



ಬೆಟ್ಟದಪುರ, ಜೂ.3– ಪಿರಿಯಾಪಟ್ಟಣ ತಾಲೂಕಿನ ಬೆಟ್ಟದಪುರ ಹೋಬಳಿ ಕೊಣಸೂರು ಗ್ರಾಮದಲ್ಲಿ ದೊಡ್ಡಮ್ಮ ಚಿಕ್ಕಮ್ಮ ರಥೋತ್ಸವ ಶುಕ್ರವಾರ ನೆರವೇರಿತು. ಶಾಸಕ ಕೆ.ಮಹದೇವ್ ಅವರು ರಥೋತ್ಸವಕ್ಕೆ ಚಾಲನೆ ನೀಡಿದರು.

ನಂತರ ಶಾಸಕರನ್ನು ಗ್ರಾಮಸ್ಥರು ಶಿವಕುಮಾರಸ್ವಾಮಿ ಅವರ ಭಾವಚಿತ್ರವನ್ನು ನೀಡಿ ಗೌರವಿಸಿದರು. ಕೋಮು ಸಾಮರಸ್ಯದ ಏಕೈಕ ಗ್ರಾಮ ಕೊಣಸೂರು ಸವರ್ಣೀಯರು ದೊಡ್ಡಮ್ಮನನ್ನು ತಂದರೆ ದಲಿತರು ಚಿಕ್ಕಮ್ಮ ದೇವರನ್ನು ತಂದು ರಥದಲ್ಲಿ ಕೂರಿಸಿ ಪೂಜೆ ಮಾಡುವುದು ವಿಶೇಷ. ಅಲ್ಲದೆ ಎಲ್ಲಾ ಜನಾಂಗದವರು ಒಟ್ಟುಸೇರಿ ದೇವರನ್ನು ಕೆರೆಯಲ್ಲಿ ಸ್ವಚ್ಛ ಮಾಡಿ ಗಂಗಾದೇವಿಯನ್ನು ಪೂಜಿಸಿ ನಂತರ ಎಲ್ಲಾ ಕೋಮಿನವರು ಸೇರಿ ಒಮ್ಮತದಿಂದ ರಥೋತ್ಸವಕ್ಕೆ ದೇವರನ್ನು ಕೂರಿಸಿ ಪೂಜೆ ಮಾಡುತ್ತಾರೆ. ನಂತರ ರಥೋತ್ಸವ ಊರ ಹೊರಭಾಗದಲ್ಲಿರುವ ಚಿಕ್ಕಮ್ಮ ಮತ್ತು ದೊಡ್ಡಮ್ಮ ದೇವರ ದೇವಸ್ಥಾನಕ್ಕೆ ರಥೋತ್ಸವನ್ನು ಎಳೆದುಕೊಂಡು ಜೈಕಾರ ಮತ್ತು ಹಣ್ಣು ಜವನದೊಂದಿಗೆ ರಥೋತ್ಸವವನ್ನು ದೇವಸ್ಥಾನಕ್ಕೆ ಬರಮಾಡಿಕೊಂಡರು.

ಈ ಸಂದರ್ಭದಲ್ಲಿ ಬಿಜೆಪಿ ಮುಖಂಡ ಕಾ.ಪು.ಸಿದ್ದಲಿಂಗಸ್ವಾಮಿ, ಮೈಮುಲ್ ನಿರ್ದೇಶಕ ಅಶೋಕ್ ಕುಮಾರ್, ಜಾನಪದ ವಿವಿ ಸದಸ್ಯ ವಸಂತಕುಮಾರ್, ತಾಪಂ ಮಾಜಿ ಉಪಾಧ್ಯಕ್ಷ ಯೋಗೇಶ್, ಶಿವಪ್ಪ, ಆನಂದ್, ವೀರಪ್ಪ, ಮಹದೇವ್, ನಾಗರಾಜ್, ಶಿಕ್ಷಕ ಚಂದ್ರಪ್ಪ ಭಾಗವಹಿಸಿದ್ದರು. ಅಲ್ಲದೆ ಗ್ರಾಮದಿಂದ ಮದುವೆಯಾಗಿ ಹೋದಂತಹ ನವಜೋಡಿಗಳು ಸಹ ಈ ಜಾತ್ರೋತ್ಸವದಲ್ಲಿ ಪಾಲ್ಗೊಂಡಿದ್ದು ವಿಶೇಷವಾಗಿತ್ತು.

ಸರಗೂರಲ್ಲಿ ಬಿಜೆಪಿ ಅಭ್ಯರ್ಥಿ ಪರ ಮತಯಾಚನೆ

ಸರಗೂರು, ಜೂ.3 (ನಾಗೇಶ್)– ಪಟ್ಟಣದಲ್ಲಿ ಶುಕ್ರವಾರ ಬಿಜೆಪಿ ಮಹಿಳಾ ಮೋರ್ಚಾ ಕಾರ್ಯಕರ್ತರಿಂದ ದಕ್ಷಿಣ ಪದವೀಧರ ಕ್ಷೇತ್ರದಿಂದ ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿರುವ ಮೈ.ವಿ.ರವಿಶಂಕರ್ ಪರ ಬಿಜೆಪಿ ಮಹಿಳಾ ಮೋರ್ಚಾ ಕಾರ್ಯಕರ್ತರು ಪಟ್ಟಣದಲ್ಲಿ ಮತಯಾಚನೆ ಮಾಡಿದರು.



ಮೈಸೂರು ಗ್ರಾಮಾಂತರ ಪ್ರಭಾರಿ ಕು.ನಿಶ್ಚಿತ ಮಾತನಾಡಿ, ಮೊದಲ ಪ್ರಾಶಸ್ತ್ಯದ ಮತಗಳಿಂದಲೇ ಮೈ.ವಿ.ರವಿಶಂಕರ್ ಗೆಲುವು ನಿಶ್ಚಿತ. ಕೇಂದ್ರ ಮತ್ತು ರಾಜ್ಯದಲ್ಲಿ ಬಿಜೆಪಿ ಸರಕಾರ ಆಡಳಿತ ನಡೆಸುತ್ತಿದ್ದು, ಜನಪರವಾಗಿ ಉತ್ತಮವಾದ ಕೆಲಸ ಮಾಡುತ್ತಿದೆ. ಇದಲ್ಲದೆ ಪದವೀಧರರ ಸಮಸ್ಯೆಗಳನ್ನು ಅರಿತ ಮೈ.ವಿ.ರವಿಶಂಕರ್ ಅವರನ್ನು ಈ ಬಾರಿ ಬೆಂಬಲಿಸಿ, ಮೊದಲ ಪ್ರಾಶಸ್ತ್ಯದ ಮತ ನೀಡಬೇಕು. ಆ ಮೂಲಕ ಅವರ ಗೆಲುವಿಗೆ ಸಹಕರಿಸಬೇಕು ಎಂದು ತಿಳಿಸಿದರು.

ಜಿಲ್ಲಾ ಕಾರ್ಯಕಾರಿಣಿ ಸದಸ್ಯೆ ಸುನಂದರಾಜ್ ಮಾತನಾಡಿ, ಸರಕಾರ ಪದವೀಧರ ಯುವಕರಿಗೆ ವಿವಿಧ ಕೌಶಲ್ಯ ತರಬೇತಿ ನೀಡುತ್ತಿದೆ. ಇದರೊಂದಿಗೆ ರೈತರ ಕೃಷಿಗೆ ಪೂರಕವಾಗಿ ಕೆಲಸ ಮಾಡುತ್ತಿದೆ. ರೈತರ ಮಕ್ಕಳಿಗೆ ವಿದ್ಯಾರ್ಥಿವೇತನ ಸೇರಿದಂತೆ ನಾನಾ ಸೌಲಭ್ಯಗಳನ್ನು ನೀಡುವಲ್ಲಿ ಮುಂದಾಗಿದೆ. ಹೀಗಾಗಿ ಪದವೀಧರರು ಯಾವುದೇ ಆಸೆ ಆಮಿಷಕ್ಕೆ ಬಲಿಯಾಗದೆ ಮತದಾನ ಮಾಡಬೇಕು ಎಂದರು.

ಜಿಲ್ಲಾ ಮಹಿಳಾ ಮೋರ್ಚಾ ಅಧ್ಯಕ್ಷೆ ಮಂಜುಳಾ, ಪ್ರಧಾನ ಕಾರ್ಯದರ್ಶಿ ಸವಿತಾ ಚವಾಣ್, ನಳಿನಿ ಪ್ರಮಲ್ಲಾ, ಯಮುನಾ, ಸುನಂದರಾಜ್, ನಾಗರಾಜರಾಮ್, ಸತ್ಯನಾರಾಯಣ್, ಪಟ್ಟಣ ಪಂಚಾಯಿತಿ ಅಧ್ಯಕ್ಷೆ ರಾಧಿಕಾ ಶ್ರೀನಾಥ್, ಉಪಾಧ್ಯಕ್ಷ ವಿನಾಯಕ ಪ್ರಸಾದ್, ಸದಸ್ಯರಾದ ವೀರೇಶ್, ನೂರಾಳಸ್ವಾಮಿ, ಮುಖಂಡರಾದ ಶ್ರೀನಾಥ್, ವಿವೇಕ್, ಚನ್ನಪ್ಪ, ಜೆಎಸ್‌ಎಸ್ ಮುಖ್ಯ ಶಿಕ್ಷಕರಾದ ಮಹ ಮದ್ ಅಂಜುಂಪಾಷ, ಗಂಗಾಧರ್, ಅಶೋಕ್ ಇನ್ನಿತರರಿದ್ದರು.

ತಂಬಾಕು ಮಂಡಳಿ ನಿರ್ದೇಶಕರಾಗಿ ಹೆಚ್.ಸಿ. ಬಸವರಾಜು ನೇಮಕ



ಪಿರಿಯಾಪಟ್ಟಣ, ಜೂ.3– ಮಾಜಿ ಶಾಸಕ ಹೆಚ್.ಸಿ. ಬಸವರಾಜ್ ಅವರನ್ನು ತಂಬಾಕು ಮಂಡಳಿ ನಿರ್ದೇಶಕರಾಗಿ ನೇಮಕ ಮಾಡಲಾಗಿದೆ. ತಾಲೂಕಿನ ಪ್ರಮುಖ ವಾಣಿಜ್ಯ ಬೆಳೆ ತಂಬಾಕು. ತಂಬಾಕು ಬೆಳೆಗಾರರು ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದ್ದು, ಅದರ ಪರಿಹಾರಕ್ಕಾಗಿ ಹೋರಾಟ ಮಾಡಿದ ಮಾಜಿ ಶಾಸಕ ಎಚ್.ಸಿ. ಬಸವರಾಜ್ ಅವರನ್ನು ಇದೀಗ ತಂಬಾಕು ಮಂಡಳಿ ನಿರ್ದೇಶಕರನ್ನಾಗಿ ನೇಮಕ ಮಾಡಲಾಗಿದೆ. ಇದರಿಂದ ಪಿರಿಯಾ ಪಟ್ಟಣ ತಾಲೂಕಿನ ರೈತರಿಗೆ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಹೆಚ್ಚಿನ ಶಕ್ತಿ ಬಂದಂತಾಗಿದೆ ಎಂದು ತಾಲೂಕಿನ ಜನತೆ ತಿಳಿಸಿದ್ದಾರೆ.

ಹಂಪಾಪುರ ಪಿಹೆಚ್‌ಸಿಯಲ್ಲಿ ಫಿಶ್‌ಟ್ಯಾಂಕ್ ಉದ್ಘಾಟನೆ



ಹಂಪಾಪುರ, ಜೂ.3(ರಾಜೇಶ್)– ಹೆಚ್.ಡಿ.ಕೋಟೆ ತಾಲೂಕಿನ ಹಂಪಾಪುರ ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ನೂತನವಾಗಿ ನಿರ್ಮಿಸಿರುವ ಫಿಶ್‌ಟ್ಯಾಂಕ್ ಅನ್ನು ಜಿಲ್ಲಾ ರೋಗ ವಾಹಕ ಆಶ್ರಿತ ರೋಗಗಳ ನಿಯಂತ್ರಣ ಅಧಿಕಾರಿ ಡಾ.ಚಿದಂಬರ ಉದ್ಘಾಟಿಸಿದರು.

ಬಳಿಕ ಮಾತನಾಡಿದ ಅವರು, ಫಿಶ್ ಟ್ಯಾಂಕ್‌ಗಳಿಗೆ ಗಂಬೂಸಿಯ ಮೀನುಗಳನ್ನು ಬಿಡಲಾಗಿದೆ. ಇವು ಲಾರ್ವಗಳನ್ನು ತಿನ್ನುತ್ತವೆ. ಇದರಿಂದ ಸೊಳ್ಳೆ ಉತ್ಪತ್ತಿ ಕಡಿಮೆಯಾಗಿ ಡೆಂಗ್ಯೂ ಮತ್ತು ಚಿಕನ್‌ಗೂನ್ಯ ರೋಗ ತಡೆಗಟ್ಟಬಹುದು ಎಂದರು. ಗ್ರಾಮಗಳಲ್ಲಿ ಲಾರ್ವಾ ಸಮೀಕ್ಷೆ ಮಾಡಿ ಲಾರ್ವಾಗಳನ್ನು ಸಂಗ್ರಹಿಸಿ ತೊಟ್ಟಿಗೆ ಬಿಡುವುದರಿಂದ ಮೀನುಗಳಿಗೆ ಆಹಾರವಾಗುತ್ತದೆ. ಮೀನು ಗಳು ಲಾರ್ವಾ ತಿಂದು ತನ್ನ ಸಂತಾನೋತ್ಪತ್ತಿ ಹೆಚ್ಚಿಸುತ್ತಿದೆ. ಈ ಮೀನುಗಳನ್ನು ಗ್ರಾಮದ ಕೆರೆ, ಕಟ್ಟೆಗಳು, ಬಾವಿಗಳಿಗೆ ಬಿಡಲಾಗುತ್ತದೆ ಎಂದು ತಿಳಿಸಿದರು. ಬಳಿಕ ಚಿಕ್ಕನಂದಿ, ಮಾದಾಪುರ, ಕೆ.ಬೇಳ್ತೂರ್, ಹೆಬ್ಬಲಗುಪ್ಪೆ, ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೂ ಭೇಟಿ ನೀಡಿ ಫಿಶ್ ಟ್ಯಾಂಕ್‌ಗಳನ್ನು ಉದ್ಘಾಟಿಸಿದರು. ಈ ವೇಳೆ ತಾಲೂಕು ಆರೋಗ್ಯಾಧಿಕಾರಿ ಡಾ.ಟಿ.ರವಿ ಕುಮಾರ್, ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರಗಳ ವೈದ್ಯಾಧಿಕಾರಿಗಳು, ಜಿಲ್ಲಾಮಟ್ಟದ ಕೀಟ ಶಾಸ್ತ್ರಜ್ಞ ರತ್ನ ಕುಮಾರಿ, ಹಿರಿಯ ಆರೋಗ್ಯ ನಿರೀಕ್ಷಣಾ ಧಿಕಾರಿ ಮಂಜುನಾಥ್, ನಾಗೇಂದ್ರ, ರವಿರಾಜ್, ಆರೋಗ್ಯ ಕೇಂದ್ರದ ಸಿಬ್ಬಂದಿ ಹಾಜರಿದ್ದರು.


ಕಾಂಗ್ರೆಸ್ ಅಭ್ಯರ್ಥಿ ಮಧು ಜಿ.ಮಾದೇಗೌಡ ಗೆಲುವು ಖಚಿತ

ಮಲ್ಕುಂಡಿ, ಜೂ.3(ಚನ್ನಪ್ಪ)– ಪದವೀಧರ ಕ್ಷೇತ್ರದ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಮಧು ಜಿ.ಮಾದೇಗೌಡ ಅವರಿಗೆ ಈ ಬಾರಿ ಗೆಲುವು ಖಚಿತ ಎಂದು ಕಾಂಗ್ರೆಸ್ ಪಕ್ಷದ ನಂಜನಗೂಡು ಬ್ಲಾಕ್ ಅಧ್ಯಕ್ಷ ಕೆ.ಜಿ.ಮಹೇಶ್ ತಿಳಿಸಿದರು.

ಮಧು ಜಿ.ಮಾದೇಗೌಡ ಮೊದಲ ಬಾರಿಗೆ ಸ್ಪರ್ಧೆ ಮಾಡಿದ್ದಾರೆ. ಅವರು ಶಿಕ್ಷಣ ಸಂಸ್ಥೆಯಲ್ಲಿ 1,500 ಶಿಕ್ಷಕರು ಕಾರ್ಯನಿರ್ವಹಿಸಿದ್ದಾರೆ. ಹಿಂದೆಲ್ಲಾ ಪಕ್ಷ ಸೋತಿದೆ ಆದರೆ ಈ ಬಾರಿ ಅವರ ಗೆಲುವು ನಿಶ್ಚಿತ ಎಂದು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಮೈಸೂರು ಭಾಗದಲ್ಲಿ 60 ಸಾವಿರ ಹಾಗೂ ಮಂಡ್ಯ ಭಾಗದಲ್ಲಿ 40 ಸಾವಿರ ಮತದಾರರಿದ್ದಾರೆ. ಈ ಎರಡು ಭಾಗದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಒಲವಿದ್ದು, ಬಿಜೆಪಿ ಸರ್ಕಾರ ನಿರುದ್ಯೋಗಿಗಳಿಗೆ ಬಹಳ ಅನ್ಯಾಯ ಮಾಡಿದೆ. ಸರ್ಕಾರದ ದುರಾಡಳಿತ ಈಗಾಗಲೇ ಮತದಾರರಿಗೆ ತಿಳಿದಿದೆ ಎಂದರು.

ಟಿಬೆಟಿಯನ್ ಕೇಂದ್ರ ಆಡಳಿತದ ಅಧ್ಯಕ್ಷ ಪೆನ್ಪಾ ತ್ಸೆರಿಂಗ್ ಬೈಲುಕುಪ್ಪೆಗೆ ಭೇಟಿ



ಬೈಲುಕುಪ್ಪೆ, ಜೂ.3(ರಾಜೇಶ್)– ಟಿಬೆಟಿಯನ್ ಕೇಂದ್ರ ಆಡಳಿತದ ಅಧ್ಯಕ್ಷ ಪೆನ್ಪಾ ತ್ಸೆರಿಂಗ್ ಬೈಲುಕೊಪ್ಪ ಶಿಬಿರಕ್ಕೆ ಭೇಟಿ ನೀಡಿದ್ದರು.

ಇಲ್ಲಿನ ಟಿಬೆಟಿಯನ್ ಸಮುದಾಯಗಳು ತಮ್ಮ ಸರ್ಕಾರದ ಅಧ್ಯಕ್ಷ ಬರುವ ಹಿನ್ನೆಲೆಯಲ್ಲಿ ಕಳೆದ ಮೂರು ದಿನಗಳಿಂದ ಸ್ವಾಗತಿಸಲು ಸಕಲ ಸಿದ್ಧತೆಗಳನ್ನು ಮಾಡಿಕೊಂಡಿದ್ದವು.

ಮಂಗಳವಾರ ಮುಂಜಾನೆ ವೇಳೆ ಪೊಲೀಸ್ ಭದ್ರತೆಯಲ್ಲಿ ಆಗಮಿಸಿದ ಟಿಬೇಟಿಯನ್ ಸರ್ಕಾರದ ಅಧ್ಯಕ್ಷರಿಗೆ ಟಿಬೆಟಿಯನ್ನರು ಹೂಗುಚ್ಛ ನೀಡಿ ಸ್ವಾಗತಿಸಿದರು.

ಬಳಿಕ ಟಿಬೆಟಿಯನ್ ಶಿಬಿರದಲ್ಲಿರುವ ದಲೈಲಾಮ ಅರಮನೆ ಆವರಣಕ್ಕೆ ತೆರಳಿ ಧರ್ಮಗುರು ದಲಾಯಿಲಾಮ ಪ್ರತಿಮೆಗೆ ಪುಷ್ಪನಮನ ಸಲ್ಲಿಸಿದರು. ಮೂಲತಃ ಬೈಲುಕುಪ್ಪೆ ಮೂರನೇ ಕ್ಯಾಂಪಿನ ನಿವಾಸಿಯಾಗಿರುವ ಪೆನ್ಪಾ ತ್ಸೆರಿಂಗ್, ಕಳೆದ ವರ್ಷ ನಡೆದ ಚುನಾವಣೆಯಲ್ಲಿ 5000ಕ್ಕೂ ಅಧಿಕ ಮತಗಳಿಂದ ಜಯ ಗಳಿಸಿದ್ದು, ತಮಗೆ ಮತ ನೀಡಿದ ಪ್ರತಿಯೊಬ್ಬರಿಗೂ ಕೃತಜ್ಞತೆ ತಿಳಿಸಿದರು.

ಶನೇಶ್ವರಸ್ವಾಮಿ ಜಯಂತಿ ಮಹೋತ್ಸವ



ಬನ್ನೂರು, ಜೂ.3(ಪ್ರಭು)– ಶನೇಶ್ವರ ಸ್ವಾಮಿ ಜಯಂತಿ ಪ್ರಯುಕ್ತ ಪಟ್ಟಣದ ಸಮೀಪದ ಸೇನಾಪತಿಹಳ್ಳಿ ಗ್ರಾಮದಲ್ಲಿ ಸೋಮವಾರ ದ್ವಾರಗೋಪುರದ ಉದ್ಘಾಟನೆ ಮತ್ತು 9 ಕಳಸ ಸ್ಥಾಪನೆ ಕಾರ್ಯಕ್ರಮ ನಡೆಯಿತು. ಬೆಳಗ್ಗೆಯಿಂದಲೇ ಹಲವು ಪೂಜಾ ಕೈಂಕರ್ಯಗಳು ನೆರವೇರಿತು. ಗಣಪತಿ ಹೋಮ, ನವಗ್ರಹ ಹೋಮ, ಮೃತ್ಯುಂಜಯ ಹೋಮ, ಕ್ಷೀರಾಭಿಷೇಕ, ಪಂಚಾಮೃತಾಭಿಷೇಕ, ಪುಷ್ಪಾರ್ಚನೆ ನಡೆಯಿತು. ಸುತ್ತಮುತ್ತಲಿನ ಗ್ರಾಮದಿಂದ ನೂರಾರು ಭಕ್ತರು ಆಗಮಿಸಿ ದೇವರ ದರ್ಶನ ಪಡೆದರು. ಮಹಾಮಂಗಳಾರತಿ ನಂತರ ಅನ್ನಸಂತರ್ಪಣೆ ಕಾರ್ಯಕ್ರಮ ನಡೆಯಿತು. ಅರ್ಚಕರಾದ ಕೃಷ್ಣಸ್ವಾಮಿ, ರಾಜೀವ್, ಗುಡ್ಡಪ್ಪ ರಾಮಚಂದ್ರ, ಚಿಕ್ಕಣ್ಣೆಗೌಡ, ರಾಮಚಂದ್ರ , ಪಾರ್ಥಸಾರಥಿ ಸೇವಾರ್ಥದಾರ ವಿಠಲ್, ಕವಿತಾ ವಿಠಲ್, ನಾಗಮ್ಮ ಸೇರಿದಂತೆ ಗ್ರಾಮದ ಮುಖಂಡರು ಉಪಸ್ಥಿತರಿದ್ದರು.

ಮೋದಿ ಜನಪ್ರಿಯ ಕಾರ್ಯಗಳು ಮೈ.ವಿ.ರವಿಶಂಕರ್ ಗೆಲುವಿಗೆ ಸಹಕಾರಿ

ತಿ.ನರಸೀಪುರ, ಜೂ.3(ಎಸ್‌ಕೆ)– ಪ್ರಧಾನಿ ಮೋದಿಯವರು ದೇಶಾದ್ಯಂತ ಮಾಡಿರುವ ಜನಪರ ಕಾರ್ಯಕ್ರಮಗಳು ದಕ್ಷಿಣ ಪದವೀಧರ ಕ್ಷೇತ್ರದ ಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿ ಮೈ.ವಿ.ರವಿಶಂಕರ್ ಗೆಲುವಿಗೆ ಸಹಕಾರಿಯಾಗಲಿದೆ ಎಂದು ಬಿಜೆಪಿ ಹಿರಿಯ ಮುಖಂಡ ಶರತ್ ಪುಟ್ಟಬುದ್ದಿ ಅಭಿಪ್ರಾಯಪಟ್ಟರು.

ವರುಣಾ ವಿಧಾನಸಭಾ ಕ್ಷೇತ್ರದ ಮೆಲ್ಲಹಳ್ಳಿ ಹಾರೋಹಳ್ಳಿ ಮಹಾಶಕ್ತಿ ಕೇಂದ್ರ ವ್ಯಾಪ್ತಿಯ ಯಡಕೊಳ ಗ್ರಾಪಂನ ಸಿದ್ದರಾಮನಹುಂಡಿ ಪ್ರೌಢಶಾಲೆ ಮತ್ತು ಕಾಲೇಜಿನಲ್ಲಿ ಬಿಜೆಪಿ ಅಭ್ಯರ್ಥಿ ಮೈ.ವಿ.ರವಿಶಂಕರ್ ಪರ ಶಿಕ್ಷಕರು ಹಾಗೂ ಪದವೀಧರರನ್ನು ಭೇಟಿ ಮಾಡಿ ಮತಯಾಚಿಸಿ, ಅವರು ಮಾತನಾಡಿದರು.

ಮೊದಲಿನಿಂದಲೂ ಕ್ಷೇತ್ರ ಬಿಜೆಪಿ ವಶದಲ್ಲಿದ್ದು, ಮೊದಲಿಗೆ ಎ.ಕೆ.ಸುಬ್ಬಯ್ಯ, ಬಿ.ಆರ್.ಕೃಷ್ಣಮೂರ್ತಿ, ಗೋ.ಮಧುಸೂದನ್ ಗೆಲುವು ಸಾಧಿಸಿದ್ದಾರೆ. ಈ ನಡುವೆ 2 ಬಾರಿ ಜೆಡಿಎಸ್‌ನ ಕೆಟಿ.ಶ್ರೀಕಂಠೇಗೌಡರು ಗೆಲುವು ಸಾಧಿಸಿರುವುದನ್ನು ಬಿಟ್ಟರೆ ಇದು ಬಹುತೇಕ ಬಿಜೆಪಿ ಕ್ಷೇತ್ರ. ಕಳೆದ ಬಾರಿ ಅತ್ಯಲ್ಪ ಮತಗಳ ಅಂತರದಿಂದ ಪರಾಭವಗೊಂಡಿದ್ದ ಮೈ.ವಿ.ರವಿಶಂಕರ್ ಅವರನ್ನು ಪಕ್ಷ ಮತ್ತೆ ಅಭ್ಯರ್ಥಿಯನ್ನಾಗಿ ಮಾಡಿದ್ದು,

ಬಿಜೆಪಿ ಮುಖಂಡ ಶರತ್ ಪುಟ್ಟಬುದ್ದಿ ಚುನಾವಣಾ ಪ್ರಚಾರ



4 ಜಿಲ್ಲೆಗಳಲ್ಲೂ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದ್ದು, ಮೈ.ವಿ.ರವಿಶಂಕರ್ ಗೆಲುವು ಖಚಿತ ಎಂದರು.

ತಾಲೂಕಿನ ಪದವೀಧರ ಮತದಾರರನ್ನು ಗ್ರಾಮಗಳಲ್ಲಿ ರಚಿಸಿರುವ ಘಟಕದ ಸದಸ್ಯರು ಭೇಟಿ ಮಾಡಿ ಮತಯಾಚಿಸಿದ್ದಾರೆ. ಪಕ್ಷದ ಹಿರಿಯ ಮುಖಂಡರೊಂದಿಗೆ ನಾವೂ ಸಹ ಇನ್ನೊಂದು ಸುತ್ತಿನ ಮತಯಾಚನೆಗೆ ತೆರಳಲಿದ್ದು, ಪಕ್ಷದ ಅಭ್ಯರ್ಥಿ ಚುನಾವಣೆಯಲ್ಲಿ ಅತಿ ಹೆಚ್ಚಿನ ಮತಗಳ ಅಂತರದಿಂದ ಗೆಲ್ಲುವಂತೆ ನೋಡಿಕೊಳ್ಳುತ್ತೇವೆ ಎಂದರು.

ಸರ್ಕಾರ ಸಿಲಿಂಡರ್ ಬೆಲೆಯನ್ನು 200 ರೂ., ಪೆಟ್ರೋಲ್, ಡೀಸೆಲ್ ದರ ಇಳಿಕೆ ಮಾಡುವ ಮೂಲಕ ಜನರ ಕಷ್ಟಗಳಿಗೆ ಸ್ಪಂದಿಸುವ ಕೆಲಸ ಮಾಡಿದೆ. ಪ್ರಧಾನಿ ಮೋದಿಯವರು ಮಾಡಿರುವ ಜನಪರ ಕಾರ್ಯಕ್ರಮಗಳು ಅಂತರ ರಾಷ್ಟ್ರೀಯ ಮಟ್ಟದಲ್ಲಿ ಭಾರತದ ಪ್ರತಿಷ್ಠೆ ಹೆಚ್ಚಿಸಿವೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಾಗೂ ಮಾಜಿ ಸಿಎಂ ಯಡಿಯೂರಪ್ಪ ಸರ್ಕಾರದಲ್ಲಿ ಆಗಿರುವ ಕೆಲಸಗಳು ಮತದಾರರಿಗೆ ತಲುಪಿದ್ದು ಇದು ನಮ್ಮ ಅಭ್ಯರ್ಥಿ ಗೆಲುವಿಗೆ ಸಹಕಾರಿಯಾಗಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಈ ವೇಳೆ ಮಾಜಿ ಎಪಿಎಂಸಿ ಸದಸ್ಯ ಕುಪ್ಪೇಗಾಲ ಶಿವಬಸಪ್ಪ, ಜಿಲ್ಲಾ ಪ್ರಕೋಷ್ಠ ಸಂಚಾಲಕ ವರಕೂಡು ಪ್ರಕಾಶ್ ಶಕ್ತಿ ಕೇಂದ್ರದ ಅಧ್ಯಕ್ಷ ರಾಜೇಶ್, ಪಿಎಲ್‌ಡಿ ಬ್ಯಾಂಕ್ ಸದಸ್ಯ ಪಿ.ಜಿ.ಹುಂಡಿ ಮಹೇಶ್ ಮತ್ತು ಪ್ರಕಾಶ್ ಕೀಳನಪುರ ಮತ್ತು ರಂಗನಾಥಪುರ ಕುಮಾರ್ ಇದ್ದರು.

ಹ್ಯಾಕನೂರು ಗ್ರಾಮದಿಂದ ಯುವತಿ ನಾಪತ್ತೆ

ತಿ.ನರಸೀಪುರ, ಜೂ.3(ಎಸ್‌ಕೆ)– ಯುವತಿಯೊಬ್ಬಳು ಕಾಣೆಯಾಗಿರುವ ಬಗ್ಗೆ ಪಟ್ಟಣ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.



ತಾಲೂಕಿನ ಹ್ಯಾಕನೂರು ಗ್ರಾಮದ ಶಂಕರಪ್ಪ ಎಂಬುವರ ಪುತ್ರಿ ರಕ್ಷಿತ(22) ಕಾಣೆಯಾಗಿರುವ ಯುವತಿ. ಕೆಲಸ ಮಾಡಿಕೊಂಡು ಮನೆಯಲ್ಲೇ ಇದ್ದ ರಕ್ಷಿತಾ ಜೂ.1ರ ಬೆಳಗ್ಗೆ 4 ಗಂಟೆ ಸಮಯದಲ್ಲಿ ಮನೆಯಿಂದ ಹೊರ ಹೋದವಳು ಮತ್ತೆ ವಾಪಸ್ ಬಂದಿಲ್ಲ. ಆಕೆ ಹ್ಯಾಕನೂರು ಗ್ರಾಮದ ಯುವಕನೊಂದಿಗೆ ಹೋಗಿರಬಹುದೆಂದು ಅನುಮಾನ ವ್ಯಕ್ತಪಡಿಸಿರುವ ತಂದೆ ಶಂಕರಪ್ಪ ಮಗಳನ್ನು ಹುಡುಕಿಕೊಡುವಂತೆ ದೂರು ನೀಡಿದ್ದಾರೆ. ಕೇಸು ದಾಖಲಿಸಿಕೊಂಡಿರುವ ಎಎಸ್‌ಐ ಭಾನು ಪ್ರಕಾಶ್ ತನಿಖೆ ಕೈಗೊಂಡಿದ್ದಾರೆ.

ದಕ್ಷಿಣ ಪದವೀಧರ ಕ್ಷೇತ್ರದಲ್ಲಿ ಹೆಚ್.ಕೆ. ರಾಮು ಗೆಲುವು ಶತಸಿದ್ಧ

ಜಿಲ್ಲಾ ಗ್ರಾಮಾಂತರ ಜೆಡಿಎಸ್ ಪ್ರಧಾನ ಕಾರ್ಯದರ್ಶಿ ಭವಿಷ್ಯ



ಭೇರ್ಯ, ಜೂ.3– ದಕ್ಷಿಣ ಪದವೀಧರ ಕ್ಷೇತ್ರದಿಂದ ಜೆಡಿಎಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿರುವ ಹೆಚ್.ಕೆ.ರಾಮು ಅವರ ಗೆಲುವು ಶತಸಿದ್ಧ ಎಂದು ಜಿಲ್ಲಾ ಗ್ರಾಮಾಂತರ ಜೆಡಿಎಸ್ ಪ್ರಧಾನ ಕಾರ್ಯದರ್ಶಿ ನಂದಿನಿ ರಮೇಶ್ ಭವಿಷ್ಯ ನುಡಿದಿದ್ದಾರೆ.

ಸಾಲಿಗ್ರಾಮ ತಾಲೂಕಿನ ಹೆಬ್ಸೂರು ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ಮಹಿಳಾ ಘಟಕದ ಜಿಲ್ಲಾಧ್ಯಕ್ಷೆ ಬೃಂದಾ ಕೃಷ್ಣೇಗೌಡ ಮತ್ತು ಇತರ ಮುಖಂಡರ ಜೊತೆ ಪಕ್ಷದ ಅಭ್ಯರ್ಥಿಯ ಪರವಾಗಿ ಮತಯಾಚಿಸಿ ಅವರು ಮಾತನಾಡಿದರು.

ಕ್ಷೇತ್ರದ ವ್ಯಾಪ್ತಿಯಲ್ಲಿ ಅಭ್ಯರ್ಥಿಯ ಪರವಾಗಿ ಉತ್ತಮ ವಾತಾವರಣವಿದ್ದು, ಪ್ರಚಾರಕ್ಕೆ ಹೋದಲ್ಲೆಲ್ಲಾ ಪ್ರಜ್ಞಾವಂತ ಪದವೀಧರ ಮತದಾರರು ಸಕಾರಾತ್ಮಕವಾಗಿ ಸ್ಪಂದಿಸುತ್ತಿದ್ದಾರೆ. ಮುಖಂಡರು ಮತ್ತು ಕಾರ್ಯಕರ್ತರು ಮತದಾರರ ಮನೆ ಮನೆಗಳಿಗೆ ತೆರಳಿ ನಮ್ಮ ಪಕ್ಷದ ತತ್ವ ಮತ್ತು ಸಿದ್ಧಾಂತವನ್ನು ತಿಳಿಸಿ ಬೆಂಬಲ ಕೋರಬೇಕು ಎಂದರು.

ಕ್ಷೇತ್ರದ ವ್ಯಾಪ್ತಿಯ ಎಲ್ಲಾ ಜಿಲ್ಲೆಗಳಲ್ಲಿಯೂ ನಮ್ಮ ಪಕ್ಷದ ಸಂಸದರು, ಶಾಸಕರು, ಪ್ರಮುಖ ಮುಖಂಡರು ಹಾಗೂ ಕಾರ್ಯಕರ್ತ ಬಂಧುಗಳು ತಂಡಗಳಾಗಿ ಸಮರೋಪಾದಿಯಲ್ಲಿ ಮತ ಯಾಚನೆ ಮಾಡುತ್ತಿದ್ದು, ಇದರ ಜತೆಗೆ ಈ ಹಿಂದೆ ಹೆಚ್.ಡಿ. ಕುಮಾರಸ್ವಾಮಿ ಅವರು ಮುಖ್ಯಮಂತ್ರಿಗಳಾಗಿದ್ದ ಅವಧಿಯಲ್ಲಿ ಮಾಡಿದ ಅಭಿವೃದ್ಧಿ ಕಾರ್ಯಗಳು ಗೆಲುವಿಗೆ ಪೂರಕವಾಗಲಿವೆ ಎಂದು ಹೇಳಿದರು. ಆನಂತರ ಅವರು ಸಾಲಿಗ್ರಾಮ ತಾಲೂಕಿನ ವಿವಿಧ ಶಾಲಾ–ಕಾಲೇಜುಗಳಿಗೆ ತೆರಳಿ ಮತ ಯಾಚನೆ ಮಾಡಿದರಲ್ಲದೆ ಪ್ರಥಮ ಪ್ರಾಶಸ್ತ್ಯದ ಮತ ನೀಡಬೇಕೆಂದು ಪದವೀಧರ ಮತದಾರರಿಗೆ ಕೋರಿಕೆ ಸಲ್ಲಿಸಿದರು.

ಗ್ರಾ.ಪಂ. ಸದಸ್ಯರಾದ ಮಹೇಂದ್ರ, ನವೀನ, ರೇಣುಕಾ ರಾಮಕೃಷ್ಣ, ಜಿಲ್ಲಾ ಜೆಡಿಎಸ್ ಮಹಿಳಾ ಘಟಕದ ಕಾರ್ಯಾಧ್ಯಕ್ಷೆ ಆಶಾ ಪುರುಷೋತ್ತಮ, ಉಪಾಧ್ಯಕ್ಷೆ ಸುಜಾತ ಪದ್ಮನಾಭ, ಕಾರ್ಯದರ್ಶಿ ಜ್ಯೋತಿ ಪುಟ್ಟಸ್ವಾಮಿ, ಜೆಡಿಎಸ್ ಮುಖಂಡರಾದ ಹರದನಹಳ್ಳಿ ರಮೇಶ್, ಆಕಾಶ್, ಸಂಜಯ್, ನವೀನ್ ಮತ್ತು ಇತರ ಮುಖಂಡರು ಹಾಗೂ ಕಾರ್ಯಕರ್ತರು ಚುನಾವಣಾ ಪ್ರಚಾರದಲ್ಲಿ ಭಾಗವಹಿಸಿದ್ದರು.

ಕದ್ದ ಬೈಕ್ ಮಾರಾಟಕ್ಕೆ ಯತ್ನ

ಇಬ್ಬರು ಇಂಜಿನಿಯರಿಂಗ್ ವಿದ್ಯಾರ್ಥಿಗಳು ಸೇರಿ ಮೂವರ ವಿರುದ್ಧ ಪ್ರಕರಣ ದಾಖಲು

ಕೊಳ್ಳೇಗಾಲ, ಜೂ.3–ಕದ್ದ ಬೈಕ್ ಮಾರಲು ಯತ್ನಿಸಿದ ಇಬ್ಬರು ಎಂಜಿನಿಯರಿಂಗ್ ವಿದ್ಯಾರ್ಥಿಗಳನ್ನು ಕೊಳ್ಳೇಗಾಲ ಗ್ರಾಮಾಂತರ ಠಾಣಾ ಪೊಲೀಸರು ಬಂಧಿಸಿದ್ದು, ಮೂವರ ವಿರುದ್ಧ ಪ್ರಕರಣ ದಾಖಲಿಸಿಕೊಂಡಿದ್ದಾರೆ. ಹನೂರು ತಾಲೂಕು ಬಂಡಳ್ಳಿ ನಿವಾಸಿ ಡಿಪ್ಲೊಮಾ ಎಂಜಿನಿಯರಿಂಗ್ ವಿದ್ಯಾರ್ಥಿ ಸಂಜಯ್ ಸಿ. ಅಲಿಯಾಸ್ ಸಂಜು ಅಲಿಯಾಸ್ ಚಿಕ್ಕ (21) ಮತ್ತು ಮೈಸೂರು ತಾಲೂಕು ಗುಂಗ್ರಾಲ್ ಛತ್ರದ ನಿವಾಸಿ ಡಿಪ್ಲೊಮಾ ಎಂಜಿನಿಯರಿಂಗ್ ವಿದ್ಯಾರ್ಥಿ ರವಿಕುಮಾರ್ ಅಲಿಯಾಸ್ ರವಿ (21) ಬಂಧನಕ್ಕೊಳಗಾದವರಾಗಿದ್ದು, ಕದ್ದ ಬೈಕ್ ಅನ್ನು ಮಾರಾಟ ಮಾಡಲು ಇವರಿಬ್ಬರು ತೆರಳುತ್ತಿದ್ದರು. ಇವರಿಗೆ ಮೂಲತಃ ಆಂಧ್ರಪ್ರದೇಶದವನಾಗಿದ್ದು, ಹಾಲಿ ಬೆಂಗಳೂರಿನಲ್ಲಿ ವಾಸವಿರುವ ಹೇಮಂತ್ ಎಂಬಾತ ಕದ್ದ ಬೈಕ್ ಅನ್ನು ಮಾರಾಟ ಮಾಡಲು ನೀಡಿದ್ದ ಎಂದು ಪ್ರಕರಣ ದಾಖಲಾಗಿದೆ.

ವಿವರ: ಕೊಳ್ಳೇಗಾಲ ಗ್ರಾಮಾಂತರ ಠಾಣೆಯ ಅಪರಾಧ ವಿಭಾಗದ ಸಬ್ ಇನ್ಸ್‌ಪೆಕ್ಟರ್ ವೀರಣ್ಣಾರಾಧ್ಯ ತಮ್ಮ ಸಿಬ್ಬಂದಿಯೊಂದಿಗೆ ಕೊಳ್ಳೇಗಾಲ–ಮಲೆಮಹದೇಶ್ವರಬೆಟ್ಟ ಮುಖ್ಯ ರಸ್ತೆಯ ದೊಡ್ಡಿಂದುವಾಡಿ ಗ್ರಾಮದ ಸರ್ಕಲ್ ಬಳಿ ಜೂನ್ 2ರಂದು ವಾಹನ ತಪಾಸಣೆಯಲ್ಲಿ ತೊಡಗಿದ್ದಾಗ ಸಂಜಯ್ ಮತ್ತು ರವಿಕುಮಾರ್ ರಾಯಲ್ ಎನ್‌ಫೀಲ್ಡ್ ಬೈಕ್‌ನಲ್ಲಿ (ಎಪಿ 39 ಎಎಕ್ಸ್ 4415) ಬಂದಿದ್ದಾರೆ. ಅವರ ಬಳಿ ಬೈಕ್‌ನ ದಾಖಲೆಗಳನ್ನು ಕೇಳಿದಾಗ ತಬ್ಬಿಬ್ಬಾಗಿದ್ದಾರೆ. ಇದು ಕಳವು ಮಾಡಿರುವ ಬೈಕ್ ಇರಬಹುದು ಎಂಬ ಅನುಮಾನದ ಮೇರೆಗೆ ತೀವ್ರ ವಿಚಾರಣೆಗೊಳಪಡಿಸಿದಾಗ ಮೂಲತಃ ಆಂಧ್ರಪ್ರದೇಶದವನಾಗಿದ್ದು, ಹಾಲಿ ಬೆಂಗಳೂರಿನಲ್ಲಿ ವಾಸವಿರುವ ಸ್ನೇಹಿತ ಹೇಮಂತ್ ಎಲ್ಲೋ ಕಳವು ಮಾಡಿರುವ ಬೈಕ್ ಅನ್ನು ಒಂದು ವಾರದ ಹಿಂದೆ ತಮಗೆ ನೀಡಿ, ಇದನ್ನು ಮಾರಾಟ ಮಾಡಿ ನೀವು ಸ್ವಲ್ಪ ಹಣ ಇಟ್ಟುಕೊಂಡು ಉಳಿಕೆ ಹಣ ನನಗೆ ತಲುಪಿಸಿ ಎಂದು ಹೇಳಿದ್ದ. ಮೈಸೂರು, ಕೊಳ್ಳೇಗಾಲ, ತಿ.ನರಸೀಪುರದಲ್ಲಿ ಬೈಕ್ ಮಾರಾಟ ಮಾಡಲು ಪ್ರಯತ್ನಿಸಿದಾಗ ದಾಖಲೆಗಳು ಇಲ್ಲದ ಕಾರಣ ಯಾರೂ ಈ ಬೈಕ್ ಅನ್ನು ಖರೀದಿಸಲಿಲ್ಲ. ಇದೀಗ ಹನೂರಿನಲ್ಲಿ ಮಾರಾಟ ಮಾಡಲು ಬೈಕ್ ಕೊಂಡೊಯ್ಯುತ್ತಿರುವುದಾಗಿ ಆರೋಪಿಗಳು ಹೇಳಿಕೆ ನೀಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಲೋನ್ ಕೊಡುವುದಾಗಿ ನರ್ಸ್‌ಗೆ 2.15 ಲಕ್ಷ ವಂಚನೆ

ಚಾಮರಾಜನಗರ, ಜೂ.3–ಬಜಾಜ್ ಫೈನಾನ್ಸ್‌ನಲ್ಲಿ ಲೋನ್ ಕೊಡುವುದಾಗಿ ತಿಳಿಸಿ ನರ್ಸ್‌ವೊಬ್ಬರಿಂದ ಗೂಗಲ್ ಪೇ ಮತ್ತು ಫೋನ್ ಪೇ ಮೂಲಕ 2.15 ಲಕ್ಷ ರೂ. ವರ್ಗಾವಣೆ ಮಾಡಿಸಿಕೊಂಡು ವಂಚನೆ ಎಸಗಿರುವ ಬಗ್ಗೆ ವರದಿಯಾಗಿದೆ. ಹನೂರು ತಾಲೂಕು ಬಸಪ್ಪನ ದೊಡ್ಡಿ ಗ್ರಾಮದ ನರ್ಸ್ ಮಂಜುಳಾ ಹಣ ಕಳೆದುಕೊಂಡವರಾಗಿದ್ದು, ಕಳೆದ ಏಪ್ರಿಲ್ 12ರಂದು ಇವರ ಮೊಬೈಲ್‌ಗೆ ಕರೆ ಮಾಡಿದ ವಂಚಕರು ಬಜಾಜ್ ಫೈನಾನ್ಸ್‌ನವರು ಎಂದು ಪರಿಚಯಿಸಿಕೊಂಡಿದ್ದು, ಲೋನ್ ಕೊಡುವುದಾಗಿ ನಂಬಿಸಿದ್ದಾರೆ. ನಂತರ ವಿವಿಧ ಬಾಬ್ತುಗಳು ಎಂದು ಹಂತ ಹಂತವಾಗಿ 2,15,638 ರೂ.ಗಳನ್ನು ಗೂಗಲ್ ಪೇ ಮತ್ತು ಫೋನ್ ಪೇ ಮೂಲಕ ಹಾಗೂ ವಿವಿಧ ಬ್ಯಾಂಕ್ ಖಾತೆಗಳಿಗೆ ವರ್ಗಾವಣೆ ಮಾಡಿಸಿಕೊಂಡು ವಂಚನೆ ಎಸಗಿದ್ದಾರೆ. ಈ ಸಂಬಂಧ ಚಾಮರಾಜನಗರ ಜಿಲ್ಲಾ ಸೆನ್ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಬೀರಿಹುಂಡಿ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗೆ ಅರ್ಜಿ ಆಹ್ವಾನ

ಮೈಸೂರು, ಜೂ.3– ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆ ವತಿಯಿಂದ ಬೀರಿಹುಂಡಿಯಲ್ಲಿ 2022–23 ನೇ ಸಾಲಿನ ಪ್ರವೇಶಕ್ಕೆ ಆಫ್‌ಲೈನ್ ಮುಖಾಂತರ ಅರ್ಜಿಯನ್ನು ಆಹ್ವಾನಿಸಲಾಗಿದ್ದು, ಆಸಕ್ತ ಅಭ್ಯರ್ಥಿಗಳು ಸಿ.ಟಿ.ಎಸ್ ಯೋಜನೆಯಡಿಯಲ್ಲಿರುವ ತಾಂತ್ರಿಕ ವೃತ್ತಿಗಳಿಗೆ ಜೂನ್ 6ರವರೆಗೆ ಸಂಸ್ಥೆಗೆ ಭೇಟಿ ನೀಡಿ ಅರ್ಜಿಯನ್ನು ಸಲ್ಲಿಸಬಹುದಾಗಿದೆ.

ಸಂಸ್ಥೆಯಲ್ಲಿ ಲಭ್ಯವಿರುವ ವೃತ್ತಿಗಳು: ಜೋಡಣೆಗಾರ 2 ವರ್ಷಗಳು, ವಿದ್ಯುತ್ ಕರ್ಮಿ 2 ವರ್ಷಗಳು, ಟಾಟಾ ಟೆಕ್ನೋಲಜಿಸ್ ವತಿಯಿಂದ 1 ವರ್ಷ ಮತ್ತು 2 ವರ್ಷಗಳ ಅವಧಿಯ ಕೌಶಲ್ಯ ತರಬೇತಿಯನ್ನು ನೀಡಲಾಗುವುದು. ಇಂಡಸ್ಟ್ರಿಯಲ್ ರೋಬೋಟಿಕ್ಸ್ ಮತ್ತು ಡಿಜಿಟಲ್ ಮ್ಯಾನುಫ್ಯಾಕ್ಚರಿಂಗ್ 1 ವರ್ಷ, ಅಡ್ವಾನ್ಸ್ಡ್ ಸಿಎನ್‌ಸಿ ಮಷಿನಿಂಗ್ 2 ವರ್ಷ. ಹೆಚ್ಚಿನ ಮಾಹಿತಿಗಾಗಿ ಸಂಸ್ಥೆಯ ಪ್ರಾಚಾರ್ಯರು ಅಥವಾ ಮೊ. ಸಂ: 9480190608 ಅನ್ನು ಸಂಪರ್ಕಿಸಬಹುದು ಎಂದು ಬೀರಿಹುಂಡಿ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯ ಪ್ರಾಚಾರ್ಯರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಂದೇಶದ ಮೂಲಕ ಮಾಹಿತಿ ಪಡೆದು ಖಾತೆಗೆ ಕನ್ನ

ಸೆನ್ ಠಾಣೆಯಲ್ಲಿ ಪ್ರಕರಣ ದಾಖಲು

ಮೈಸೂರು, ಜೂ.3–ಬ್ಯಾಂಕ್ ಖಾತೆಯ ಕೆವೈಸಿ ಕಳುಹಿಸುವಂತೆ ಮೆಸೇಜ್ ರವಾನಿಸಿ ಬ್ಯಾಂಕ್ ಖಾತೆಯಿಂದ 1.46 ಲಕ್ಷ ರೂ. ದೋಚಿದ ಬಗ್ಗೆ ಮೈಸೂರು ಜಿಲ್ಲಾ ಸೆನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಸಾಲಿಗ್ರಾಮ ಪಟ್ಟಣದ ವಿಜಯನಗರ ಬ್ಲಾಕ್ ನಿವಾಸಿ ಎಸ್.ಅನಿಲ್ ಕುಮಾರ್(40) ವಂಚನೆಗೊಳಗಾದವರಾಗಿದ್ದು, ಎಸ್‌ಬಿಐನಲ್ಲಿ ಖಾತೆ ಹೊಂದಿದ್ದ ಇವರು, ಎಸ್‌ಬಿಐ ಯೋನೋ ಆ್ಯಪ್ ಅನ್ನು ತನ್ನ ಮೊಬೈಲ್‌ಗೆ ಇನ್‌ಸ್ಟಾಲ್ ಮಾಡಿಕೊಂಡು ವ್ಯವಹರಿಸುತ್ತಿದ್ದರು. ಮೇ 29ರಂದು ಬೆಳಗ್ಗೆ ಆ್ಯಪ್ ಸರಿಯಾಗಿ ಕಾರ್ಯ ನಿರ್ವಹಿಸುತ್ತಿರಲಿಲ್ಲ. ಅದೇ ವೇಳೆ ಅವರ ಬಳಿ ಇದ್ದ ಮತ್ತೊಂದು ಮೊಬೈಲ್‌ಗೆ 'ನಿಮ್ಮ ಬ್ಯಾಂಕ್ ಕೆವೈಸಿ ಅವಧಿ ಮುಗಿದಿದೆ. ಅಪ್‌ಡೇಟ್ ಮಾಡಿ' ಎಂದು ಮೆಸೇಜ್ ಬಂದಿತ್ತು. ಅದರಂತೆ ಅವರು ತಮ್ಮ ಕೆವೈಸಿಯನ್ನು ಅಪ್‌ಡೇಟ್ ಮಾಡಿದ್ದಾರೆ. ನಂತರ ಒಮ್ಮೆ 1.22 ಲಕ್ಷ ರೂ. ಹಾಗೂ ಮತ್ತೊಮ್ಮೆ 24,995 ರೂ. ಅವರ ಖಾತೆಯಿಂದ ಕಡಿತವಾಗಿರುವ ಬಗ್ಗೆ ಮೆಸೇಜ್ ಬಂದಿದ್ದು, ಒಟ್ಟು 1,46,995 ರೂ.ಗಳನ್ನು ಅವರ ಖಾತೆಯಿಂದ ದೋಚಲಾಗಿದೆ. ಅನಿಲ್ ಕುಮಾರ್ ನೀಡಿದ ದೂರನ್ನು ದಾಖಲಿಸಿಕೊಂಡಿರುವ ಮೈಸೂರು ಜಿಲ್ಲಾ ಸೆನ್ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಮೈಸೂರು ಮಿತ್ರ
ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು